



ಶ್ರೀ ವೆಂಕಟೇಶ್ವರ ಪ್ರಾಣದಾನ ಟ್ರಸ್ಟ್

ಜೀವನದ ಸುಸ್ಥಿರ ದೇಣಿಗೆ

ತಿರುಮಲೆಯ ಶ್ರೀ ವೆಂಕಟೇಶ್ವರಸ್ವಾಮಿಯು ದಯಾಸಾಗರನಾಗಿದ್ದಾನೆ. ಕಷ್ಟದಲ್ಲಿದ್ದವರಿಗೆ, ದುಃಖದಲ್ಲಿರುವವರಿಗೆ ಆತ ಪರಿಹಾರದ ಆಶ್ರಯಸ್ಥಾನ. ನೋವು ನಷ್ಟಗಳಲ್ಲಿ ತಂಪನ್ನೆರೆಯುವ ದಿವ್ಯವಾದ ಅನುಪಮವಾದ, ಕರುಣೆ ಆತನದು.

ಶ್ರೀನಿವಾಸನ ದಿವ್ಯ ಕರುಣೆಯಿಂದ ಪ್ರೇರಿತವಾಗಿ ತಿರುಮಲ ತಿರುಪತಿ ದೇವಸ್ಥಾನಗಳು ದೀನರ, ಅಗತ್ಯವಿದ್ದವರ ನೋವು ದುಃಖಗಳನ್ನು ಪರಿಹರಿಸಲು ಹಲವಾರು ಆಸ್ಪತ್ರೆಗಳನ್ನು, ಧಾರ್ಮಿಕ ಸಂಸ್ಥೆಗಳನ್ನು ಏರ್ಪಡಿಸಿದೆ. ತಿ. ತಿ. ದೇವಸ್ಥಾನಗಳ ಪಾಲಿಗೆ ದೀನರ ದುಃಖ ದುಮ್ಮಾನಗಳ ಪರಿಹಾರವೇ ದಿವ್ಯವಾದ ಗಮ್ಯ; ಜಾತಿ, ಮತ, ಪಂಥಗಳಿಗೆ ಅತೀತವಾದ ಜೀವಂತ ಪರಂಪರೆಯಾಗಿದೆ. ತೀವ್ರತರವಾದ ಅನಾರೋಗ್ಯದಿಂದ ನರಳುವಂತಹ ದೀನ ದುಃಖಿಗಳಿಗೆ ತಕ್ಕ ಪರಿಹಾರ ನೀಡುವ ಚಿಕಿತ್ಸಾವಿಧಾನದ ಯೋಜನೆಯನ್ನು ತಿ. ತಿ. ದೇವಸ್ಥಾನಗಳು ಈಗ ಕೈಗೆತ್ತಿಕೊಂಡಿದೆ.

ಧ್ಯೇಯೋದ್ದೇಶಗಳು : ಭಾರತದ ಆಂಧ್ರಪ್ರದೇಶದಲ್ಲಿನ ತೀರ್ಥಕ್ಷೇತ್ರವಾದ ತಿರುಪತಿಯಲ್ಲಿ ನೊಂದಾಯಿತಗೊಂಡಿರುವ ತಿ. ತಿ. ದೇವಸ್ಥಾನಗಳ ಆಶ್ರಯದ ಒಂದು ಧಾರ್ಮಿಕ ಸಂಸ್ಥೆ ''ಶ್ರೀ ವೆಂಕಟೇಶ್ವರ ಪ್ರಾಣದಾನ ಟ್ರಸ್ಟ್'' ಆಗಿದ್ದು ಬಡ ರೋಗಿಗಳಿಗೆ ನೆರವು ನೀಡುವ ಲಾಭರಹಿತ ಧಾರ್ಮಿಕ ಸಂಘಟನೆಯಾಗಿದೆ.

ಈ ಯೋಜನೆಯನ್ವಯ ಪ್ರಾಣಾಪಾಯವನ್ನುಂಟುಮಾಡುವ - ಹೃದಯ, ಮೂತ್ರಪಿಂಡ, ಮೆದುಳು ರೋಗಗಳೇ ಅಲ್ಲದೆ ಕ್ಯಾನ್ಸರ್ ಮೊದಲಾದ ತೀವ್ರತರ ಖಾಯಿಲೆಗಳಿಗೆ ಹೆಚ್ಚಿನ ಹಣ ಬಯಸುವ ಚಿಕಿತ್ಸಾ ವಿಧಾನಗಳನ್ನು ಭರಿಸಲು ಶಕ್ತಿಯಿಲ್ಲದ ಬಡವರಿಗೆ ನೆರವಿನ ಕೈನೀಡಿ ಸಹಾಯ ಮಾಡಲಾಗುವುದು. ತಿ. ತಿ. ದೇವಸ್ಥಾನಗಳ ಎಲ್ಲ ಆಸ್ಪತ್ರೆಗಳಲ್ಲಿಯೂ - ಸ್ವಿಮ್ಸ್, ಬರ್ಡ್, ರೂಯಾ, ಆಸ್ಪತ್ರೆಗಳು ಹಾಗೂ ಪ್ರಸೂತಿ ಆಸ್ಪತ್ರೆಗಳಲ್ಲಿ - ಬಡವರಿಗೆ ಜಾತಿ ಮತ ಪಂಥಗಳ ಭೇದವಿಲ್ಲದೆ ನೆರವಿನ ಹಸ್ತ ಚಾಚಿ ಚಿಕಿತ್ಸೆ ನೀಡಲಾಗುತ್ತದೆ.

ಮೂತ್ರಕೋಶ ವೈಫಲ್ಯ, ಹೆಮೋಫೀಲಿಯ, ತಲಸ್ಸೆಮಿಯ, ಕ್ಯಾನ್ಸರ್ ಮೊದಲಾದ ದೀರ್ಘಕಾಲಿಕ ರೋಗಗಳ ಬಗ್ಗೆ ಸಂಶೋಧನೆ, ಪರಿಹಾರೋಪಾಯ ಪ್ರಯತ್ನಗಳಿಗೂ ಈ ಯೋಜನೆಯನ್ವಯ ಅವಕಾಶವಿದೆ. ಬಡರೋಗಿಗಳಿಗೆ ಉಚಿತವಾಗಿ ರಕ್ತ, ಕೃತಕ ಅಂಗಾಂಗಗಳು, ಫಿಜಿಯೋಥೆರಪಿ, ಮೊದಲಾದ ಪ್ರಾಥಮಿಕ ಆರೋಗ್ಯ ಪರಿಕರಗಳು, ಪರಿಪೂರಕಗಳು ದೊರೆಯುವಂತೆ ಮಾಡುವುದೇ ತಿ. ತಿ. ದೇವಸ್ಥಾನಗಳು ರೂಪಿಸಿರುವ ವಿಶೇಷವಾದ ''ಶ್ರೀ ವೆಂಕಟೇಶ್ವರ ಪ್ರಾಣದಾನ ಯೋಜನೆಯ'' ಗುರಿ.

ತಿ. ತಿ. ದೇ. ಸಹಯೋಗ : ಈ ದತ್ತಿ ನಿಧಿಯ ಸ್ವಯಂ ಪೂರ್ಣವಾಗುವಂತೆ ಮಾಡಲು ತಿ. ತಿ. ದೇವಸ್ಥಾನಗಳು ಯೋಜನೆಗೆ ಬರುವ ದಾನಗಳಿಗೆ ತಕ್ಕ ಮೂಲಬಂಡವಾಳವನ್ನು ಬಿಡುಗಡೆ ಮಾಡಲು ಯೋಜಿಸಿದೆ.

ದಾನಿಗಳಿಗೆ ದೊರೆಯುವ ಸೌಲಭ್ಯಗಳು : ಈ ಯೋಜನೆಗೆ ಐದು ಲಕ್ಷ ರೂಪಾಯಿ ಹಾಗೂ ಅಧಿಕ ಮೊತ್ತದ ಧನವನ್ನು ನೀಡುವ ದಾನಿಗಳಿಗೆ ಕೆಳಕಂಡ ರೀತಿಯ ಸೌಲಭ್ಯಗಳನ್ನು ಒದಗಿಸಲಾಗುವುದು.

1. ದಾನಿಯೂ ಸೇರಿದಂತೆ ಐವರಿಗೆ ವರ್ಷಕ್ಕೆ ಒಮ್ಮೆ ಮೂರು ದಿನಗಳು ವಿ.ಐ.ಪಿ. ದರ್ಶನವನ್ನು ವೈಕುಂಠದ ಸೆಲ್ಲಾರ್ ಮೂಲಕ ಅನುಮತಿಸಲಾಗುವುದು.
2. ದಾನಿಯ ಮೊದಲನೆಯ ದರ್ಶನ ಕಾಲದಲ್ಲಿ ಸ್ವಾಮಿ ಹಾಗೂ ಅಮ್ಮನವರ ಚಿನ್ನದ ಮುಲಾಮಿನ ರಜತ ಚಿತ್ರಗಳಿರುವ ಜ್ಞಾಪಿಕೆಯನ್ನು ನೀಡಲಾಗುವುದು.
3. ದಾನಿಗೆ ವರ್ಷಕ್ಕೆ ಒಮ್ಮೆ ಒಂದು ಉತ್ತರೀಯವನ್ನು ಬಹೂಕರಿಸಲಾಗುವುದು.
4. ತಿರುಮಲೆಯ ಸಾಮಾನ್ಯ ಅತಿಥಿಗೃಹಗಳಲ್ಲಿ ವರ್ಷಕ್ಕೆ ಒಮ್ಮೆ ಒಟ್ಟಿಗೆ ಮೂರುದಿನ ಉಚಿತವಾಗಿ (ದೊರಕುವಂತಿದ್ದ ಪಕ್ಷದಲ್ಲಿ ಶುಲ್ಕ ಸಹಿತವಾದ ವಿ.ಐ.ಪಿ. ವಸತಿ) ವಸತಿಯನ್ನು ಒದಗಿಸಲಾಗುವುದು.
5. ವೈಯಕ್ತಿಕ ದಾನಿಗಳ ಜೀವಮಾನ ಪರ್ಯಂತವೂ, ಸಂಸ್ಥೆ, ಕಂಪನಿ, ಅವಿಭಕ್ತ ದಾನಿಗಳಿಗೆ 20 ವರ್ಷವೂ ಈ ಸೌಲಭ್ಯ ಉಂಟು.




ಆದಾಯತೆರಿಗೆ ವಿನಾಯತಿ : 80 (ಜಿ) ಕಲಮಿನನ್ವಯ ದಾನಿಯು ಆದಾಯ ತೆರಿಗೆ ವಿನಾಯಿತಿ ಪಡೆಯಬಹುದು.

ವಿನಂತಿ : ಶ್ರೀ ವೆಂಕಟೇಶ್ವರ ಪ್ರಾಣದಾನ ಯೋಜನೆಗೆ ಉದಾರವಾಗಿ ವಂತಿಗೆಗಳನ್ನು ನೀಡಬೇಕೆಂದೂ ಆ ಮೂಲಕವಾಗಿ ಸಾವಿರಾರು ಹೃದಯ, ಮೂತ್ರಕೋಶ, ಮೆದುಳು ರೋಗಿಗಳಿಗೆ ನೆರವು ನೀಡಬೇಕೆಂದೂ ವಿನಂತಿಸಿಕೊಳ್ಳಲಾಗಿದೆ. ತಾವು ನೀಡುವ ಪ್ರತಿ ಕಾಣಿಕೆಯೂ ಪವಿತ್ರವಾಗಿ ಬಡವರಿಗೆ ಆಧಾರವಾಗಿ ಅವರು ಜೀವನವನ್ನು ಪರಿಪೂರ್ಣ ಆರೋಗ್ಯದಿಂದ ಕಳೆಯಲು ಅನುಕೂಲ ಮಾಡಿಕೊಡುತ್ತದೆ.

ಮಾನವ ಸಮಾಜಕ್ಕೆ ಸೇವೆ ಸಲ್ಲಿಸುವುದರಿಂದ ದೇವರ ಸೇವೆಯನ್ನು ಸಲ್ಲಿಸಿರಿ

ತಮ್ಮ ಎಲ್ಲ ದಾನಗಳೂ ಕಾರ್ಯನಿರ್ವಹಣಾಧಿಕಾರಿ ಶ್ರೀವೆಂಕಟೇಶ್ವರ ಪ್ರಾಣದಾನ ಟ್ರಸ್ಟ್ ತಿ.ತಿ.ದೇ. ತಿರುಪತಿ - ಇವರ ಹೆಸರಿನಲ್ಲಿ ಪಡೆದ ಡಿ.ಡಿ.ಯ ರೂಪದಲ್ಲಿದ್ದು, ಅವುಗಳನ್ನು ಕಳುಹಿಸಬೇಕಾದ ವಿಳಾಸ - **ಕಾರ್ಯನಿರ್ವಹಣಾಧಿಕಾರಿ ತಿ.ತಿ.ದೇ. ಆಡಳಿತ ಭವನ. ಕೆ.ಟಿ. ರಸ್ತೆ, ತಿರುಪತಿ - 517 507.**

ದಾನಿಗಳಾಗಿರಿ - ದುಃಖಿಗಳಿಗೆ ಜೀವದಾನ ಮಾಡಿರಿ.

ಆರಿದ್ದರೇನಯ್ಯ ನೀನಿಲ್ಲದೆ ॥ ಪ ॥

ಕಾರುಣ್ಯ ನಿಧಿ ಹರಿಯೆ ಕೈಯ ಬಿಡಬೇಡ ॥ ಅ.ಪ. ॥

ದುರುಳ ಕೌರವನಂದು ದೃಪದಜೆಯ ಸೀರೆಯನು
ಕರಗಳಿಂ ಸೆಳೆಯುತಿರೆ ಪತಿಗಳೆಲ್ಲ
ಗರಹೊಡೆದರಂತಿರ್ದರಲ್ಲದೆ ನರಹರಿಯೆ
ಕರುಣಿ ನೀನಲ್ಲದಿನ್ನಾರು ಕಾಯ್ದವರು ॥ 1 ॥

ಅಂದು ನೆಗಳಿನ ಬಾಧೆಯಿಂದ ಗಜ ಕೂಗಲು
ತಂದೆ ನೀ ವೈಕುಂಠದಿಂದ ಬಂದು
ಇಂದಿರೇಶನೆ ಚಕ್ರದಿಂದ ನಕ್ರನ ಬಾಯ
ಸಂದಿಯನು ಸೀಳಿ ಕೃಪೆಯಿಂದ ಸಲಹಿದೆಯೋ ॥ 2 ॥

ಅಜಮಿಳನು ಕುಲಗೆಡಲು ಕಾಲದೂತರು ಬಂದು
ನಿಜಸುತನ ಕರೆಯೆ ನೀನತಿವೇಗದಿ
ತ್ರಿಜಗದೊಡೆಯನೆ ಸಿರಿ ಪುರಂದರ ವಿಠಲ
ನಿಜದೂತರನು ಕಳುಹಿ ಕಾಯ್ದೆ ಶ್ರೀಹರಿಯೆ ॥ 3 ॥




-ಶ್ರೀ ಪುರಂದರದಾಸರು.

ಸಂದರ್ಶಿಸಿ. ಆನಂದಿಸಿ.

ಶ್ರೀ ವೆಂಕಟೇಶ್ವರಸ್ವಾಮಿ ದೇವಾಲಯ ತಿರುಮಲೆ

ವಾರ್ಷಿಕ ಬ್ರಹ್ಮೋತ್ಸವಗಳು



6-10-2002 ರಿಂದ 15-10-2002 ವರೆಗೆ

ಉತ್ಸವ ಕಾರ್ಯಕ್ರಮ

ದಿನಾಂಕ	ವಾರ	ಹಗಲು ಉತ್ಸವ	ರಾತ್ರಿ ಉತ್ಸವ
6-10-2002	ಭಾನುವಾರ		ಸೇನಾಪತಿ ಉತ್ಸವ - ಅಂಕುರಾರ್ಪಣೆ.
7-10-2002	ಸೋಮವಾರ	ಧ್ವಜಾರೋಹಣ	ದೊಡ್ಡಶೇಷವಾಹನ.
8-10-2002	ಮಂಗಳವಾರ	ಚಿಕ್ಕ ಶೇಷವಾಹನ	ಹಂಸವಾಹನ.
9-10-2002	ಬುಧವಾರ	ಸಿಂಹವಾಹನ	ಮುತ್ತಿನ ಚಪ್ಪರ ವಾಹನ
10-10-2002	ಗುರುವಾರ	ಕಲ್ಪವೃಕ್ಷವಾಹನ	ಸರ್ವಭೂಪಾಲವಾಹನ
11-10-2002	ಶುಕ್ರವಾರ	ಮೋಹಿನೀ ಅವತಾರ	ಗರುಡವಾಹನ.
12-10-2002	ಶನಿವಾರ	ಹನುಮಂತವಾಹನ ಸಂಜೆ - ವಸಂತೋತ್ಸವ ಸುವರ್ಣರಥರಂಗ ಡೋಲೋತ್ಸವ	ಗಜವಾಹನ.
13-10-2002	ಭಾನುವಾರ	ಸೂರ್ಯಪ್ರಭವಾಹನ	ಚಂದ್ರಪ್ರಭವಾಹನ.
14-10-2002	ಸೋಮವಾರ	ರಥೋತ್ಸವ	ಅಶ್ವವಾಹನ.
15-10-2002	ಮಂಗಳವಾರ	ಚಕ್ರಸ್ನಾನ	ಧ್ವಜಾವರೋಹಣ.

ಸೂಚನೆ : ಬ್ರಹ್ಮೋತ್ಸವದ ದಿನಗಳಲ್ಲಿ ದಿನವೂ ಸಾಂಸ್ಕೃತಿಕ ಕಾರ್ಯಕ್ರಮಗಳಿರುತ್ತವೆ. ಪುಸ್ತಕ ಪ್ರದರ್ಶನ ಮಾರಾಟಗಳುಂಟು.

ನೀವೂ ಬನ್ನಿ. ನಿಮ್ಮವರನ್ನೂ ಕರೆತನ್ನಿ.

ಸಪ್ತಗಿರಿ

ಸಂಪುಟ - 33 ಆಗಸ್ಟ್ 2002 ಸಂಚಿಕೆ - 3

ಆಷಾಢ - ಶ್ರಾವಣ ಸಂಚಿಕೆ

ವಿಷಯಸೂಚಿ

ಮುಖಚಿತ್ರ : ತಿರುಮಲೆಯಲ್ಲಿ ಶ್ರೀಕೃಷ್ಣಮೂರ್ತಿ.

ಹಿಂಬದಿಯಲ್ಲಿ : ಬಾಲಕೃಷ್ಣ - ಚಿತ್ರ - ಜಿ. ಚಂದ್ರಶೇಖರ್.

ಗೌರವ ಸಂಪಾದಕರು :
ಡಾ|| ಪಿ. ಕೃಷ್ಣಯ್ಯ, ಐ.ಎ.ಎಸ್.,
ಕಾರ್ಯನಿರ್ವಹಣಾಧಿಕಾರಿ,
ತಿ.ತಿ.ದೇ. ತಿರುಪತಿ.

ಸಂಪಾದಕ :
ಡಾ|| ಎನ್.ಎಸ್. ರಾಮಮೂರ್ತಿ,

ಮುದ್ರಣ :
ಐ. ಪಾರ್ವತೀಶ್ವರ ರಾವ್,
ಬಿ.ಎ., ಎಲ್.ಪಿ..ಟಿ.,
ಮ್ಯಾನೇಜರ್,
ತಿ.ತಿ.ದೇ. ಮುದ್ರಣಾಲಯ, ತಿರುಪತಿ.

ಉಪಸಂಪಾದಕ :
ಬಿ. ಎನ್. ಶ್ರೀನಿವಾಸನ್, ಎಂ.ಎ.

ಲೇಖನ/ಜಾಹೀರಾತುಗಳಿಗೆ
ಮಿಕ್ಕ ವಿವರಗಳಿಗೆ-
ಸಂಪಾದಕರು
ತಿರುಮಲೆ ತಿರುಪತಿ ದೇವಸ್ಥಾನಗಳು,
ತಿರುಪತಿ.

ಬಿಡಿ ಪ್ರತಿ ರೂ. 5/-
ವಾರ್ಷಿಕ ಚಂದಾ ರೂ. 60/-
ಆಜೀವ ಚಂದಾ ರೂ. 500/-

ಸಪ್ತಗಿರಿಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅಭಿಪ್ರಾಯಗಳು ಸಂಪಾದಕ ವರ್ಗದ, ಪತ್ರಿಕೆಯ, ಅಭಿಪ್ರಾಯಗಳೇ ಆಗಿರಬೇಕು ಎಂದಿಲ್ಲ. -ಸಂ//

ವೇಂಕಟಾದ್ರಿ ಸಮಂಸ್ಥಾನಂ ಬ್ರಹ್ಮಾಂಡೇ ನಾಸ್ತಿ ಕಿಂಚನ । ವೇಂಕಟೇಶ ಸಮೋದೇವೋ ನ ಭೂತೋ ನ ಭವಿಷ್ಯತಿ ॥

ನಿಮ್ಮೊಡನೆ ಎರಡು ಮಾತು......



ಪರಮಾತ್ಮ ಶ್ರೀಹರಿಯ ಪಟ್ಟದ ರಾಣಿ ನೀನಮ್ಮ ಎಂದರು ಹರಿದಾಸರು ಆಕೆಯನ್ನು. ತಿರುಪತಿಯ ಸಮೀಪದ ತಿರುಚಾನೂರಿನಲ್ಲಿ ನೆಲೆಸಿದ ಶ್ರೀ ಪದ್ಮಾವತೀದೇವಿ ಲಕ್ಷ್ಮೀದೇವಿಯೇ ಎಂಬುದನ್ನು ಬೇರೆಯಾಗಿ ಹೇಳಬೇಕಿಲ್ಲ. ಆಕೆ ಬೇಡಿದ ವರಗಳ ನೀಡುವ ತಾಯಿ. ಭಕ್ತರ ಪಾಲಿಗೆ ಕಲ್ಪವಲ್ಲಿ.

ಆಪದ ಹರ್ತಾರನಾದ ತಿರುಮಲೆಯ ಶ್ರೀನಿವಾಸನ ಸಂದರ್ಶನ ಮಾಡಿದವರೆಲ್ಲ ತಿರುಚಾನೂರು ಅಮ್ಮನವರನ್ನು ಸಂದರ್ಶಿಸುವುದು ವಾಡಿಕೆ. ಹಾಗೆ ಅಮ್ಮನವರ ಸಂದರ್ಶನವಾದಮೇಲೆಯೇ ಭಕ್ತರ ಯಾತ್ರೆಗೆ ಒಂದು ಅರ್ಥ, ಒಂದು ಪೂರ್ಣತೆ ಉಂಟಾಗುತ್ತದೆ ಎಂಬುದು ಹಿರಿಯರು ಹೇಳುವ ಮಾತು.

ತಿರುಪತಿಯ ವೆಂಕಟಪತಿಯ ಬಳಿಯಲ್ಲಿಯೇ ಬೆಳೆದಿರುವ ತಿರುಚಾನೂರು ಇತಿಹಾಸ ಪ್ರಸಿದ್ಧವಾದದ್ದು. ಒಂದು ಕಾಲಕ್ಕೆ ತಿರುಮಲೆಯು ಯಾತ್ರಿಕರಿಗೆ ದುರ್ಗಮವಾಗಿದ್ದಾಗ, ತಿರುಚಾನೂರಿನಲ್ಲಿಯೇ ದೇವರ ಎಲ್ಲ ಉತ್ಸವಗಳೂ ನಡೆಯುತ್ತಿದ್ದವು. ವೈಕುಂಠದ ಬಗ್ಗೆ ಬೇಸರ ಪಟ್ಟ ಲಕ್ಷ್ಮಿ ಧರೆಗಿಳಿಯಲು ಆಕೆಗಾಗಿ ಶ್ರೀನಿವಾಸನು ತಪಿಸಿದ್ದು ಇಲ್ಲಿಯೇ. ಲಕ್ಷ್ಮಿಯ ಆವಿರ್ಭಾವವನ್ನು ಅನುಕೂಲ ಮಾಡಿಕೊಡಲು ಶ್ರೀನಿವಾಸನು ತನ್ನ ಕುಂತದಿಂದ ತಾನೇ ಸ್ವತಃ ಭೂಮಿಯನ್ನಗೆದು ಪುಷ್ಕರಿಣಿಯನ್ನುಂಟುಮಾಡಿ ಅದರಲ್ಲಿ ಜಲ ತುಂಬಿ ಬಂಗಾರದ ಕಮಲಗಳನ್ನು ಸ್ಥಾಪಿಸಿ ಅವು ಮುಚ್ಚಿಕೊಳ್ಳದಂತೆ ನೋಡಿಕೊಳ್ಳಲು ದಡದಲ್ಲಿ ಸೂರ್ಯನನ್ನೂ ನಿಯುಕ್ತಿಗೊಳಿಸಿದನಂತೆ. ಅದೇ ಪದ್ಮಾಕರ - ಸರೋವರ. ಕಾಂಚನ ಪದ್ಮದಲ್ಲಿ ಕಮಲ ಮುಖಿ, ಕಮಲ ನಯನೆ, ಚರಣ ಕಮಲೆ, ಕಮಲ ಪ್ರಿಯೆ, ಸಾಕ್ಷಾತ್ಕರಿಸಿ ಬಂದಳು.

ಅಷ್ಟು ಪವಿತ್ರವಾದದ್ದು ಅಲರಮೇಲ್ ಮಂಗೆಯ ಅಲಮೇಲು ಮಂಗಾಪುರ. ಇದು ಲಕ್ಷ್ಮಿನಿಲಯ, ಶ್ರೀನಿವಾಸನ ಹೃದಯ.

ತಿರುಚಾನೂರು ಆಲಯವನ್ನು ಸಂದರ್ಶಿಸ ಬಯಸುವ ಭಕ್ತರಿಗೆ ಅಗತ್ಯವಾದ ಎಲ್ಲ ಸೌಲಭ್ಯಗಳನ್ನೂ ದೇವಸ್ಥಾನಗಳು ಒದಗಿಸುತ್ತಿದೆ. ಅಮ್ಮನವರ ಆಲಯವನ್ನು ಮತ್ತಷ್ಟು ಸುಂದರವಾಗಿ ಮನೋಹರವಾಗಿ ತಿದ್ದಬೇಕೆಂಬುದು ತಿ. ತಿ. ದೇವಸ್ಥಾನಗಳ ಅಪೇಕ್ಷೆ.

ಶ್ರೀ ಪದ್ಮಾವತೀ ಅಮ್ಮನವರ ಆಲಯವನ್ನು ಮತ್ತಷ್ಟು ಶೋಭಾಕರವನ್ನಾಗಿ ಮಾಡಲು ಆಲಯದ ವಿಮಾನಕ್ಕೆ, ಆಲಯ ಪ್ರಾಂಗಣಕ್ಕೆ, ಚಿನ್ನದ ಮುಲಾಮಿನ ರೇಕು ತೊಡಿಸಬೇಕೆಂಬ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗಿದೆ. ಅತಿ ಪವಿತ್ರವಾದ, ಮಹತ್ವ ಪೂರ್ಣವಾದ ಕಾರ್ಯಕ್ರಮ ಇದು. ಸಕಲ ಸಂಪದ ನೀಡುವ ತಾಯಿಯ ಕೋಯಿಲಿಗೆ ಕನಕ ಕಾಂತಿಯನ್ನು ಕೊಡಬೇಕು ಎಂಬಲ್ಲಿ ಕಾಣಿಕೆಯಾಗಿ, ಕೈಂಕರ್ಯವಾಗಿ ತಮ್ಮ ವಂತಿಗೆಯೂಕಲೆತುಬರಬೇಕು.

ಇದಕ್ಕಾಗಿ ಎಲ್ಲರೂ ಮುಂದೆ ಬರಬೇಕಾಗಿದೆ. ದೇಶವಿದೇಶಗಳಲ್ಲಿರುವ ಎಲ್ಲ ಭಾರತೀಯ ನಾಗರಿಕರೂ ಸೌಹಾರ್ದದಿಂದ, ಸಂತೋಷದಿಂದ, ಸಂಕಲ್ಪದಿಂದ, ಸವಾಲನ್ನೆದುರಿಸುವ ಸ್ಥಿತಿಯುಂಟಾಗಿ ದೇವಸ್ಥಾನವನ್ನು ಬಲಪಡಿಸಬೇಕಾಗಿದೆ. ಭಕ್ತರು, ತಂತ್ರಜ್ಞರು, ಉದ್ಯಮ ಪತಿಗಳು, ಪಾರಿಶ್ರಾಮಿಕ ವೇತ್ತರು ಮುಂದೆ ಬಂದು ಇಮ್ಮಡಿಯಾಗಿ ಮುಮ್ಮಡಿಯಾಗಿ ವಂತಿಗೆ ನೀಡುವಂತೆ ಆಗಬೇಕು.

ತಿರುಮಲ ತಿರುಪತಿ ದೇವಸ್ಥಾನಗಳು ಪ್ರವೇಶಗೊಳಿಸಿದ ಹಲವು ಹನ್ನೊಂದು ಕಾರ್ಯಕ್ರಮಗಳಿಗೆ ಸಾರ್ವಜನಿಕ ವಂತಿಗೆಗಳು ಸಾನುಕೂಲವಾಗಿ ಸಾದರದಿಂದ ಬಂದು ಕೂಡುತ್ತಿವೆ. ಪ್ರಾಣದಾನ, ಅನ್ನದಾನ, ಅರಣ್ಯದಾನ, ಆರೋಗ್ಯದಾನ - ಮೊದಲಾದವುಗಳಲ್ಲಿ ಭಕ್ತರು ಭಾಗಸ್ವಾಮ್ಯ ಪಡೆದಂತೆಯೇ ಈ ಒಂದು ಘನೋದ್ದೇಶದಲ್ಲಿಯೂ ದುಡಿಯಬೇಕೆಂದು ಕಳಕಳಿಯ ಪ್ರಾರ್ಥನೆ.

ಪದ್ಮಾವತೀ ದೇವಿಯ ಆಲಯವನ್ನು ಸುವರ್ಣೋಜ್ವಲಗೊಳಿಸುವ ಈ ಪ್ರಯತ್ನದಲ್ಲಿ ಭಾಗಪಡೆಯುವುದು ಭಾಗ್ಯವೇ ಅಲ್ಲವೆ. ಜಗತ್ತಿನ ತಾಯಿ ಪದ್ಮಾವತಿಗೆ ತಾವು ಚಿನ್ನವನ್ನು ನೇರವಾಗಿ ಅರ್ಪಿಸುವುದರಲ್ಲಿನ ಆನಂದವನ್ನು ವರ್ಣಿಸಲು ಸಾಧ್ಯವಿಲ್ಲ.

ಇಂತು, ತಮ್ಮವ,

ಡಾ॥ ಪಿ. ಕೃಷ್ಣಯ್ಯ, ಐ.ಎ.ಎಸ್.,
ಕಾರ್ಯನಿರ್ವಹಣಾಧಿಕಾರಿ.
ತಿ.ತಿ.ದೇ.

ಶ್ರೀಕೃಷ್ಣ ಜನ್ಮಾಷ್ಟಮಿ ಸಂದೇಶ

- ಶ್ರೀ ಶ್ರೀ ವಿಶ್ವೇಶತೀರ್ಥ ಸ್ವಾಮೀಜಿ.



ಇಂದು ಶ್ರೀಕೃಷ್ಣನು ಅವತರಿಸಿದ ಮಂಗಲಮಯ ದಿನ. ಶ್ರೀಕೃಷ್ಣ 5000 ವರ್ಷಗಳ ಪೂರ್ವದಲ್ಲಿ ಅವತರಿಸಿದರೂ ಇಂದಿಗೂ ಶ್ರೀಕೃಷ್ಣನ ಜಯಂತಿಯನ್ನು ಆಚರಿಸುತ್ತಿದ್ದೇವೆ. ಶ್ರೀಕೃಷ್ಣನ ಅವತಾರದ ಅಂದಿನ ಯುಗದಲ್ಲಿಇದ್ದ ಪರಿಸ್ಥಿತಿಯೇ ಇಂದಿಗೂ ನಮ್ಮ ಎದುರಿಗಿದೆ. ಕಂಸ, ಜರಾಸಂಧ, ದುರ್ಯೋಧನ, ನರಕಾಸುರ, ಪ್ರವೃತ್ತಿಗಳು ಇಂದಿಗೂ ನಮ್ಮೆಲ್ಲರ ಜೀವನದಲ್ಲಿ ವ್ಯಾಪಿಸಿವೆ. ತಮ್ಮ ಸ್ವಾರ್ಥಕ್ಕಾಗಿ ಅಮಾಯಕರನ್ನು ಹಿಂಸಿಸುವ, ಮತ್ತೊಬ್ಬರ ಸ್ವತ್ತನ್ನು ಅನ್ಯಾಯದಿಂದ ಕಬಳಿಸುವ ದರ್ಪ ದುರಹಂಕಾರಗಳು, ಕಾಮಾಂಧತೆ, ಸ್ವಚ್ಛಂಧತೆಯ ನಾನಾವಿಧ ದುಷ್ಟ - ಪ್ರವೃತ್ತಿಗಳನ್ನು ನಮ್ಮ ಸುತ್ತಮುತ್ತಲೂ ನಾವು ನೋಡುತ್ತಿದ್ದೇವೆ. ಇವೇ ಕಂಸ ಜರಾಸಂಧರು. ನಮ್ಮ ಜೀವನದಿಂದ ಇಂತಹ ಅಸುರೀ ಪ್ರವೃತ್ತಿಗಳನ್ನು ಉಚ್ಚಾಟಿಸಲು ವರ್ಷ ವರ್ಷವೂ ನಮ್ಮಲ್ಲಿ ಶ್ರೀಕೃಷ್ಣನ ಆವಿರ್ಭಾವವಾಗಬೇಕು. ಕಂಸನಿಗೆ ಇರುವಂತಹ ಸ್ವಾರ್ಥ ಮತ್ತು ಹಿಂಸಾ ಪ್ರವೃತ್ತಿಗೆ ಬಂದಿಯಾಗುವ ಜೀವಾತ್ಮನೇ ವಸುದೇವನು. ಅವನನ್ನು ಬಿಡುಗಡೆಗೊಳಿಸಲು ನಮ್ಮ ಹೃದಯ ಕಾರಾಗೃಹದಲ್ಲಿ ಶ್ರೀಕೃಷ್ಣನ ಅವತಾರವು ಆಗಲೇಬೇಕು. ''ಈ ಹಂತೇ ಕಾಮ ಭೋಗಾರ್ಥಮನ್ಯಾಯೇನ ಅರ್ಥ ಸಂಚಯಾನ್'' ತಮ್ಮ ಸ್ವಾರ್ಥ ಸುಖಕ್ಕಾಗಿ ಅನ್ಯಾಯ ಮಾರ್ಗದಿಂದ ಹಣಗಳಿಸುವರೆಂದು ಗೀತೆಯಲ್ಲಿ ಶ್ರೀಕೃಷ್ಣನು ನುಡಿದಂತೆ ದುರಾಸೆ, ಭ್ರಷ್ಟಾಚಾರಗಳು ನಾಡಿನಲ್ಲಿ ವ್ಯಾಪಿಸಿವೆ. ಭಗವದ್ಭಕ್ತಿ, ದೇಶಪ್ರೇಮಗಳು ಶಿಥಿಲಗೊಂಡು ಕರ್ತವ್ಯವಿಮುಖರಾಗಿ ಸ್ವಾರ್ಥ ಸಾಧನೆಗಾಗಿ ಏನನ್ನಾದರೂ ಮಾಡಲು ನಾವು ಸಿದ್ಧರಾಗಿದ್ದೇವೆ. ಇಂತಹ ಸನ್ನಿವೇಶದಲ್ಲಿ ನಮ್ಮ ಜೀವನದ ಕುರುಕ್ಷೇತ್ರದಲ್ಲಿ ಶ್ರೀಕೃಷ್ಣನು ನಮಗೆ ಸಾರಥಿಯಾಗಿ ಮಾರ್ಗದರ್ಶಕನಾಗಿ ದೊರೆಯಬೇಕಾಗಿದೆ. ಅವನ ಸಂದೇಶದಂತೆ ಭಕ್ತಿ ತ್ಯಾಗಗಳ ಹಿನ್ನೆಲೆಯಲ್ಲಿ ಭಗವಂತನ ಪ್ರೀತಿಗಾಗಿ ಸಮಾಜದ ಕಲ್ಯಾಣಕ್ಕಾಗಿ ಕರ್ತವ್ಯದಲ್ಲಿ ತೊಡಗುವ ಸ್ಫೂರ್ತಿಯು ನಮ್ಮಲ್ಲಿ ಬೆಳೆಯಲಿ. ಶ್ರೀಕೃಷ್ಣನು ಸಮಗ್ರ ದೇಶದ ಜನತೆಯನ್ನು ಅನುಗ್ರಹಿಸಲಿ.



★★★★★



ಶಿಕ್ಷಣ - ಹರೇಕೃಷ್ಣ ಪಂಥ

- ಎಸ್. ಹನುಮಂತರಾವ್.

ಭಗವದ್ಗೀತಾ ಪಠಣ, ಮನನ, ಧ್ಯಾನ, ಸಂಕೀರ್ತನೆಗಳಿಂದ ಮನಶ್ಶಾಂತಿಯನ್ನು ಪಡೆಯಬಹುದೆಂಬ ಘನ ಉದ್ದೇಶದಿಂದ ಶ್ರೀ ಭಕ್ತಿ ವೇದಾಂತ ಪ್ರಭುಪಾದರು 1966 ರಲ್ಲಿ ಶ್ರೀಕೃಷ್ಣ ಚೈತನ್ಯಸಂಘಟನೆಯನ್ನುಂಟು ಮಾಡಿದರು. ಆರಂಭವಾದ ಹತ್ತು ವರ್ಷಗಳಲ್ಲಿ ಈ ಸಂಸ್ಥೆ ಜಗತ್ತಿನಾದ್ಯಂತ ವ್ಯಾಪಕವಾಗಿ ಬೆಳೆಯಿತು. ಹರಿನಾಮ ಮಂತ್ರದ ಉಪಾಸನೆ ಮಾತ್ರವೇ ಕಲಿಯುಗದಲ್ಲಿ ಶಾಶ್ವತವಾದ ಮುಕ್ತಿಯ ಏಕೈಕ ಮಾರ್ಗವೆಂಬುದು ಇಲ್ಲಿನ ಮೂಲಸೂತ್ರವಾಗಿದೆ. ಈ ಅಂಶವು ಭಗವದ್ಗೀತೆ, ಭಾಗವತಗಳಲ್ಲಿ ಈ ಮೊದಲೇ ಉದ್ಘೋಷಿತವಾದ ಮಂತ್ರವಾಗಿದೆ ಯೆಂಬುದೂ ಸ್ಪಷ್ಟ.

ಶ್ರೀ ಪ್ರಭುಪಾದರು ತಮ್ಮ ಇಡೀ ಜೀವನವನ್ನು ಹರೇಕೃಷ್ಣ ಪಂಥದ ಪ್ರಚಾರಕ್ಕೆ ಪ್ರಸಾರಕ್ಕೆ ಮೀಸಲಿಟ್ಟರು. ಶ್ರೀಕೃಷ್ಣ ಸರ್ವೋತ್ತಮನೆಂಬುದೂ, ಸರ್ವದೇವತೆಗಳ ದೇವರೆಂಬುದೂ ಸನಾತನ ಧರ್ಮದಲ್ಲಿನ ಪ್ರಾಚೀನ ತತ್ತ್ವವೇ. ಈ ತತ್ತ್ವವನ್ನೇ ಹಲವು ಹನ್ನೊಂದು ಋಷಿ ಮುನಿ ಸಂತರು ವಿವರಿಸಿದ್ದಾರೆ. ಮುಖ್ಯವಾಗಿ ಐದು ನೂರು ವರ್ಷದ ಹಿಂದೆಯೇ ಹುಟ್ಟಿ - ಭಾರತದಲ್ಲಿ ಭಕ್ತಿ ಪಂಥದ ಆಧಾರಗಳಾದ ಸಂತರಲ್ಲಿ ಒಬ್ಬರು - ಪ್ರಖ್ಯಾತರಾದ ಚೈತನ್ಯರು. ಶ್ರೀ ಪ್ರಭುಪಾದರು ಶ್ರೀ ಚೈತನ್ಯರಿಂದ ಅವರ ತಾತ್ವಿಕ ಅನುಭಾವದಿಂದ ಸ್ಫೂರ್ತಿ ಪಡೆದವರಾದರು.

1997 ರಲ್ಲಿ ಬೆಂಗಳೂರಿನ ರಾಜಾಜಿನಗರದಲ್ಲಿ ಹರೇಕೃಷ್ಣಪಂಥದ ಶ್ರೀಕೃಷ್ಣದೇವಾಲಯವನ್ನು ನಿರ್ಮಿಸಲಾಯಿತು. ಅಂದಿನ ಭಾರತದ ರಾಷ್ಟ್ರಪತಿ ಡಾ|| ಶಂಕರದಯಾಳ ಶರ್ಮ ಅವರು ಈ ಆಲಯದ ಆರಂಭೋತ್ಸವ ನಡೆಸಿಕೊಟ್ಟರು. ಈ ಆಲಯದ ವಿಸ್ತೀರ್ಣ ಒಂದು ಲಕ್ಷ ಚದರ ಅಡಿಗಳಾಗಿದ್ದು ಒಟ್ಟು ವೆಚ್ಚ ಐವತ್ತು ಕೋಟಿ ರೂಪಾಯಿಗಳಾಗಿವೆ.

ಬೆಂಗಳೂರಿನ ಶ್ರೀ ರಾಧಾಕೃಷ್ಣದೇವಾಲಯ ಆರಂಭಿಸಿರುವ 'ಅಕ್ಷಯಪಾತ್ರೆ' ಯೋಜನೆಯು 2000 ದ ಜುಲೈ 3 ರಂದು ಆರಂಭವಾದ ಒಂದು ವಿಶಿಷ್ಟ ಯೋಜನೆ. ಇದರಿಂದಾಗಿ ಗ್ರಾಮೀಣ ಶಾಲಾ ಬಡ ಮಕ್ಕಳಿಗೆ ಮಧ್ಯಾಹ್ನದೂಟ ದೊರೆಯುವಂತೆ ಆಗುತ್ತಿದೆ. ಮೊದಲ ಹಂತದಲ್ಲಿ ಸಾವಿರದೈನೂರು ಮಂದಿಗೆ ಭೋಜನಾವಕಾಶ ನೀಡುವಂತಾಗಿ, 2000ದ ನವಂಬರ್ 11 ರ ಹೊತ್ತಿಗೆ ಹನ್ನೆರಡುಸಾವಿರ ಮಂದಿ ಶಾಲಾ ಮಕ್ಕಳಿಗೆ ಈ ಅವಕಾಶ ವಿಸ್ತಾರವಾಗಿ ಎರಡನೆಯ ಹಂತ ಆರಂಭವಾಯಿತು. ಇದನ್ನು ಕೇಂದ್ರ ಮಾನವ ಸಂಪನ್ಮೂಲಾಭಿವೃದ್ಧಿ ಸಚಿವ ಡಾ|| ಮುರಳಿಮನೋಹರ ಜೋಷಿ ಉದ್ಘಾಟಿಸಿದರು. ಈಗ ಆಲಯದ ವತಿಯಿಂದ ದಿನವೂ ಮೂವತ್ತು ಸಾವಿರ ಮಂದಿ ಮಕ್ಕಳಿಗೆ ಭೋಜನಾವಕಾಶ ದೊರೆಯುತ್ತಿದೆ. ಇದರ ವಿವರ ಹೀಗೆ - ಊಟದಲ್ಲಿ ತರಕಾರಿ ಸಹಿತವಾದ ಹುಳಿ (ಸಾಂಬಾರ್) ಪಲ್ಯ, ಮೊಸರುಗಳು ಇರುತ್ತವೆ. ಇವುಗಳ ಸಿದ್ಧತೆಗಾಗಿ ಆಲಯದ ಅಡಿಗೆಮನೆ ಶುಚಿಕರವೂ ಆರೋಗ್ಯಕರವೂ ಆದ ಪರಿಕರ ಪರಿಸರಗಳನ್ನು ಒಳಗೊಂಡಿದೆ. ಬೇರೆ ಬೇರೆ ಶಾಲಾ ವಿದ್ಯಾರ್ಥಿಗಳ ಅನುಕೂಲ ಅಗತ್ಯಗಳಿಗೆ ತಕ್ಕಂತೆ, ಅಡಿಗೆಯಾದ ಮೇಲೆ ಆಹಾರವನ್ನು ಪೊಟ್ಟಣಗಟ್ಟಿ [illegible] ಶಾಲೆಗಳಿಗೆ ಅವುಗಳನ್ನು ಊಟದ [illegible] ಸರಿಯಾಗಿ ವಿಶೇಷ[illegible] ತೆಗೆದುಕೊಂಡು ಹೋಗಿ [illegible] ಪ್ರತಿದಿನವೂ ಈ ಯೋಜನೆ[illegible] 2002 ರ ಮಧ್ಯಭಾಗದಲ್ಲಿ [illegible] ಆಹಾರವನ್ನು ಪಕ್ವಗೊಳಿಸಿ, [illegible] ಪೊಟ್ಟಣಗಟ್ಟಿ ಮಧ್ಯಾಹ್ನದ ಭೋಜನದ ಹೊತ್ತಿಗೆ ಮಕ್ಕಳಿಗೆ ದೊರೆಯುವಂತೆ [illegible] ಶಾಲೆಗೇ ತೆಗೆದುಕೊಂಡುಹೋಗಿ ನೀಡಲಾಗುತ್ತದೆ.

ಈ ಯೋಜನೆಯ ಒಟ್ಟು ಮಾಸಿಕ ವೆಚ್ಚ ಸುಮಾರು ನಲವತ್ತು ಲಕ್ಷ ರೂಪಾಯಿಗಳು. ಭಾರತದ ಭಾವೀ ನಾಗರಿಕರ ಶಿಕ್ಷಣದಲ್ಲಿನ ಒಂದು ಅತಿ ಮುಖ್ಯ ಅಂಶವನ್ನು ಗಮನಕೊಟ್ಟು ನೋಡುವ ಈ ಯೋಜನೆಗೆ ಸಾರ್ವಜನಿಕರ ಸಹಕಾರವೂ ಅಗತ್ಯ.



★★★★★

ಶ್ರೀ ಕೃಷ್ಣಾವತಾರದ ಅಂತರಾರ್ಥ

- ಸಂತ ಹರಿಹರಾನಂದ ಸರಸ್ವತೀ.




ಭಾಗವತದ ಕಂಸ - ಪರಮಹಂಸನಾದ ಪರಮಾತ್ಮ ಶ್ರೀಕೃಷ್ಣನ ಸೋದರಮಾವ. ಸ್ವತಃ ತನ್ನ ತಂಗಿಯಾದ ದೇವಕಿಯನ್ನೂ - ತಂಗಿಯ ಗಂಡನಾದ ವಸುದೇವನನ್ನೂ ನಿರ್ದಯವಾಗಿ ಕಾರಾಗೃಹಕ್ಕೆ ತಳ್ಳಿದ ಕ್ರೂರಿ. ತಂಗಿಯಾದ ದೇವಕಿಯನ್ನು ವಸುದೇವನಿಗೆ ಕೊಟ್ಟು ವಿಜೃಂಭಣೆಯಿಂದ ಮದುವೆ ಮಾಡಿ, ಅದರ ನೆನಪು ನಿರಂತರ ಉಳಿಯುವಂತೆ ಮಾಡಲು, ಅವರನ್ನು ರಥದಲ್ಲಿ ಕೂರಿಸಿ ತಾನೇ ಕುದುರೆಗಳ ಲಗಾಮು ಹಿಡಿದು ರಾಜಬೀದಿಯಲ್ಲಿ ರಥವನ್ನು ನಡೆಸಿಕೊಂಡು ಸಂಭ್ರಮದಿಂದ ಬರುತ್ತಿರುವಾಗ - ಅಶರೀರವಾಣಿಯೊಂದು,

ಎಲೈ ಮಥುರಾಧಿಪತಿಯೇ, ಸಂಭ್ರಮ ಪಡಬೇಡ. ನೀನು ಇನ್ನು ಹೆಚ್ಚುಕಾಲ ಬದುಕಲಾರೆ. ನಿನ್ನ ಈ ತಂಗಿಯಾದ ದೇವಕಿಯ ಗರ್ಭದಲ್ಲಿ ಜನಿಸುವ ಅಷ್ಟಮ ಸಂತಾನವು ನಿನ್ನನ್ನು ಕೊಲ್ಲುತ್ತದೆ - ಎಂದು ನುಡಿಯಿತು.

ಅಶರೀರವಾಣಿಯ ಮಾತಿನಿಂದ ಒಂದು ಕ್ಷಣ ಸ್ತಂಭಿತನಾದ ಕಂಸ - ಚಿಂತೆಗೊಳಗಾದ. ತಂಗಿಯ ಗರ್ಭದಲ್ಲಿ ಹುಟ್ಟುವ ಅಷ್ಟಮ ಸಂತಾನವು ನನ್ನ ಶತ್ರುವೇ! ಎಂದು ಭೀತನಾದ. ಆದರೂ ಆ ಭೀತಿಯನ್ನು ಹೊರಗೆ ತೋರಿಸಿಕೊಳ್ಳದೆ - ದೇವಕಿಗೆ ಅಷ್ಟಮ ಸಂತಾನವಾಗುವವರೆಗೆ ನಾನೇಕೆ ಕಾಯಬೇಕು ? ತಂಗಿಯನ್ನೇ ಮುಗಿಸಿಬಿಟ್ಟರೆ ಹೇಗೆ! ನನಗೆ ಶತ್ರುವೇ ಇರುವುದಿಲ್ಲ, ಎಂದು ಚಿಂತಿಸಿ, ತನಗೆ ಇರುವ ಅಲ್ಪ ಸ್ವಲ್ಪ ವಿವೇಕವನ್ನೂ ಕಳೆದುಕೊಂಡು, ದೇವಕಿಯನ್ನು ಕೊಲ್ಲಲು ಕತ್ತಿಹಿಡಿದು ಅವಳ ಮೇಲೆ ಹರಿಹಾಯ್ದ. ಕೂಡಲೇ ವಸುದೇವನು ಮಧ್ಯೆ ಪ್ರವೇಶಿಸಿ - ಅಯ್ಯಾ ಕಂಸ ಪ್ರಭುವೇ, ಸುಮ್ಮನೆ ದುಡುಕಿ ಅನಾಹುತ ಮಾಡಬೇಡ. ದೇವಕಿಯನ್ನೇಕೆ ಕೊಲ್ಲಬೇಕು? ಅವಳಲ್ಲಿ ಜನಿಸುವ ಅಷ್ಟಮ ಸಂತಾನದಿಂದ ನಿನಗೆ ಮರಣ ಎಂದಲ್ಲವೆ ಅಶರೀರವಾಣಿ ನುಡಿದದ್ದು! ಆದುದರಿಂದ ಅವಳನ್ನು ಕೊಲ್ಲಬೇಡ - ಎಂದು ವಿನಂತಿಸಿದ. ವಸುದೇವನ ಮಾತು ಸರಿ ಎನ್ನಿಸಿತು ಕಂಸನಿಗೆ.

ಅವನ (ಮಾತನ್ನು) - ಮನವಿಯನ್ನು ಮಾನ್ಯಮಾಡಿದ. ಆದರೆ - ಅವರ ಸ್ವಾತಂತ್ರ್ಯಕ್ಕೆ ಕಡಿವಾಣ ಹಾಕಿ ವಸುದೇವ - ದೇವಕಿಯರನ್ನು ಕಾರಾಗೃಹದಲ್ಲಿಟ್ಟು, ದೇವಕಿಗೆ - ಜನಿಸುವ ಎಲ್ಲ ಸಂತಾನವನ್ನೂ ಕೊಲ್ಲುವುದೆಂದು ಸಂಕಲ್ಪಿಸಿದ. ಅದರಂತೆ - ಹುಟ್ಟಿದ ಒಂದೊಂದು ಕೂಸನ್ನೂ ಕೊಲ್ಲುತ್ತಾ ಬಂದ. ಆದರೆ ದೇವಕಿಯ ಅಷ್ಟಮ ಸಂತಾನ ಮಾತ್ರ ಕಂಸನ ಕೈಗೆ ಸಿಗಲಿಲ್ಲ. ಅವನಿಗೆ



ತಿಳಿಯದಂತೆ ಅದು ಬೇರೆಡೆ ಬೆಳೆಯುತ್ತಿತ್ತು. ಅದು ''ಪರಮಹಂಸ''ವಾದುದರಿಂದ ಕಂಸನಿಗೆ ಸಿಗಲಿಲ್ಲ.

''ಕಂಸ'' ಎಂದರೆ ''ಆವರಣ'' ಎಂದರ್ಥ. ಎಂದರೆ - ''ಮಾಯೆ - ಮೋಹ - ಅಹಂ - ಮಮಕಾರ''ಗಳು ಎಂದರ್ಥವಾಗುತ್ತದೆ. ಇವುಗಳನ್ನು ಮೀರಿದವನು ''ಪರಮಹಂಸ''. ವಸುದೇವ - ದೇವಕಿಯರು - ''ನಾನು - ನನ್ನದು ಎಂಬ - ಮೋಹ - ಮಮಕಾರಗಳಿಗೆ ಸಿಲುಕಿ'' ಬಂಧನಕ್ಕೆ ಒಳಗಾಗಿದ್ದರು. (ಕಂಸನ ಹಿಡಿತದಲ್ಲಿದ್ದರು. ಈ ಆವರಣ ಅವರನ್ನು ಹೊರಗೆ ಬರದಂತೆ ಮಾಡಿತ್ತು.) ಯಾರು ಇವುಗಳನ್ನು ಮೀರಿದ ''ಪರಮಹಂಸ''ನಿಗೆ ಮೊರೆ ಹೋಗುವವರೋ ಅಂತಹವರು ಕಂಸದಿಂದ ಹೊರಬರುತ್ತಾರೆ. ಅದರಂತೆ ವಸುದೇವ ದೇವಕಿಯರು (ಬಂಧನ ದಲ್ಲಿರುವಾಗ) ಪರಮಹಂಸನಾದ ಪರಮಾತ್ಮ ನನ್ನು ಭಕ್ತಿಯಿಂದ ಮೊರೆ ಇಟ್ಟರು.

ಅವರ ಮೊರೆ ಕೇಳಿದ ಪರಮಾತ್ಮ ಶ್ರೀಕೃಷ್ಣನು ಅಂದು ಅರ್ಧರಾತ್ರಿಯ ಕತ್ತಲನ್ನು ಸೀಳಿ ಹೊರಬಂದು, ವಸುದೇವ - ದೇವಕಿಯರ ಬದುಕಿನಲ್ಲಿ ಮುಸುಕಿದ್ದ ಕಂಸನ ಭಯದಿಂದ ಅವರನ್ನು ಪಾರುಮಾಡಿದ. ಮುಂದೆ ಕಂಸ ಕೃಷ್ಣನನ್ನು ಕೊಲ್ಲಲು ''ಪೂತನ'' ಎಂಬ ರಕ್ಕಸಿಯನ್ನು ಕಳುಹಿಸಿದ. ಆ ವೇಳೆಗೆ ಕೃಷ್ಣನು ಗೋಕುಲದಲ್ಲಿ ನಂದ ಯಶೋದೆಯರ ಮಡಿಲಲ್ಲಿ ಬೆಳೆಯುತ್ತಿದ್ದ. ಒಂದು ದಿನ 'ಪೂತನ' ಯಶೋದೆಯ ಮನೆಯನ್ನು ಪ್ರವೇಶಿಸಿ, ಮನೆಯಲ್ಲಿ ಎಲ್ಲರೂ, ಅವರವರ ಕೆಲಸದಲ್ಲಿ ಮಗ್ನರಾಗಿರುವ ಸಮಯ, ಹಜಾರದಲ್ಲಿ ಆಟವಾಡುತ್ತಿದ್ದ ಕೃಷ್ಣನನ್ನು ಎತ್ತಿಕೊಂಡು ಮನೆಯ ಅಂಗಳಕ್ಕೆ ಬಂದು, ತನ್ನ ತೊಡೆಯಮೇಲೆ ಮಲಗಿಸಿಕೊಂಡು - ಮೊಲೆಯನ್ನು [illegible] ಬಾಯಿಗೆ [illegible] [illegible] [illegible] ಎಂತಲೇ ಪೂತನ ತನ್ನ ಮೊಲೆಯಲ್ಲಿ ವಿಷ ತುಂಬಿಟ್ಟುಕೊಂಡು ಬಂದಿದ್ದಳು. ಆದರೆ ಕೃಷ್ಣನೇನು ಸಾಮಾನ್ಯನೇ! ಅವನು ಸರ್ವಜ್ಞ ಮೂರ್ತಿ. ಅವಳ ಮೊಲೆಯುಣ್ಣುವನೆಪದಲ್ಲಿ ಮೊಲೆಯ ತೊಟ್ಟನ್ನೇ ಕಚ್ಚಿ ಅವಳನ್ನು ಕೊಂದ. ಕೆಟ್ಟದಾಗಿ ಚೀರಿ ನೆಲಕ್ಕೆ ಕುಸಿದು ಪ್ರಾಣ ಬಿಟ್ಟಿದ್ದಳು ಪೂತನ. ಅಂಗಳದಲ್ಲೇನು ಸದ್ದು ಎಂದು ಯಶೋದೆ ಮೊದಲಾದವರು ಬಂದು ನೋಡಿದರೆ - ರಕ್ಕಸಿಯ ಶವದ ಮುಂದೆ ಮಗು ಕೃಷ್ಣ ಆಟವಾಡುತ್ತಿರುವುದು ಕಂಡಿತು. ನೆರೆದವರಿಗೆಲ್ಲ ಆಶ್ಚರ್ಯವಾಯಿತು.

ಯಶೋದೆಯಂತೂ ಮಗುವನ್ನು ಕೂಡಲೇ ಎತ್ತಿಕೊಂಡು ಹೋಗಿ ದೃಷ್ಟಿ ತೆಗೆದಳು. ಭಗವಂತನು ಪವಿತ್ರಾತ್ಮರನ್ನು ತನ್ನ ಸನಿಹದಲ್ಲಿಯೇ ಇಟ್ಟುಕೊಂಡು ರಕ್ಷಿಸುತ್ತಾನೆ. ಅಪವಿತ್ರರನ್ನು ಎಂದರೆ - ಪಾಪಕರ್ಮಿಗಳನ್ನು ನಿರ್ದಾಕ್ಷಿಣ್ಯವಾಗಿ ಶಿಕ್ಷಿಸುತ್ತಾನೆ. ಅದೇ ಶಿಕ್ಷೆ ''ಪೂತನಿ''ಗೆ ಆಯಿತು. 'ಪೂತನ' - ಎಂದರೆ-

''ಪೂತ - ನ''. ಪೂತ ಎಂದರೆ ಪವಿತ್ರ - ಎಂದರ್ಥ. 'ನ' ಎಂದರೆ ಪವಿತ್ರಳಲ್ಲದವಳು - ಪಾಪಕರ್ಮಿ - ಪಾಪಕಾರಿಣಿ ಎಂದರ್ಥ.

ಶ್ರೀಕೃಷ್ಣ ಸೆರೆಮನೆಯ ವಾಸದಿಂದ ವಸುದೇವ ದೇವಕಿಯರನ್ನು ಬಿಡಿಸಿದ. ಅವರ ಬದುಕಿನ ಕತ್ತಲೆ ಹರಿಸಿದ. ಕಂಸನನ್ನು ವಧಿಸಿದ. ಮಥುರಾನಗರಕ್ಕೆ - ಸಮಸ್ತ ಜೀವಿಗಳಿಗೆ ಬೆಳಕು ತಂದ. ಅದೇ ತನ್ನ ''ಕರುಣೆಯ - ಕೃಪೆಯ ಬೆಳಕನ್ನು'' ಸಾಕ್ಷಾತ್ ಋಷಿಚೇತನರಾದ ಗೋಪ - ಗೋಪಿಯರು ವಾಸಿಸುವ ಗೋಕುಲಕ್ಕೂ (ಒಯ್ದು) ತೆಗೆದುಕೊಂಡು ಹೋದ. ''ಕೃಷ್ಣ - ಜನಿಸಿದ್ದು'' ಮಥುರೆಯಲ್ಲಿ - ಬೆಳೆದದ್ದು ಗೋಕುಲದಲ್ಲಿ. ಆಳಿದ್ದು ದ್ವಾರಕೆಯನ್ನು. ಕಡೆಯಲ್ಲಿ ತನ್ನ ಇಹದ ಬದುಕನ್ನು ಮುಗಿಸಿದ್ದು ಪ್ರಭಾಸದಲ್ಲಿ.

[illegible] ಯಲ್ಲಿದ್ದ [illegible] ನೀಡಲು ಸೆರೆಮನೆಯಲ್ಲಿಯೇ ಜನ್ಮವೆತ್ತಿದ. ಅವನಿಗೆ ಸಾಮಾನ್ಯರಂತೆ ಗರ್ಭವಾಸಾದಿಗಳಿಲ್ಲ. ಜನ್ಮ - ಅವತಾರವೆಂದರೆ - ಕೇವಲ ಪ್ರಾಕಟ್ಯ ಎಂದು ತಿಳಿಯಬೇಕು.

ಶ್ರೀಕೃಷ್ಣ ಗೋಕುಲದಲ್ಲಿ ''ನಂದ ಯಶೋದೆಯರ'' ಮಡಿಲಲ್ಲಿ ಬೆಳೆದ. ಅವನು ಜನಿಸಿದ ಕೂಡಲೇ - ವಸುದೇವನು - ಕಂಸನಿಗೆ ತಿಳಿಯದಂತೆ ಶ್ರೀಕೃಷ್ಣನನ್ನು ಕರೆದುಕೊಂಡು ಹೊರಟು ಗೋಕುಲದ ಯಶೋದೆಯ ಮಡಿಲಲ್ಲಿ ಮಲಗಿಸಿದ. ಕಂಸನಿಗೆ ಹೆದರಿ ವಸುದೇವನು ಹಾಗೆ ಮಾಡಿದ್ದಲ್ಲ. ಭಗವಂತನ ಆದೇಶವೇ ಹಾಗಿತ್ತು. ಕಂಸ ಓರ್ವ ಅಜ್ಞ, ತಾಮಸಬುದ್ಧಿಯ ಅವನಿಗೆ ಭಗವಂತನ ಅವತಾರ ಅರ್ಥವಾಗುವುದಿಲ್ಲ. ಅಜ್ಞರಿಗೆ ಪರಮಾತ್ಮ ಬರುವುದೂ ಹೋಗುವುದೂ ತಿಳಿಯುವುದಿಲ್ಲ. (ಅವಜಾನಂತಿ ಮಾಂ ಮೂಢಾಃ ಮಾನುಷೀಂ ತನುಮಾಶ್ರಿತಂ) ಇನ್ನು ''ನಂದ-ಯಶೋದೆಯರು - ಆನಂದ ಮತ್ತು ಯಶಸ್ಸಿನ ಪ್ರತೀಕ.'' ''[illegible]'' ಯಾವಾಗಲೂ ಆನಂದವಾಗಿಯೇ ಇರುತ್ತಿದ್ದ.

ಕಾರಣ ''ಗೋಕುಲದಲ್ಲಿ ಗೋ ಸಂಪತ್ತಿದೆ. ಸಮೃದ್ಧಿ'' ಇದೆ. ಅದಕ್ಕೆ ಮೂಲಕಾರಣ [illegible] ಭಕ್ತಿಯಿಗೆ - ಭಗವಂತನ ಚಿಂತನೆ ಇದೆ. ಧಾರ್ಮಿಕ ಪ್ರವೃತ್ತಿ ಇದೆ - ಪ್ರಪತ್ತಿ ಇದೆ. [illegible] ಯಾವ ಕೊರತೆಯೂ ಇಲ್ಲ. ಅಂತ[illegible] ಪರಮಾತ್ಮನು ಇಷ್ಟ[illegible] [illegible]ತ್ತಾನೆ. ಹಾಗಾ[illegible] ಶ್ರೀಕೃಷ್ಣನ ವಿಶೇಷ ಸಾನ್ನಿಧ್ಯವು ಗೋಕು[illegible] ಲಭ್ಯವಾಯಿತು. ಇಷ್ಟೆಲ್ಲ ಇದ್ದ ಮೇಲೆ [illegible] (ಒಂದು) ದೊಡ್ಡ [illegible]! [illegible] ಯಶೋದೆಯು - ''ಯಶೋ-ದಾ'' [illegible] ಯಶಸ್ಸನ್ನು (ಕೊಡುವವಳು). [illegible] ಗೋಕುಲದ ಎಲ್ಲ ಗೋಪಿಯರಿಗೆ [illegible] ಯಶೋದೆಯು ''ಚೈತನ್ಯಮೂರ್ತಿ.'' [illegible] ''ಗೋಪರಿಗೂ ನಂದನು [illegible] ''ಈ ಮೂರ್ತಿ-ಸ್ಫೂರ್ತಿಗಳನ್ನು'' [illegible] [illegible]

ಯಶಸ್ಸ''ನ್ನು ಮತ್ತಷ್ಟು ವರ್ಧಿಸುವುದಕ್ಕಾಗಿ - ಲೀಲಾಮಾನುಷ ವಿಗ್ರಹನಾದ ಶ್ರೀಕೃಷ್ಣನು ಗೋಕುಲಕ್ಕೆ ಬಂದ.

ಕೃಷ್ಣ - ಎಂದರೆ - ಸುಂದರ ಅರ್ಥವಿದೆ. ''ಕರ್ಷಣಾತ್ ಇತಿ ಕೃಷ್ಣ ಉಚ್ಯತೇ'' - ಆಯಸ್ಕಾಂತದಂತೆ ಆಕರ್ಷಿಸಬಲ್ಲ ನಯನ ಮನೋಹರ - ಮೋಹನ ಮೂರ್ತಿ - ಎಂದರ್ಥ.

ಅವನು ಕೇವಲ ''ಮಾನುಷ ವೇಷಧಾರಿ'' ಅಷ್ಟೆಎಂದು ಭಾವಿಸಬಾರದು. (ಆದರೆ) ಅವನು ಮುಕ್ತಿಧಾಮ. ಆದುದರಿಂದಲೇ ಗೋಪಿಯರು ಅವನಿಗೆ ಆಕರ್ಷಿತರಾದರು. ಅವನನ್ನು ಬಯಸಿದರು. ಪ್ರೇಮಮೂರ್ತಿಯಾದ ಅವನನ್ನು ನಿಷ್ಕಲ್ಮಷ ಪ್ರೇಮದಿಂದ ಆರಾಧಿಸಿದರು. ಅವರು ಅವನ ಅಂಗಸಂಗವನ್ನು ಬಯಸಿದವರಲ್ಲ.

ಶ್ರೀಕೃಷ್ಣನ ಕುರಿತು - ಅವರ ತಿಳಿವಳಿಕೆಯು ಸಾಮಾನ್ಯವಾದುದಲ್ಲ. ಅದನ್ನು ಜ್ಞಾನಿಯಾದ ಉದ್ಧವನು ಒಮ್ಮೆ ಸ್ವಯಂ ಗೋಪಿಯರ ಸಮ್ಮುಖದಲ್ಲಿಯೇ ಮನಗಾಣುತ್ತಾನೆ. ಆ ಸಂದರ್ಭ ಹೀಗಿದೆ. ಅದೊಂದು ಉದ್ಧವನಿಗೆ ರೋಚಕ ಸಂದರ್ಭ.

ಒಮ್ಮೆ ಉದ್ಧವ ಗೋಕುಲಕ್ಕೆ ಬರುವ ಸಂದರ್ಭ ಬರುತ್ತದೆ. ಆ ಸಮಯದಲ್ಲಿ [illegible] ಕೃಷ್ಣನ [illegible] ಸುಳಿವಿದಲ್ಲಿ [illegible] ಉದ್ಧವನನ್ನು ಕಂಡ ಕೂಡಲೇ [illegible] ಉದ್ಧವನಿಗೆ [illegible] ನಮ್ಮ ಕೃಷ್ಣ ಹೇಗಿದ್ದಾನೆ? [illegible] ಮಾಡುತ್ತಿದ್ದಾನೆ? ಇದುವರೆಗೂ ಏಕೆ ಅವನು ನಮ್ಮನ್ನು ನೋಡಲು ಗೋಕುಲಕ್ಕೆ ಬರಲಿಲ್ಲ? ಯಾವಾಗ ಬರುತ್ತಾನೆ? ಅವನಿಗೆ ನಮ್ಮ ಮೇಲೆ ಕೋಪವೇ? ನಾವೇನು ಅನ್ಯಾಯ ಮಾಡಿದ್ದೇವೆ ಅವನಿಗೆ? ನಮಗಾಗಿ ಏನು ಸಂದೇಶ ಕಳುಹಿಸಿದ್ದಾನೆ? ಹೀಗೆ ಒಂದೆ ಎರಡೆ? ಹತ್ತು - ಹಲವು ಪ್ರಶ್ನೆಗಳನ್ನು ಎಸೆದರು. ಉದ್ಧವ ಅವರೆಲ್ಲರ ಕುತೂಹಲಕರ ಪ್ರಶ್ನೆಗಳನ್ನು ಕೇಳುತ್ತಾ, ಅಷ್ಟೇ ಕುತೂಹಲದಿಂದ ಗೋಪಿಯರಿಗೆ ಮರು ಪ್ರಶ್ನೆ ಎಸೆದ. - ಅಲ್ಲ ದ್ವಾರಕಾಧೀಶನಾದ ಕೃಷ್ಣನ ಕುರಿತು ಎಡೆ ಬಿಡದೆ ಇಷ್ಟೊಂದು ಪ್ರಶ್ನೆಗಳನ್ನು ಕೇಳುತ್ತಿರುವಿರಲ್ಲ, ಅವನ ಮೇಲೆ ಏಕೆ ಅಷ್ಟೊಂದು ಕಾಳಜಿ ನಿಮಗೆ! ಅವನಲ್ಲಿ ಅಂತಹ ವಿಶೇಷವೇನು ಕಂಡಿರಿ? (ಅವನನ್ನು) ಕೃಷ್ಣನನ್ನು ಏನೆಂದು ತಿಳಿದಿರುವಿರಿ? - ಎಂದೆಲ್ಲ ಕೇಳಿದ. ತರುವಾಯ ಗೋಪಿಯರು - ಉದ್ಧವ, ಕೃಷ್ಣನನ್ನು - ನಾವು ಸಾಮಾನ್ಯನೆಂದು ಭಾವಿಸಿಲ್ಲ. ಅವನು ಕೇವಲ ''ಯಾದವ ಕುಲವನ್ನು ಉದ್ಧರಿಸುವುದಕ್ಕಾಗಿ ಬಂದ ಮಾನವ ಮಾತ್ರನಲ್ಲ. ಮಾನವ ಕುಲವನ್ನು ಉದ್ಧರಿಸುವುದಕ್ಕಾಗಿ ಬಂದ ಮಾಧವ''. ''ಮಾ-ಧವ - ಲಕ್ಷ್ಮೀಪತಿ'' ಎಂದು ನಾವು ತಿಳಿದಿದ್ದೇವೆ. ಆದಿದರಿಂದ ಅವನೇ ನಮಗೆ ಆರಾಧ್ಯ ದೈವ.

''ಕೃಷ್ಣಾತ್ಪರಂ ಕಿಮಪಿ ತತ್ವಮಹಂ ನ ಜಾನೇ'' ಕೃಷ್ಣನಿಂಗಿತವನ್ನು ಅರಿತ ಪ್ರತಿ ಗೋಪಿಯೂ, ಕೃಷ್ಣನಿಗಿಂತಲೂ ಪರತತ್ವವನ್ನು ನಾನು ಕಾಣೆ - ನಾನು ಕಾಣೆ ಎಂದುತ್ತರಿಸುತ್ತಾರೆ. ಗೋಪಿಯರ ಉತ್ತರವನ್ನು ಕೇಳಿದ ಉದ್ಧವ ತತ್ತರಿಸುತ್ತಾನೆ. ''ಕೃಷ್ಣನ ಬಗೆಗಿನ ಅವರ ನಿರ್ವ್ಯಾಜ ಪ್ರೇಮಕ್ಕೆ ತಲೆದೂಗುತ್ತಾನೆ.'' ಅವರಿಗೆ ಶ್ರೀಕೃಷ್ಣ ಸಂದೇಶವನ್ನು ಹೇಳಿ - ಉದ್ಧವ ಹಿಂದಿರುಗುತ್ತಾನೆ. ಗೋಕುಲದ ಪ್ರತಿಯೊರ್ವ ಗೋಪಿಯೂ ಉಪನಿಷತ್ಪ್ರತಿಪಾದ್ಯನಾದ ಗೋವಿಂದನನ್ನು ಪ್ರತಿಗೋವಿನಲ್ಲಿಯೂ ನೋಡುತ್ತಿದ್ದರು. ಅವರ ಅಂತರ್ದೃಷ್ಟಿಗೆ ಆ ಭಗವಂತನು ಗೋಚರಿಸುತ್ತಿದ್ದ. ಅವರ ಹೃದಯ ಸ್ವಚ್ಛಸ್ವಸ್ಥವಾದುದು. ಇಂತಹ ಗೋಪಿಯರನ್ನು, ವೇದವ್ಯಾಸರು ಭಾಗವತದಲ್ಲಿ -

ಸಾಕ್ಷಾತ್ ''ಋಷಿ ಚೇತನರು'' - ಎಂದು ಮುಕ್ತಕಂಠದಿಂದ ಕರೆದಿದ್ದಾರೆ. ನಿಜ ಅವರು ಋಷಿಗಳೇ. ಕೃಷ್ಣೋಪನಿಷತ್ತಿನಲ್ಲಿ ಇದಕ್ಕೊಂದು ಅತ್ಯಂತ ಸ್ವಾರಸ್ಯಕರವಾದ ಘಟನೆಯ ಉಲ್ಲೇಖವಿದೆ.

ಶ್ರೀರಾಮನ ವನವಾಸದ ಸಮಯದಲ್ಲಿ - ಒಮ್ಮೆ ವನವಾಸಿಗಳಾದ ಋಷಿಗಳೆಲ್ಲ ಸೇರಿ ಶ್ರೀರಾಮನ ದರ್ಶನಮಾಡಿ, ''ಹೇ, ಸಚ್ಚಿದಾನಂದ ವಿಗ್ರಹನಾದ ಪರಮಾತ್ಮನೇ, ನಿನ್ನ ಮೋಹಕವಾದ ಅಪ್ರತಿಮ ರೂಪ ಸಂಪತ್ತ''ನ್ನು ಕಂಡು ನಾವೆಲ್ಲ ಮೋಹಗೊಂಡಿದ್ದೇವೆ. ನಮಗೆ ನಿನ್ನನ್ನು ಅಪ್ಪಿಕೊಳ್ಳಬೇಕೆಂಬ ಬಯಕೆಯಾಗಿದೆ. ದಯಮಾಡಿ, ನಮಗೆ ನಿನ್ನ ಆಲಿಂಗನ ಸುಖವನ್ನಿತ್ತು, ನಮ್ಮನ್ನು ಅನುಗ್ರಹಿಸು'' ಎಂದು ಬೇಡಿದರು. ಅವರ ಮನವಿಯನ್ನು ಕೇಳಿದ ಪ್ರಭು, ಶ್ರೀರಾಮ ಚಂದ್ರನು ಆ ಋಷಿ ಸಮೂಹವನ್ನು ಕುರಿತು, ಸ್ವಾಮಿ ತಮ್ಮಗಳ ಅಪೇಕ್ಷೆಯೇನೋ ಅಂಗೀಕಾರಾರ್ಹವೇ ಆಗಿದೆ. ಆದರೆ, ಅದು ಈಗ ಬೇಡ. ಮುಂದೆ ದ್ವಾಪರಯುಗದಲ್ಲಿ (ಮಥುರೆಯಲ್ಲಿ) ಕೃಷ್ಣನಾಗಿ ಅವತರಿಸುತ್ತೇನೆ. ತಾವುಗಳು ಆ ಸಮಯ ಗೋಕುಲದಲ್ಲಿ ಹಾಲು ಉತ್ಪಾದನೆ ಮಾಡುವ ಗೋವಳರ ಸಂಘದಲ್ಲಿ ಗೋಪಿಯರಾಗಿ ಬನ್ನಿ. ಆಗ ತಮ್ಮ ಬಯಕೆಯಂತೆ ''ಆಲಿಂಗನ'' ಸುಖಕೊಟ್ಟು ಅನುಗ್ರಹಿಸುತ್ತೇನೆ ಎಂದು ಆಶ್ವಾಸನೆಯನ್ನು ಕೊಟ್ಟಿದ್ದನಂತೆ. ತ್ರೇತಾಯುಗದ ಆ ಋಷಿಗಳೇ ಈ ಗೋಪಿಯರು.

ಈ [illegible] ವೇದವ್ಯಾಸರು ಗೋಕುಲದ ಗೋಪಿಯರನ್ನು ''ಋಷಿಚೇತನ''ರು ಎಂದು ಕರೆದಿರುವುದು ಇಂತಹ ಗೋಪಿಯರಿಗಾಗಿ [illegible] ಶ್ರೀಕೃಷ್ಣನಿಗೆ [illegible] [illegible] - ನಿಷ್ಕಾಮವಾದುದು. [illegible] - ಕಂಸಾದಿ ದುಷ್ಟರನ್ನು ಸಂಹರಿಸಿ ಸಜ್ಜನ್ನ ಅವತರಿಸಿ ಬಂದು - [illegible] ಆನಂದವನ್ನು ನೀಡಿದ್ದಾನೆ. ಅವನಿಗೆ ''ನಮ್ಮ ನಮನ''.

★★★★★



ಕಾಂಬೋಡಿಯಾದಲ್ಲಿಯ

ಅಂಕೋರವಾಟ ವೈಷ್ಣವ ದೇವಾಲಯ

- ಆದ್ಯರಾಮಾಚಾರ್ಯ.

ಹಿಂದೂ ಹಾಗೂ ಭೌದ್ಧ ಧರ್ಮದ ಸಂಸ್ಕೃತಿಗಳು ಮೂಲತಃ ಭಾರತದಿಂದಲೇ ಕಾಂಬೋಡಿಯಾದಲ್ಲಿ ಪಸರಿಸುವಂತಾದವು. ಪಂಚತಂತ್ರದಲ್ಲಿ ಬರುವ ಕಥೆಗಳಂತೆ ಕಾಂಬೋಡಿಯಾದ ವಿಚಾರದಲ್ಲಿಯೂ ಸಹ ಅಲ್ಲಿಯ ಶ್ರದ್ಧಾವಂತರು ಒಂದು ಘಟನೆಯನ್ನು ಇಂದಿಗೂ ಕಥಾರೂಪದಲ್ಲಿ ಹೇಳುವುದುಂಟು.



ಕ್ರಿ.ಶ. ಮೊದಲನೆಯ ಶತಮಾನದ ಕಾಲಾವಧಿ ಯಲ್ಲಿ ದಕ್ಷಿಣ ಭಾರತದ ಅದರಲ್ಲಿಯೂ ವಿಶೇಷವಾಗಿ ಕರ್ನಾಟಕದ ಓರ್ವ ತರುಣ ಯೋಧನಿಗೆ ಆಗಾಗ ಸ್ವಪ್ನದಲ್ಲಿ ಶ್ರೀಮನ್ನಾರಾಯಣನು ದರ್ಶನವನ್ನಿತ್ತು ''ನೀನು ವಿಶಾಲವಾದ ಸಮುದ್ರವನ್ನು ದಾಟಿ ಮುನ್ನಡೆದಾಗ ನಿಸರ್ಗ ಸೌಂದರ್ಯದ ಬೀಡಿನಂತಿರುವ ಸ್ಥಳದಲ್ಲಿ ಸ್ಫಟಿಕದಂತಿರುವ ಜಲಪ್ರವಾಹವನ್ನು ಕಾಣುವೆ. ಅಲ್ಲಿಂದಲೇ ನಿನ್ನ ಯಶೋಗಾಥೆ ಆರಂಭವಾಗುವುದು. ಯಾವಾಗಲೂ ನಾನು ನಿನಗೆ ರಕ್ಷಕನಾಗಿರುವೆ'' ಎಂದು ಸೂಚನೆಯಾಗುತ್ತಿತ್ತು. ಒಂದು ದಿನ ಆ ಯೋಧನು ತಾನು ಕಾಣುತ್ತಿರುವ ಸ್ವಪ್ನದ ಸಾಕ್ಷಾತ್ಕಾರ ನಿಮಿತ್ತ ಸಂಗಡಿಗರೊಂದಿಗೆ ಸಮುದ್ರ ಯಾನವನ್ನಾರಂಭಿಸಿದನು. ಬಹು ದೂರ ಪ್ರಯಾಣ ಮಾಡಿದ ನಂತರ ಸ್ವಪ್ನದಲ್ಲಿ ಕಾಣುತ್ತಿದ್ದ ನಿಸರ್ಗ ಸಹಜವಾದ ತಾಣವು ಕಾಣಿಸಿಕೊಂಡಿತು. ಆಗ ಸಮುದ್ರದಿಂದ ಹೊರಬಂದು ಮುನ್ನಡೆದಾಗ ತಿಳಿನೀರಿನ ಪ್ರವಾಹವನ್ನು ಕಂಡನು. ಇನ್ನೇನು ಅದನ್ನು ದಾಟಿ ಮುನ್ನುಗ್ಗಬೇಕು ಎಂದು ಯೋಚಿಸುತ್ತಿರುವಾಗ ''ನಿಲ್ಲು'' ಎಂಬ ಧ್ವನಿಯು ಕೇಳಿಸಿತು. ಸುಂದರಿಯಾದ ಯುವತಿಯೊಬ್ಬಳು ಯುದ್ಧಸನ್ನದ್ಧಳಾಗಿ ನಿಂತುಕೊಂಡಿದ್ದಳು. ತನ್ನನ್ನು ಜಯಿಸದೆ ಯಾರೂ ಒಂದು ಹೆಜ್ಜೆಯನ್ನೂ ಸಹ ಮುಂದಡಿಯಿಡಲು ಸಾಧ್ಯವಿಲ್ಲ ಎಂದು ಅಬ್ಬರಿಸಿದಳು. ಸರಿ, ತರುಣ ಯೋಧನು ಅನಿವಾರ್ಯವಾಗಿ ಆ ತರುಣಿಯೊಂದಿಗೆ ಹೋರಾಟವನ್ನಾರಂಭಿಸಿದನು. ಕೊನೆಗೆ ಜಯವು ಆತನಿಗೇ ಲಭಿಸಿತು. ಯಾರು ತನ್ನನ್ನು ಪರಾಜಯಗೊಳಿಸುವರೋ ಅಂಥವರನ್ನೇ ತಾನು ವರಿಸುವುದಾಗಿ ಪ್ರತಿಜ್ಞೆಗೈದಿದ್ದ ಆ ಕನ್ಯೆಯು ಆ ತರುಣನನ್ನೇ ವಿವಾಹವಾದಳು. ಹೀಗೆ ಕರ್ನಾಟಕದಿಂದ ಹೊರಟ ಆ ಯೋಧನ ಹೆಸರು ಕೌಂಡಿನ್ಯ ಎಂದು ಅಲ್ಲಿಯ ನಿವಾಸಿಗಳು ಹೇಳುವುದುಂಟು. ವಿಜಯಿಯಾದ ಆ ತರುಣನೇ ಮುಂದೆ ಆ ಪ್ರದೇಶಕ್ಕೆಲ್ಲ ರಾಜನಾದನೆಂದು ಅವರು ನಂಬುತ್ತಾರೆ. ಈ ಘಟನೆಯ ವಿಚಾರದಲ್ಲಿ ಕಾಂಬೋಡಿಯಾದ ಪ್ರಜೆಗಳಲ್ಲಿ ಹೆಚ್ಚಿನ ವಿಶ್ವಾಸವಿದೆ. ಕೋನಾಡಿನ್ಯ ಎಂಬ ಹೆಸರೇ ಕಾಲಾಂತರದಲ್ಲಿ ಕಾಂಬೋಡಿಯಾ ಎಂದು ರೂಪಾಂತರ ಹೊಂದಿದೆ ಎಂದೆನ್ನುತ್ತಾರೆ.

ಭಾರತ ಹಾಗೂ ಕಾಂಬೋಡಿಯಾ ಇವೆರಡೂ ದೇಶಗಳಲ್ಲಿ ಮುಂದೆ ಪರಸ್ಪರ ಸಂಚಾರವು ಆರಂಭವಾಯಿತೆಂಬುದಕ್ಕೆ ಈ ಘಟನೆಯೇ ಮೂಲ ಕಾರಣವೆನ್ನುತ್ತಾರೆ. ಭಾರತದಿಂದ ಸಾವಿರಾರು ಸಂಖ್ಯೆಯಲ್ಲಿ ಕಾಂಬೋಡಿಯಾಕ್ಕೆ ವಲಸೆ ಬಂದವರೆಂದು ತಿಳಿದು ಬರುತ್ತದೆ. ಹಿಂದುಗಳು ಎಂಟು ನೂರು ವರುಷಗಳ ಹಿಂದೆ ಕಾಂಬೋಡಿಯಾಕ್ಕೆ ಬಂದು, ಅಲ್ಲಿಯ ಜನರಲ್ಲಿ ಬೆಳೆದ ಭಿನ್ನಾಭಿಪ್ರಾಯಗಳನ್ನು ಪರಿಹರಿಸಿ ಏಕೋಭಾವವು ಮೂಡುವಂತೆ ಮಾಡಿದರಲ್ಲದೆ ಹಿಂದೂ ಧರ್ಮವು ಹೆಚ್ಚಿನ ರೀತಿಯಲ್ಲಿ ಬೆಳೆಯುವಂತೆ ಮಾಡಿದರು. ತಾವೇ ಕಾಂಬೋಡಿಯಾದ ರಾಜಾಧಿರಾಜರೆಂದು ಘೋಷಿಸಿಕೊಂಡು ಮುಂದೆ ಆ ಭಾಗವೆಲ್ಲ ಸಮೃದ್ಧವಾಗಿ ಅಭಿವೃದ್ಧಿಯಾಗುವಂತೆ ಮಾಡಿದರು. ದಕ್ಷಿಣ ಪೂರ್ವ ಏಶಿಯಾದ ಅನೇಕ ಭಾಗಗಳು ಅಧೀನ ರಾಜ್ಯ ವೆಂದೆನಿಸಿಕೊಂಡವು. ಈ ಭಾಗದ ರಾಜರುಗಳಿಗೆಲ್ಲಾ ಭಾರತೀಯರೇ ರಾಜಗುರುಗಳಾಗಿರುತ್ತಿದ್ದರು. ಸಾಕಷ್ಟು ಪ್ರಮಾಣದಲ್ಲಿ ಹಿಂದೂ ಧರ್ಮವನ್ನು ಬೆಳೆಸಲು ಉಪಕ್ರಮಿಸಿದರು. ಹೀಗಾಗಿ ಹದಿನೈದನೇ ಶತಮಾನದವರೆಗೆ ಕಾಂಬೋಡಿಯಾದ ಸುತ್ತಮುತ್ತಲೂ ಹಿಂದೂ ಧರ್ಮವೇ ಹೆಚ್ಚಿನ ಪ್ರಮಾಣದಲ್ಲಿ ಬೆಳೆದು ಬರುವಂತಾಯಿತು.


ಹನ್ನೆರಡನೇ ಶತಮಾನದಲ್ಲಿ ಅಂಕೋರ ವಾಟದಲ್ಲಿ ವಿಶ್ವವಿಖ್ಯಾತವೆಂದೆನಿಸು ವಂತಹ ರೀತಿಯಲ್ಲಿ (ಈ ದೇವಾಲಯವು ವಿಶ್ವದ ಆಶ್ಚರ್ಯ ಸ್ಮಾರಕಗಳಲ್ಲಿ ಐದನೆಯ ದೆಂದೆನಿಸಿದೆ.) ಹಿಂದೂ ದೇವಮಂದಿರದ ನಿರ್ಮಾಣ ಕಾರ್ಯವು ಆರಂಭವಾಯಿತು. ಒಂದು ನೂರು ವರುಷಗಳವರೆಗೆ ಈ ಕಟ್ಟಡದ ಕಾರ್ಯವು ಸಾಗಿತು. ಭಾರತದಿಂದ ಸಾವಿರಾರು



ಕುಶಲಕರ್ಮಿಗಳು ಬಂದು ಈ ದೇವಮಂದಿರದ ಕಾರ್ಯದಲ್ಲಿ ನಿರತರಾಗಿದ್ದರು. ಆಂಕೋರವಾಟ ದೊಂದಿಗೆ ಈ ಭಾಗದಲ್ಲಿ ಇನ್ನೂ ಸಾವಿರಾರು ದೇವ ಮಂದಿರಗಳು ಹುಟ್ಟಿಕೊಂಡವು. ಯಾರು ದಕ್ಷಿಣ ಭಾರತದಲ್ಲಿ ನಿರ್ಮಾಣಗೊಂಡಿರುವ ಪ್ರಾಚೀನ ದೇವಾಲಯಗಳನ್ನು ನೋಡಿರು ವರೋ ಅಂಥವರಿಗೆ ಕಾಂಬೋಡಿಯಾದ ದೇವಮಂದಿರಗಳು ದಕ್ಷಿಣ ಭಾರತದಲ್ಲಿ ನಿರ್ಮಾಣಗೊಂಡಿರುವ ಮಂದಿರಗಳ ಪ್ರತಿರೂಪಗಳಾಗಿಯೇ ತೋರಿಬರುವಂತಾ ಗಿರುವುವು.

ವಿಶ್ವದ ಇತಿಹಾಸದಲ್ಲಿ ಅನೇಕ ಸಾಮ್ರಾಜ್ಯಗಳು ಒಂದು ಕಾಲದಲ್ಲಿ ವೈಭವದಿಂದ ಮೆರೆದು, ಮುಂದೊಂದು ಕಾಲದಲ್ಲಿ ನಶಿಸಿ ಹೋದ ಘಟನೆಗಳೆಷ್ಟು ಎಂಬುದನ್ನು ವಿವರಿಸುವುದು ಕಠಿಣವಾದ ವಿಷಯ ವೆನಿಸುವುದು. ನೂರಾರು ವರುಷಗಳ ಕಾಲ ಹಿಂದೂ ಧರ್ಮವು ವೈಭವದಿಂದ ಮೆರೆದ ಕಾಂಬೋಡಿಯಾದಲ್ಲಿಯೂ ಸಹ ಅನೇಕ ಏರುಪೇರುಗಳಾದವು. ಅಲ್ಲಿಯ ಪ್ರಭುತ್ವಗಳು ಬದಲಾಗಿ ಹೋದವು. ದಕ್ಷಿಣ ಏಶಿಯಾ ದಲ್ಲಿಯೇ ಸಂಪದ್ಭರಿತವಾದ ರಾಜ್ಯವೆಂದೆನಿಸಿ ಕೊಳ್ಳುತ್ತಿದ್ದ ಕಾಂಬೋಡಿಯಾ ಭಾಗವಾದರೂ ಸಹ ಕಾರ್ಗತ್ತಲೆಗೆ ಸಿಲುಕುವಂತಾಯಿತು. ಅಂಕೋರಾದಂತಹ ವಿಶ್ವವಿಖ್ಯಾತವಾದ ಹಿಂದೂ ಮಂದಿರವು ತಮ್ಮದೆಂಬ ಭಾವನೆಯನ್ನೂ ಸಹ ಅವರು ಮರೆತರು.

ಸನ್ 1861 ರಲ್ಲಿ ಹೆನರಿ ಹೋಟ ಎಂಬ ವಿಜ್ಞಾನಿಯೊಬ್ಬರು ಕಾಂಬೋಡಿಯಾದ ಅರಣ್ಯ ಭಾಗದಲ್ಲಿ ಗಿಡ ಮೂಲಿಕೆಗಳ ಶೋಧನೆಗಾಗಿ ಸಂಚರಿಸುತ್ತಿರುವಾಗ ಆಕಸ್ಮಿಕವೆಂಬಂತೆ ಆ ವಿಜ್ಞಾನಿಯ ದೃಷ್ಟಿಗೆ ಆಂಕೋರವಾಟ ದೇವಮಂದಿರವು ಕಾಣಿಸಿಕೊಂಡಿತು. ಅರಣ್ಯ ಮಧ್ಯದಲ್ಲಿ ನಿಂತಿರುವ ಆಶ್ಚರ್ಯಕರವಾದ ಕಲಾವೈಭವವನ್ನು ಕುರಿತು ಅನೇಕ ಪತ್ರಿಕೆಗಳಲ್ಲಿ ಛಾಯಾಚಿತ್ರಗಳೊಂದಿಗೆ ಪ್ರಕಟಿಸ ಲಾರಂಭಿಸಿದರು. ಇದರಿಂದಾಗಿ ಆ ಮಂದಿರದ



ತುಂಬೆಲ್ಲ ದೇವ ದೇವಿಯರ ವಿಗ್ರಹಗಳಿರುವುದು ಬೆಳಕಿಗೆ ಬರುವಂತಾಯಿತು. ಆತನ ಈ ಪ್ರಯತ್ನದಿಂದಾಗಿ ಪಾಶ್ಚಿಮಾತ್ಯ ಮಾಧ್ಯಮಗಳೂ ಒಂದಾದಮೇಲೊಂದರಂತೆ ಇಲ್ಲಿಯ ಕಲಾ ವೈಭವವನ್ನು ಕುರಿತು ಪ್ರಕಟಿಸತೊಡಗಿದವು. ಆಗ ಮಾತ್ರ ಭಾರತದೇಶವು ಅಲ್ಲಿರುವ ಎಲ್ಲ ದೇವಮಂದಿರಗಳು ಭಾರತೀಯ ದೇವ ಮಂದಿರಗಳಾಗಿವೆ ಎಂದು ಗಂಟಾ ಘೋಷವಾಗಿ ಸಾರಲಾರಂಭಿಸಿತು.


ಕಾಂಬೋಡಿಯಾದ ಶಾಸಕಾಂಗ ಹಾಗೂ ಅಲ್ಲಿಯ ಪ್ರಜೆಗಳು ಎರಡು ಸಾವಿರ ವರುಷಗಳಿಂದ ತಮ್ಮ ಸಂಬಂಧವು ಭಾರತದೊಂದಿಗಿರುವುದಾಗಿ ಹೇಳ ಲಾರಂಭಿಸಿದರು. ಅದರಲ್ಲಿಯೂ ವಿಶೇಷವಾಗಿ ನರೋತ್ತಮಸಿಂಹನೋಕ ಎಂಬ ಕಾಂಬೋಡಿ ಯಾದ ಅರಸನು ಅಲ್ಲಿಯ ರಾಜಾಧಿರಾಜನೆಂದೆನಿಸಿಕೊಳ್ಳುತ್ತಿರುವನು. ಈತನು ಭಾರತದೊಂದಿಗೆ ವಿಶೇಷವಾದ ಆತ್ಮೀಯ ಸಂಬಂಧವನ್ನು ಬೆಳೆಸಿಕೊಂಡಿರುವನು. ಪಂ. ಜವಹರಲಾಲರ ಕಾಲದಲ್ಲಿ ಈತನು ಭಾರತಕ್ಕೆ ಬಂದಾಗ ಪ್ರಧಾನ ಮಂತ್ರಿಗಳ ವೈಯುಕ್ತಿಕ ಅತಿಥಿಯಾಗಿ ತೀನಮೂರ್ತಿ ಭವನದಲ್ಲಿಯೇ ಬಿಡಾರ ಮಾಡಿಕೊಂಡಿದ್ದನು. ಪಂ. ಜವಾಹರಲಾಲರು ತಾವೇ ಖುದ್ದಾಗಿ ನಿಂತು ತಮ್ಮ ಮಂತ್ರಿಮಂಡಲದವರಿಗೆಲ್ಲ ನರೋತ್ತಮ ಸಿಂಹನೋಕ ಇವರು ಕಾಂಬೋಡಿಯಾದ ಮಹಾರಾಜರೆಂದು ಪರಿಚಯ ಮಾಡಿಸಿದರು. ಪಂ. ನೆಹರೂ ಹಾಗೂ ನರೋತ್ತಮಸಿಂಹನೋಕ ಇವರಿಬ್ಬರೂ ಒಟ್ಟಾಗಿದ್ದುದನ್ನು ಕಂಡವರು ಇಬ್ಬರೂ ಒಡಹುಟ್ಟಿದ ಸೋದರರೆಂದು ಭಾವಿ ಸುತ್ತಿದ್ದರೆಂದು ಹೇಳುವುದುಂಟು. ಮಹಾ ರಾಜರಂತೂ ತಮ್ಮ ವಂಶದ ಪೂರ್ವಜರೆಲ್ಲ ನೂರಾರು ವರುಷಗಳ ಹಿಂದೆಯೇ ಭಾರತದಿಂದ ವಲಸೆ ಬಂದವರೆಂಬ ಮಾತನ್ನು ಬಹು ಅಭಿಮಾನದಿಂದ ಬಹಿರಂಗವಾಗಿ ಹೇಳಿ ಕೊಳ್ಳುತ್ತಿದ್ದರು.

ಅಂಕೋರವಾಟ ಜಗತ್ಪ್ರಸಿದ್ಧ ದೇವಮಂದಿರ ವನ್ನು ಕುರಿತು ಈಗಾಗಲೇ ಅನೇಕ ಲೇಖಕರು ತಮ್ಮ ಅನಿಸಿಕೆಗಳನ್ನು ಪ್ರಕಟಿಸಿರುವುದುಂಟು. ಆ ದೇವಮಂದಿರಗಳಲ್ಲಿ ಬಿಡಿಸಲಾದ ಸಮುದ್ರ ಮಂಥನದ ದೃಶ್ಯಗಳು, ರಾಮಾಯಣ, ಹಾಗೂ ಮಹಾಭಾರತದ ಅನೇಕ ಘಟನೆಗಳನ್ನು ಆಧರಿಸಿ ಬಿಡಿಸಿದ ಶಿಲ್ಪಗಳು, ದೇವದೇವತೆಗಳ ವಿಗ್ರಹಗಳ ಚಿತ್ರಗಳನ್ನು ಅನೇಕ ರೀತಿಯಲ್ಲಿ



ಪ್ರಕಟಪಡಿಸಿರುವುದುಂಟು. ಒಂದು ಕಾಲದಲ್ಲಿ ಅತ್ಯಂತ ಉನ್ನತ ಸ್ಥಾನವನ್ನು ತಲುಪಿದ ಹಿಂದೂ ಧರ್ಮದ ಸ್ಥಾನವನ್ನು ಈಗ ಭಾರತ ಮೂಲದಿಂದ ಹೋಗಿರುವ ಬೌದ್ಧ ಧರ್ಮವು ವ್ಯಾಪಿಸಿಕೊಂಡಿರುವುದು. ಎಲ್ಲವೂ ಬೌದ್ಧಮಯವಾಗಿ ಹೋಗಿರುವುದುಂಟು. ಹೀಗಿದ್ದರೂ ಸಹ ಭಾರತ ಹಾಗೂ ಕಾಂಬೋಡಿಯಾಗಳ ಬಾಂಧವ್ಯವು ಅವಿನಾಭಾವದ ಬಾಂಧವ್ಯದಿಂದ ಕೂಡಿರುವುದಾಗಿರುವುದು. ಕಾಂಬೋಡಿಯಾದಲ್ಲಿರುವ ವಸ್ತುಸಂಗ್ರಹಾಲಯವಂತೂ ಅಭ್ಯಾಸಿಗರನ್ನು ಕೈಮಾಡಿ ಕರೆಯುತ್ತಿರುವುದು. ಮೊದಲನೇ ಶತಮಾನದ ಅಸಂಖ್ಯಾತ ಶಿಲಾ ವಿಗ್ರಹಗಳು ಅಲ್ಲಿವೆ. ಪ್ರಾಚೀನ ಭಾರತದ ಋಷಿ ಮುನಿಗಳನ್ನು ಕುರಿತಾದ ಕೃತಿಗಳಿವೆ. ಸಾವಿರಾರು ಶಿವಲಿಂಗಗಳಿವೆ. ಅಷ್ಟೇ ಸಂಖ್ಯೆಯಲ್ಲಿ ವಿಷ್ಣು ಹಾಗೂ ಅನೇಕ ದೇವಿಯರ ವಿಗ್ರಹಗಳನ್ನು ಸಹ ಅಲ್ಲಿ ನೋಡಬಹುದಾಗಿದೆ. ಸಾವಿರಾರು ವರ್ಷಗಳ ಭಾರತೀಯ ಶಿಲ್ಪಕಲಾ ಶೈಲಿಯ ವೈಭವವನ್ನೇ ಇಲ್ಲಿ ನಾವು ಕಾಣಬಹುದಾಗಿದೆ.

ಹಿಂದೂ ಧರ್ಮವು ಶಿಥಿಲಗೊಂಡ ನಂತರ ಅದರ ಸ್ಥಾನವನ್ನು ಭಾರತದಿಂದ ಬಂದ ಬೌದ್ಧ ಧರ್ಮವು ಸ್ವೀಕಾರ ಮಾಡಿತು. ಇಂದು ಕಾಂಬೋಡಿಯಾದಲ್ಲಿ ಬೌದ್ಧ ಧರ್ಮವು ರಾಜಮಾನ್ಯಧರ್ಮವೆನಿಸಿದೆ. ಪ್ರತಿಯೊಂದು ಧಾರ್ಮಿಕ ಸಮಾರಂಭದಗಳಲ್ಲಿ ಬೌದ್ಧ ಧರ್ಮಕ್ಕೆ ಅಗ್ರಸ್ಥಾನವಿದೆ. ಇಲ್ಲಿ ಬೌದ್ಧಭಿಕ್ಷುಗಳು ಪ್ರತಿಯೊಂದು ಸಮಾರಂಭಕ್ಕೆ ಮೊದಲು ಹದಿನೈದು ನಿಮಿಷಗಳ ಕಾಲ ಸಂಸ್ಕೃತದಲ್ಲಿಯೇ ಮಂತ್ರೋಚ್ಚಾರ ಮಾಡುತ್ತಾರೆ. ಅನಂತರದಲ್ಲಿ ರಾಜನಾಗಲೀ ಅಥವಾ ಪ್ರಧಾನ ಮಂತ್ರಿಗಳಾಗಲೀ ಬಂದು ಆ ಭಿಕ್ಷುಗಳಿಗೆ ತಲೆಬಾಗಿ ವಂದಿಸುತ್ತಾರೆ. ಪಾದಸ್ಪರ್ಶ ಮಾಡಿಕೊಳ್ಳುತ್ತಾರೆ. ಅವರಿಗೆ ಅನೇಕ ವಸ್ತ್ರಗಳೊಂದಿಗೆ ಫಲಗಳನ್ನರ್ಪಿಸಿದ ನಂತರ ಆ ಪೂಜ್ಯರಿಂದ ಆಶೀರ್ವಾದ ಪಡೆದ [illegible]



ಇಂದಿಗೂ ಭಾರತದಲ್ಲಿ ಯಾವ ರೀತಿಯಲ್ಲಿ ರಾಮಾಯಣದ ರಾಮಲೀಲೆ ನಡೆಯುತ್ತದೆಯೋ ಅದೇ ರೀತಿಯಲ್ಲಿ ಕಾಂಬೋಡಿಯಾದ ಪ್ರಜೆಗಳು ಅದನ್ನಾಚರಿಸುತ್ತಾರೆ. ನಮ್ಮ ಹಿಂದಿನ ಪ್ರಧಾನ ಮಂತ್ರಿಗಳಾಗಿದ್ದ ಶ್ರೀಮತಿ ಇಂದಿರಾ ಗಾಂಧೀಯವರು ತಮ್ಮ ಕಾಲಾವಧಿಯಲ್ಲಿ ಕಾಂಬೋಡಿಯಾಕ್ಕೆ ಭೇಟಿಯನ್ನಿತ್ತ ಕಾಲದಲ್ಲಿ ಅಲ್ಲಿರುವ ದೇವಾಲಯಗಳ ಪರಿಸ್ಥಿತಿಯನ್ನು ಕಣ್ಣಾರೆ ಕಂಡ ನಂತರ ಕಾಂಬೋಡಿಯಾ ಸರಕಾರದ ಪ್ರಾರ್ಥನಾನುಸಾರವಾಗಿ ಭಾರತಕ್ಕೆ ಮರಳಿ ಬಂದ ನಂತರ [illegible] ಪ್ರಾಚ್ಯ ವಸ್ತು ಸಂಶೋಧನಾ [illegible] ಪ್ರತಿನಿಧಿಗಳನ್ನು [illegible]

ದೇವಮಂದಿರಗಳ ಜೀರ್ಣೋದ್ಧಾರ ಕಾರ್ಯವನ್ನಾರಂಭಿಸುವಂತೆ ತಿಳಿಸಿದರು. ಈ ನಿಯೋಗದಲ್ಲಿ ಹೆಚ್ಚಾಗಿ ದಕ್ಷಿಣ ಭಾರತದವರೇ ಇದ್ದುದು ವಿಶೇಷವಾಗಿತ್ತು. ಅದರಲ್ಲಿಯೂ ಸಹ ನಮ್ಮ ನಾಡಿನ ಧಾರವಾಡದವರೇ ಆದ ಶ್ರೀ ಎಂ. ಎಂ. ರಾಯಚೂರ ಎಂಬ ಇಂಜಿನಿಯರರೂ ಸಹ ಈ ನಿಯೋಗದಲ್ಲಿದ್ದು, ಅಲ್ಲಿಯ ದೇವಾಲಯಗಳ ಪುನರುತ್ಥಾನ ಕಾರ್ಯದಲ್ಲಿ ಭಾಗವಹಿಸಿ ಯಶಸ್ವಿಗಳಾಗಿ ಮರಳಿ ಬಂದುದು ಕನ್ನಡಿಗರಿಗೆಲ್ಲ ಹೆಮ್ಮೆಯ ವಿಷಯವೆಂದೆನಿಸುವುದು. ಈ ಲೇಖನಕ್ಕೆ ಬೇಕಾದ ಸಾಹಿತ್ಯ ಹಾಗೂ ಚಿತ್ರಗಳನ್ನೊದಗಿಸಿದ ಕೀರ್ತಿಯು ಅವರಿಗೆ ಸಲ್ಲುವುದು. ಕಾಂಬೋಡಿಯಾ [illegible]

ವಿಜಾಪುರದ ಸಪ್ತ ಹನುಮಂತ

ತುಂಗಾತನಯ.

ಭರತ ಖಂಡದಲ್ಲಿ ಎಲ್ಲೆಲ್ಲೂ ಪೂಜಿಸಲ್ಪಡುವ ದೇವರು ಮಾರುತಿ. ಬುದ್ಧಿ, ಬಲ, ಯಶಸ್ಸು, ಧೈರ್ಯಗಳೆಲ್ಲ, ವಾಯುದೇವರ ಅನುಗ್ರಹದಿಂದಲೇ ಎಂಬ ಪ್ರತೀತಿ ಇದೆ.

ದಕ್ಷಿಣಭಾರತವಂತೂ 'ಭಕ್ತಿಯ ತವರು ಮನೆ' ಎಂದೆ ಪ್ರಸಿದ್ಧವಾಗಿದೆ. ಅದರಲ್ಲಿಯೂ ಕರ್ನಾಟಕವು ಭಕ್ತಾಗ್ರೇಸರನಾದ ವಾಯುಸುತ ಹನುಮಂತ ದೇವರ ಜನ್ಮಭೂಮಿ. ರಾಮಾವತಾರದಲ್ಲಿ ಲೀಲೆಗೈದ ಪಾವನ ಕ್ಷೇತ್ರ. ಶ್ರೀರಾಮ - ಲಕ್ಷ್ಮಣ - ಸೀತೆಯರ ಪಾದಧೂಳಿಯಿಂದ ಪವಿತ್ರವಾದ ನೆಲ. ಅಂತೆಯೇ ನಾಡಿನಲ್ಲೆಲ್ಲಿಯೂ ಹನುಮಪ್ಪ ನೆಲೆಸದ ಊರಿಲ್ಲ.

ಊರು ಸುಟ್ಟರೂ ಹನುಮಪ್ಪ ಹೊರಗೆ ಎಂಬ ಗಾದೆಮಾತು ಕೂಡ ಊರಿಗೊಬ್ಬ ಹನುಮಪ್ಪನೆಂಬುದನ್ನು ಹೇಳುತ್ತದೆ.

ಅದರಂತೆ ಅವಿಭಜಿತ ವಿಜಾಪುರ ಜಿಲ್ಲೆ (ಬಾಗಲಕೋಟೆ ಸೇರಿ) ಯಲ್ಲಿ ಕೂಡಾ ಕೋರವಾರೇಶ, ತುಲಸಿಗಿರೇಶ, ಹಲಗಣೇಶ, ಯಲಗೂರೇಶ, ಅಚನೂರೇಶ, ಕೊತ್ತಲೇಶ, ಗೋವಿನ ದಿನ್ನೇಶರು ಅಸಂಖ್ಯ ಭಕ್ತರ ಹೃದಯದಲ್ಲಿ ನೆಲೆಸಿದ್ದಾರೆ.

ಕೃಷ್ಣಾ, ಭೀಮಾ, ಮಲಪ್ರಭಾ, ಘಟಪ್ರಭಾ, ಡೋಣಿ - ಈ ಐದು ನದಿಗಳು ಹರಿಯುವ ಅವಿಭಜಿತ ವಿಜಾಪುರ ಜಿಲ್ಲೆಯಲ್ಲಿ ಸಪ್ತಜಾಗ್ರತ ಪ್ರಾಣದೇವಕ್ಷೇತ್ರಗಳಿರುವುದು ವೈಶಿಷ್ಟ್ಯ. ಈ ಕ್ಷೇತ್ರದಲ್ಲಿಯ ಪ್ರಾಣೇಶನು ಸುತ್ತಮುತ್ತಲಿನ ಊರುಗಳಲ್ಲಿ ಅಧಿಪತಿಯಾಗಿದ್ದಾನೆ. ಆರಾಧ್ಯ ದೇವತೆಯೂ ಆಗಿದ್ದಾನೆ.

ಜಿಲ್ಲೆಯಲ್ಲಿ ವಾಸಿಸುವ ಮಾರುತಿ ಭಕ್ತರು ಈ ಏಳು ಜಾಗೃತ ದೇವಸ್ಥಾನಗಳಿಗೆ ಭೇಟಿ ನೀಡುವ ಪದ್ಧತಿ ಅನುಸರಿಸುತ್ತಾ ಬಂದಿದ್ದಾರೆ. ರವಿವಾರ, ಅಮಾವಾಸ್ಯೆ ದಿನ ಈ ಭೇಟಿಗೆ ವಿಶೇಷ ಮಹತ್ವ ಬರುತ್ತಿದೆ. ಎಲ್ಲ ದೇವಸ್ಥಾನಗಳಿಗೆ ಸುತ್ತಾಡಿ ಬರಲು ಒಂದೇ ಒಂದು ದಿನದಲ್ಲಿ 350 ಕಿ.ಮೀ. ಪಯಣಿಸಬೇಕಾಗುತ್ತದೆ. ಬೆಳಗ್ಗೆ ವಿಜಾಪುರ ಬಿಟ್ಟರೆ ಎಲ್ಲ ಕ್ಷೇತ್ರ ಸಂದರ್ಶಿಸಿ ಮರಳಿ ಬರಬೇಕಾದರೆ ರಾತ್ರಿ 9 ಗಂಟೆ ಆಗಿರುತ್ತದೆ.

1. ವಿಜಾಪುರ - ದೇವರಹಿಪ್ಪರಗಿ - ಸಿಂದಗಿ ರಸ್ತೆಯ ಕೋರವಾರ. 2) ನಿಡಗುಂದಿ ಆಲಮಟ್ಟಿ ರಾಷ್ಟ್ರೀಯ ಹೆದ್ದಾರಿಯಲ್ಲಿರುವ ಯಲಗೂರ. 3) ಆಲಮಟ್ಟಿ ರಾಮಾಪೂರ ಮಾರ್ಗದಲ್ಲಿರುವ ಅಚನೂರ. 4) ಬಾಗಲಕೋಟದಲ್ಲಿಯ ಕೊತ್ತಲೇಶ. 5) ಬಾಗಲಕೋಟ - ಗದ್ದನಕೇರಿ ಕ್ರಾಸ್ ಬಳಿಯ ತುಳಸಿಗಿರಿ. 6) ಗದ್ದನಕೇರಿ - ಅನಗವಾಡಿ - ಬೀಳಗಿ - ಗಲಗಲಿ ಮಾರ್ಗದ ಗೋವಿನದಿನ್ನಿ. 7) ವಿಜಾಪುರ ತಾಲೂಕಿನ ಬಲೇಶ್ವರ ಮಾರ್ಗದಲ್ಲಿರುವ ಹಲಗಣಿ.

ಈ ಎಲ್ಲ ಜಾಗೃತ ಹಣಮಂತ ಕ್ಷೇತ್ರಗಳಿಗೆ ಒಂದೇ ದಿನದಲ್ಲಿ ಭೇಟಿ ನೀಡುವ ಸಾರಿಗೆ ವ್ಯವಸ್ಥೆಯನ್ನು ನಗರದಲ್ಲಿ ಮಾಡಲಾಗಿದ್ದು, ವಿಜಾಪುರದ ಕಾಳಿಕಾಗುಡಿ ಬಳಿ ಗುಂಡಬಾವಡಿ ಹತ್ತಿರದ ಸುನೀಲ ಮಹಾದೇವ ಮಮದಾಪುರ ಹಾಗೂ ಯೋಗೇಶ ಸಹಸ್ರ ಬುದ್ದೆ ಅದರ ಉಸ್ತುವಾರಿ ವಹಿಸುತ್ತಿದ್ದಾರೆ. ಭಕ್ತಾದಿಗಳು ಈ ಸಾರಿಗೆ ಸದುಪಯೋಗ ಮಾಡಿಕೊಳ್ಳುವ ಅನುಕೂಲತೆ ಒದಗಿಸಲಾಗಿದೆ.

1. ಕೋರವಾರೇಶ :

ಅತ್ಯಂತ ಪ್ರಾಚೀನವೆಂದು ಹೇಳಲಾಗಿರುವ ಇಲ್ಲಿಯ ಮಾರುತಿ ಮಂದಿರಕ್ಕೆ ವೈಶಿಷ್ಟ್ಯಪೂರ್ಣ ಇತಿಹಾಸವಿದೆ. ವಿಜಾಪುರ ಜಿಲ್ಲೆ ಸಿಂಧಗಿ ತಾಲೂಕಿನ ಖ್ಯಾತನಾಮರಾದ ಸೊಂದೆ ಮಠದ ವಾದಿರಾಜಸ್ವಾಮಿಗಳು ತಮ್ಮ ಅಂತರ ದೃಷ್ಟಿಯಿಂದ ಭೂಗತ ಪ್ರತಿಮೆ ಇರುವುದನ್ನು ಕಂಡು ಪುನರುತ್ಥಾನಮಾಡಿದ ರೆಂದು ಇತಿಹಾಸ ಹೇಳುತ್ತದೆ.

ಕೋರಾವಾರೀಶ ವೇದ ಪ್ರತಿಪಾದ್ಯನು. ವೇದಘೋಷ ಆತನಿಗೆ ಅತ್ಯಂತ ಪ್ರೀತಿಕರವಾದದ್ದು. ಅಂತೆಯೇ ಚೈತ್ರೋತ್ಸವ ದಲ್ಲಿ ವೇದೋಕ್ತ ಹೋಮ ಹವನಾದಿಗಳಿಂದ ಆತನ ಪ್ರಚಂಡವಾದ ಆರಾಧನೆಯು ಉತ್ಸವದ ಪ್ರಧಾನ ಅಂಗವಾಗಿ ಪರಂಪರೆಯಿಂದ ಸಾಗಿ ಬಂದಿದೆ.

ಕೋರವಾರ ಪ್ರಾಣದೇವರ ವಿಗ್ರಹದಲ್ಲಿ ವೀರಾವೇಶವಿದೆ. ಆತನಲ್ಲಿ ವೀರರಸ ಮೈದಾಳಿದಂತೆ ತೋರುವುದು. ಜಾಗೃತ ಪ್ರಾಣದೇವರು ವಾತ್ಸಲ್ಯದಿಂದ ತನ್ನ ಭಕ್ತರಿಗಾಗಿ ಮಾಡಿದ ಕೃತಿಗಳು ಅದ್ಭುತ ಘಟನೆಗಳಾಗಿವೆ.

ಭಕ್ತಿಗೆ ಬಡವ ಬಲ್ಲಿದರೆಂಬ ಭೇದ - ಭಾವವಿಲ್ಲ. ಜಾತಿ ಮತಗಳ ಅಡ್ಡಗೋಡೆಯಿಲ್ಲ. ಮೇಲು ಕೀಳೆಂಬ ಭಾವನೆಯ ಬಂಧನವಿಲ್ಲ ಎಂಬುದಕ್ಕೆ ಕೋರವಾರೇಶರ ಭಕ್ತಸಮೂಹವೇ ಸಾಕ್ಷಿ. ಕ್ಷೇತ್ರದ ಚರ್ಮಕಾರರು ಶುಚಿರ್ಭೂತವಾಗಿ ಭಕ್ತಿಶ್ರದ್ಧೆಯಿಂದ ಸುಮಾರು 2 ಅಡಿ ಉದ್ದ ಅಳತೆಯ ವೀರೋಚಿತವಾದ ಪಾದರಕ್ಷೆಗಳನ್ನು ತಯಾರಿಸಿ ಅರ್ಪಿಸುವ ಪರಂಪರೆ ಮುಂದುವರೆಸಿಕೊಂಡು ಬಂದಿದ್ದಾರೆ.

2. ಯಲಗೂರೇಶ :

ವಿಜಾಪುರ ಜಿಲ್ಲೆ ಮುದ್ದೇಬಿಹಾಳ ತಾಲೂಕಿನ ಕೃಷ್ಣಾತೀರದ ಉತ್ತರದಲ್ಲಿ ನೆಲೆಸಿರುವ ಶ್ರೀ ಯಲಗೂರವಾಸ ಹನುಮ ಏಳೂರಿಗೆ ಅಪ್ಪನಾಗಿ ಉಪಾಸನಾದೇವತೆಯಾಗಿದ್ದಾನೆ.

ರಾಮಾಯಣದ ಸಂಸ್ಕೃತಿಯ ಶ್ರೀರಾಮಭಕ್ತಿಯ ಸ್ಪಷ್ಟ ಕುರುಹುಗಳು ಇಂದಿಗೂ



ಯಲಗೂರ ಕ್ಷೇತ್ರದಲ್ಲಿ ಕಾಣಸಿಗುತ್ತವೆ. ಅನೇಕ ಶತಮಾನಗಳ ಹಿಂದೆ ಈ ದೇವಾಲಯವಿರುವ ಜಾಗೆ ಸಂಪೂರ್ಣ ಅರಣ್ಯವಿತ್ತೆಂದು ಹೇಳಲಾಗಿದೆ.

ಶ್ರೀಯಲಗೂರೇಶನ ಮೂರ್ತಿಯು ಭವ್ಯವಾಗಿದ್ದು, ಭಕ್ತರ ಕಣ್ಮನ ಸೆಳೆದು ಭಯಭಕ್ತಿಯನ್ನುಂಟು ಮಾಡುತ್ತದೆ. 5-6 ಅಡಿ ಎತ್ತರವಾಗಿರುವ ಈ ಭವ್ಯಮೂರ್ತಿಯ ಸರ್ವ ಅಂಗಗಳು ಪರಿಸ್ಫುಟವಾಗಿವೆ. ಅಲಂಕಾರ ರಹಿತನಾಗಿದ್ದರೂ ಕಣ್ತುಂಬ ನಿಲ್ಲುವ ರೂಪ ಇದು.

ದೇವಾಲಯದ ಗರ್ಭಗುಡಿ ಚಿಕ್ಕದಾಗಿದ್ದು, ಮುಂದಿನ ರಂಗಮಂಟಪ ವಿಶಾಲವಾಗಿದೆ. ದೇವಾಲಯವು ಸದಾ ವಿವಿಧ ಮತ ಭಕ್ತರಿಂದ ತುಂಬಿತುಳುತ್ತಿರುತ್ತದೆ. ಗರ್ಭಗುಡಿಯ ಮುಂಭಾಗದಲ್ಲಿರುವ ರಂಗಮಂಟಪದಲ್ಲಿಯ ಕಲ್ಲಿನ ಕಂಬಗಳ ರೂಪು ಕೆತ್ತನೆಯಲ್ಲಿ ಚಾಲುಕ್ಯಶೈಲಿ ಕಂಡು ಬರುತ್ತದೆ.

ಶ್ರೀಕೃಷ್ಣವೇಣಿಯ ಸಾನ್ನಿಧ್ಯವು ಯಲಗೂರವನ್ನುಕೃಷ್ಣಾತೀರದ ಪುಣ್ಯಕ್ಷೇತ್ರಗಳಲ್ಲಿ ಒಂದಾಗಿಸಿದೆ. ಉತ್ತರಾದಿ ಮಠದ ಪೂಜ್ಯ ಸತ್ಯಪ್ರಮೋದ ತೀರ್ಥರಿಂದ ಆರೋಹಣವಾದ ಕಳಸ ಆಕರ್ಷಕವಾಗಿದೆ.

ಮಾಘಮಾಸದ ಪೌರ್ಣಿಮೆಯ ನಂತರ ಬರುವ ಮೊದಲ ಶನಿವಾರದಂದು ಯಲಗೂರೇಶನ ಕಾರ್ತಿಕೋತ್ಸವವು ಒಳ್ಳೆ ಭಕ್ತಿಪುರಸ್ಸರವಾಗಿ ಒದಗುತ್ತದೆ.

3. ಅಚನೂರೇಶ :

ಹನುಮ - ಭೀಮ - ಮಧ್ವರಿಂದೊಡ ಗೂಡಿದ ಆಕರ್ಷಕ ಆಂಜನೇಯ ಮೂರ್ತಿಯನ್ನು ಅಚನೂರ ಕ್ಷೇತ್ರದಲ್ಲಿ ಕಾಣಬಹುದು.

ಈ ಮಾರುತಿ ಪ್ರತ್ಯಕ್ಷಗೊಳ್ಳಲು ಕ್ಷೇತ್ರದಲ್ಲಿಲ್ಲಾ ಹೇಳುವ ಕಥೆ ದೃಷ್ಟಾಂತವಾಗಿದೆ. ಈಗ್ಗೆ 200 ವರ್ಷಗಳ ಹಿಂದೆ ಅಚನೂರಿನ ಕುಲಕರ್ಣಿ ಮನೆತನದ ಹಿರಿಯರು ತಮ್ಮ ಹೊಲದಲ್ಲಿ ಉಳುಮೆ ಮಾಡುತ್ತಿದ್ದಾಗ ಎತ್ತುಗಳು ಏಕಾಏಕಿ ನಿಂತು ಬಿಟ್ಟವಂತೆ. ಎಷ್ಟೇ ಪ್ರಯತ್ನ ಪಟ್ಟರೂ ಎತ್ತುಗಳು ಮುಂದೆ ಜಗಲೇ ಇಲ್ಲವಂತೆ. ಬೇಸತ್ತ ಕುಲಕರ್ಣಿ ಉಳುಮೆ ನೇಗಿಲು ಅಲ್ಲೆ ಬಿಟ್ಟು ಮನೆಗೆ ಮರಳಿದರಂತೆ.

ರಾತ್ರಿ ಕುಲಕರ್ಣಿ ಅವರಿಗೆ ಸ್ವಪ್ನದಲ್ಲಿ ಮಾರುತಿ ಪ್ರಸನ್ನನಾಗಿ ''ನಾನು ನಿನ್ನ ಹೊಲದಲ್ಲಿ ನೇಗಿಲ ಬಳಿ ಅಡ್ಡಲಾಗಿ ಕುಳಿತಿದ್ದು. ನನ್ನನ್ನು ನೆಲದಿಂದ ತೆಗೆದು ಪ್ರತಿಷ್ಠಾಪಿಸು'' ಎಂದು ಆದೇಶಿಸಿದನಂತೆ. ಅದರಂತೆ ಅವರು ಮರುದಿನ ಹೊಲಕ್ಕೆ ಹೋಗಿ ಭೂಮಿಯಿಂದ ಮೂರ್ತಿ ತೆಗೆದು ಗ್ರಾಮಸ್ಥರ ಸಮ್ಮುಖದಲ್ಲಿ ಪ್ರತಿಷ್ಠಾಪಿಸಿದರು. ಸುಂದರ ಮಂದಿರ ನಿರ್ಮಾಣವಾಯಿತು. ಈಚೆಗಿನ ವರುಷದಲ್ಲಿ ಕೋಪ್ರೇಶಾಚಾರ್ಯ ಎಂಬ ಇಂಜನೀಯರ ಮಂದಿರದ ಜೀರ್ಣೋದ್ಧಾರಗೊಳಿಸಿದರು.

4. ಕೊತ್ತಲೇಶ :

ಬಾಗಲಕೋಟ ನಗರದ ಕೊತ್ತಲೇಶನ ದೇವಸ್ಥಾನ ಅತ್ಯಂತ ಸುಪ್ರಸಿದ್ಧವಾದುದು. ಕ್ರಿ.ಶ. 1500 ರ ಸುಮಾರಿಗೆ ಪ್ರತಿಷ್ಠಾಪಿಸಿದ ಈ ಕೊತ್ತಲೇಶ ದೇವಸ್ಥಾನ ಪುರಾತನವೆಂದು ಹಿರಿಯರ ಅಂಬೋಣವಾಗಿದೆ. ಕಿಲ್ಲಾಪ್ರದೇಶದ ಕೊತ್ತಲದಲ್ಲಿ ಈ ಹನುಮಂತನನ್ನು ಪ್ರತಿಷ್ಠಾಪಿಸಿದ್ದರಿಂದ ಇದಕ್ಕೆ ಕೊತ್ತಲೇಶ ಎಂಬ ಹೆಸರು ಬಂದಿತೆಂದು ಹೇಳಲಾಗುತ್ತದೆ.

ವಿಜಯನಗರ ಸಾಮ್ರಾಜ್ಯ ಕಾಲದಲ್ಲಿ ಈ ದೇವಸ್ಥಾನ ಸ್ಥಾಪಿಸಲಾಯಿತೆಂದು ತಿಳಿದು ಬರುತ್ತದೆ. ಪೇಶ್ವೆ ಕಾಲದಲ್ಲಿ ಈ ಜಾಗ್ರತ ಹನುಮಂತ ಗುಡಿಯನ್ನು ಸಂರಕ್ಷಿಸಲಾಗಿತ್ತು. ಈ ದೇವಸ್ಥಾನಕ್ಕೆ ಅನೇಕರು ಜಮೀನು ದಾನ ನೀಡಿದರೆಂದು ಹೇಳಿಕೆಯಾಗಿದೆ. ಆ ಜಮೀನಿನ ಉತ್ಪನ್ನದಿಂದ ದೇವಸ್ಥಾನದ ಕಾರ್ಯನಿರ್ವಹಣೆ ಮಾಡಲಾಗುತ್ತದೆ.

ಈ ಕೋತ್ತಲೇಶನ ಇನ್ನೊಂದು ವೈಶಿಷ್ಟ್ಯವೆಂದರೆ ದೇವಾಲಯದ ಮುಂಬಾಗಿಲು ಉತ್ತರಾಭಿಮುಖವಿದ್ದು ಆದರೆ ಸ್ವಯಂಭೂ ಮೂರ್ತಿಯು ಪಶ್ಚಿಮಾಭಿಮುಖವಾಗಿದೆ. ಸಾಮಾನ್ಯವಾಗಿ ಎಲ್ಲೆಡೆಗೆ ಹನುಮಂತ ದೇವಾಲಯದ ಮುಂಬಾಗಿಲು ದಕ್ಷಿಣಾಭಿ ಮುಖವಾಗಿರುತ್ತವೆ.

ಚೈತ್ರ ಮಾಸದ ಪೌರ್ಣಿಮೆಯಿಂದ ಈ ಜಾಗೃತ ಹನುಮಂತ ದೇವರ ಉತ್ಸವನ್ನು ಅತ್ಯಂತ ವೈಭವದಿಂದ ಆಚರಿಸಲಾಗುತ್ತದೆ.

5. ತುಲಸಿಗಿರೀಶ :

ಬಾಗಲಕೋಟ - ಬೆಳಗಾವಿ ರಾಜ್ಯ ಹೆದ್ದಾರಿಯಲ್ಲಿ ಬಾಗಲಕೋಟೆಯಿಂದ 10 ಕಿ.ಮೀ. ಅಂತರದ ತುಳಸಿಗೇರಿ ಗ್ರಾಮದಲ್ಲಿ ಪ್ರಸಿದ್ಧ ಹನುಮಾನ ದೇವಾಲಯವಿದೆ. ತಿರುಪತಿ ವೆಂಕಪ್ಪನ ಮೂರ್ತಿಗೆ ಈ ಹನುಮಂತನ ಮೂರ್ತಿ ಹೋಲುವುದರಿಂದ ದೇವಾಲಯಕ್ಕೆ ವಿಶೇಷ ಮಹತ್ವ ಬಂದಿದೆ.

ಬಾದಾಮಿಚಾಲುಕ್ಯರ ರಾಜ ತಿರುಪತಿ ಭಕ್ತನಾಗಿದ್ದು, ಆತ ಪ್ರತಿವರ್ಷ ತಿರುಪತಿ ಯಾತ್ರೆ ಕೈಗೊಳ್ಳುತ್ತಿದ್ದನಂತೆ. ಆತನ ಭಕ್ತಿಗೆ ಮೆಚ್ಚಿದ ವೆಂಕಪ್ಪ ರಾಜನ ಸ್ವಪ್ನದಲ್ಲಿ ಪ್ರತ್ಯಕ್ಷನಾಗಿ ಸಮೀಪದ ತುಳಸಿ ವನದಲ್ಲಿ ಮಾರುತಿ ರೂಪದ ಮೂರ್ತಿಯಲ್ಲಿ ನಾನಿದ್ದೇನೆ. ನನ್ನನ್ನು ಹೊರತೆಗೆದು ಪ್ರತಿಷ್ಠಾಪಿಸು ಹಾಗೂ ಪ್ರತಿದಿನ ಪೂಜೆ ಮಾಡಿದರೆ ಅದು ನನಗೆ ತಲುಪುತ್ತದೆ ಎಂದು ಹೇಳಿದನಂತೆ.

ವೆಂಕಪ್ಪನ ಆಶಯದಂತೆ ರಾಜ ತುಳಸಿಗೇರಿಯ ಸಮೀಪ ಮೂರ್ತಿ ಪ್ರತಿಷ್ಠಾಪಿಸಿದ. ತಿರುಪತಿಯಲ್ಲಿ ವೆಂಕಪ್ಪನನ್ನು ಪೂಜಿಸುವ ಪೂಜಾಪದ್ಧತಿಯಂತೆ ಇಲ್ಲಿ ದಿನಕ್ಕೆ ಐದುಬಾರಿ ಪೂಜೆ ಕೈಗೊಳ್ಳಲಾಗುತ್ತದೆ. ಅದು ಇಂದಿನ ವರೆಗೂ ಅನೂಚಾನವಾಗಿ ಸಾಗಿ ಬಂದಿದೆ.

ಈ ಮೂರ್ತಿಯ ಇನ್ನೊಂದು ವೈಶಿಷ್ಟವೆಂದರೆ ತಲೆಯ ಮೇಲೆ ವೈಜಯಂತಿ ಮಾಲೆ, ಶಂಖ ಚಕ್ರಾಂಕಿತ ಈ ಮೂರು ಕಾಣಸಿಗುತ್ತವೆ.

(31ನೇ ಪುಟನೋಡಿ.)

ಹರಿದಾಸಸಾಹಿತ್ಯದಲ್ಲಿ ಜೀವನ ಮೌಲ್ಯಗಳು

- ಡಾ|| ಎಚ್. ವಿ. ನರಸಿಂಹಮೂರ್ತಿ.

ಬದುಕು ಒಂದು ಹೋರಾಟ. ಅದು ಒಡ್ಡುವ ಸವಾಲನ್ನು ಜೀವಿಯು ಎದುರಿಸಿ ಗೆಲ್ಲಬೇಕು. ತನ್ನ ಪಾಲಿಗೆ ಬಂದ ಜೀವನವನ್ನು ಸಹ್ಯವಾಗಿಸಿಕೊಂಡು ತಾನು ಚೆನ್ನಾಗಿ ಬಾಳಬೇಕು; ಜೊತೆಗೆ ತನ್ನ ಸಹಜೀವಿಗಳನ್ನೂ ಬಾಳಗೊಡಬೇಕು. ಹೇಗೆ ಬಾಳಿದರೆ ಈ ಎರಡನ್ನೂ ಸಾಧಿಸಬಹುದು ಎಂಬ ಬಗ್ಗೆ ಮನುಷ್ಯ ಆರಂಭದಿಂದಲೂ ಪ್ರಯತ್ನಿಸುತ್ತಲೇ ಬಂದಿದ್ದಾನೆ. ಅದರಲ್ಲಿಯೂ ಕೆಲಮಂದಿ ಮಾನವ ಹಿತಸಾಧಕರು ತಮ್ಮ ಬಾಳನ್ನೇ ಪ್ರಯೋಗಶಾಲೆಯಾಗಿಸಿಕೊಂಡು, ಜೀವನದ ಮೌಲ್ಯಗಳನ್ನು ನಿರುಕಿಸಲು ಶ್ರಮಿಸಿ, ಈ ವಿಚಾರದಲ್ಲಿ ಆದರ್ಶರೆನಿಸಿದ್ದಾರೆ. ಅವರು ಬದುಕನ್ನು ಅರ್ಥೈಸಿದ ರೀತಿ ಅನುಕರಣೀಯ, ಅನುಸರಣೀಯ.

ಶರಣರು ಮತ್ತು ದಾಸರು ನಮ್ಮ ನಾಡನ್ನು ಪವಿತ್ರವಾಗಿಸಿದ ಪುಣ್ಯಪುರುಷರು. ಅವರು ನಡೆದಂತೆ ನುಡಿದರು. ನಡೆ - ನುಡಿಗಳು ಒಂದಾದ ಅವರ ಬಾಳು ಬಂಗಾರವಾಯಿತು; ಮಾತು ಮಾಣಿಕ್ಯವಾಯಿತು: ಉಳಿದವರಿಗೆ ದಾರಿದೀಪವಾಯಿತು. ಹನ್ನೆರಡನೆಯ ಶತಮಾನದಲ್ಲಿ ಶರಣರು, ಹದಿನೈದು - ಹದಿನಾರನೇ ಶತಮಾನದಲ್ಲಿ ದಾಸರು ಈ ಬಗೆಗೆ ಸಾಕಷ್ಟು ಚಿಂತನೆ ನಡೆಸಿದ್ದಾರೆ.

ಜೀವನದ ಮೌಲ್ಯ ಏನು? ಬದುಕಿನ ನಿತ್ಯ - ಅನಿತ್ಯಗಳು ಯಾವುವು? ನಿತ್ಯ ಜೀವನದಲ್ಲಿ ನಾವು ಎದುರಿಸುವ ವಿಭಿನ್ನ ಸಮಸ್ಯೆಗಳೇನು? ನಮ್ಮಲ್ಲಿರುವ ಕುಂದು - ಕೊರತೆಗಳೇನು? ಮಾನವ ಸ್ವಭಾವದ ಗುಣ - ದೋಷಗಳಾವುವು? ನಮ್ಮ ಚೇತನದ ಮಟ್ಟ ಉತ್ತಮಗೊಳ್ಳಲು ಮಾಡಬೇಕಾದ ಸುಧಾರಣೆಗಳೇನು? - ಮೊದಲಾದ ಪ್ರಶ್ನೆಗಳಿಗೆ ಮಹಾನುಭಾವಿಗಳಾದ ಹರಿದಾಸರು ತಮ್ಮ ಅಮೂಲ್ಯವಾದ ಅನುಭವದ ಮೂಲಕ ಉತ್ತರ ಹೇಳಿದ್ದಾರೆ. ಅಷ್ಟೇ ಅಲ್ಲ, ನುಡಿವ ಮುನ್ನ ನಡೆದು ತೋರಿ ಆದರ್ಶರಾಗಿದ್ದಾರೆ. ಈ ಕಾರಣದಿಂದಲೇ ಅವರ ಬೋಧನೆಗಳು ಹೆಚ್ಚು ಸತ್ತ್ವಪೂರ್ಣ ಹಾಗೂ ಹೆಚ್ಚು ಪರಿಣಾಮಕಾರಿ.

ಹರಿದಾಸರು ತಮ್ಮ ಜೀವಿತದಲ್ಲಿ ಎದುರಾದ ಸಮಸ್ಯೆಗಳನ್ನು ಹೇಗೆ ಬಿಡಿಸಲು ಯತ್ನಿಸಿದರು, ತಮ್ಮನ್ನು ಕಾಡುತ್ತಿದ್ದ ಕ್ಲೇಶಗಳನ್ನು ಹೇಗೆ ಪರಿಹರಿಸಿಕೊಂಡರು - ಎಂಬುದನ್ನು ನಾವು ಅರಿಯುವುದರಿಂದ ಲಾಭವಿದೆ. ಅವರು ಕಂಡುಕೊಂಡ ಪರಿಹಾರ ನಮಗೂ ದಾರಿದೀಪವಾಗಬಹುದು; ಬಿಡಿಸಲಾಗದ ಸಮಸ್ಯೆಗಳನ್ನು ಬಿಡಿಸಲು ನೆರವಾಗಬಹುದು. ದೇಶದ ಸಾಮಾಜಿಕ ಜೀವನವನ್ನು ಸುಖಮಯವಾಗಿಸುವಲ್ಲಿ ಮಹತ್ತರ ಪಾತ್ರವನ್ನು ಅವು ನಿರ್ವಹಿಸಬಲ್ಲವು.

ಹರಿದಾಸರು ಬದುಕಿನ ಎಲ್ಲ ಮುಖಗಳನ್ನು ಕುರಿತು ವಿಚಾರಮಾಡಿದ್ದಾರೆ. ಜೀವನದ ಎಲ್ಲ ರಂಗಗಳ ಬಗೆಗೂ ಅವರು ತಿಳಿವಿನ ಬೆಳಕು ಚೆಲ್ಲಿದ್ದಾರೆ. ಸಮಾಜದ ಅಂಕು - ಕೊಂಕುಗಳಿರಲಿ, ಅಥವಾ ವ್ಯಕ್ತಿಗಳಲ್ಲಿನ ವಿವಿಧ ಮನೋದೌರ್ಬಲ್ಯಗಳಿರಲಿ - ಮುಚ್ಚುಮರೆಯಿಲ್ಲದೆ ಎತ್ತಿತೋರಿದ್ದಾರೆ. ಒಂದುಕಡೆ ವೈಭವ, ಇನ್ನೊಂದು ಕಡೆ ವೈರಾಗ್ಯ - ಎರಡನ್ನೂ ತುಲನೆ ಮಾಡಿ ತೋರಿಸಿ, ಜೀವನ ಹಸನಾಗಲು ಯಾವುದು ಎಷ್ಟು-ಎಷ್ಟು ಬೇಕು - ಎಂಬುದನ್ನು ನಿರೂಪಿಸಿದ್ದಾರೆ. ಇಂಥ ಕೆಲಸವನ್ನು ಅತ್ಯಂತ ಸಮರ್ಥವಾದ ರೀತಿಯಲ್ಲಿ ನಿರ್ವಹಿಸುವುದು ಹರಿದಾಸರಂಥವರಿಗೆ ಮಾತ್ರಸಾಧ್ಯ. ಏಕೆಂದರೆ ಅವರಿಗೆ ಯಾರದಾಕ್ಷಿಣ್ಯವೂ ಇಲ್ಲ. ಅವರ ನಿಸ್ವಾರ್ಥದ ಬದುಕಿನಲ್ಲಿ ಅವರಿಗೆ ವೈಯಕ್ತಿಕ ಹಿತಾಸಕ್ತಿಗಳೇನೂ ಇಲ್ಲ. ಅರಸನ ಅಂಕೆಯಾಗಲಿ, ಅಧಿಕಾರಿಗಳ ಬೆದರಿಕೆಯಾಗಲೀ ಇಲ್ಲ, ಹೊಗಳಿಕೆಗೆ ಹಿಗ್ಗದ, ತೆಗಳಿಕೆಗೆ ಕುಗ್ಗದ ಸ್ಥಿತಪ್ರಜ್ಞರು, ಅವರು. ಹೀಗಾಗಿ ಅವರ ನುಡಿಗಳೆಂದರೆ ಕಾರುಣ್ಯರೂಪವಾದ ಪ್ರಕೃತಿಯ ವರದಾನವಿದ್ದಂತೆ. ಅವರ ನುಡಿಯೆಂದರೆ ಬಾಳನ್ನು ಸಂಪನ್ನಗೊಳಿಸುವ, ಉದಾತ್ತಗೊಳಿಸುವ ದಿವ್ಯ ಸಂಜೀವಿನಿ. ಜೀವನವನ್ನು ಹೇಗೆ ರೂಪಿಸಿಕೊಳ್ಳಬೇಕು - ಎಂಬುವುದರ ಸಮರ್ಥ ದಿಗ್ದರ್ಶನ ಅವರ ನುಡಿಗಡಣದಲ್ಲಿದೆ.

ದಾಸರದು ಊರಿಂದ ಊರಿಗೆ ಭಿಕ್ಷಾಟನೆ ಮಾಡುತ್ತಾ ಅಲೆದಾಡುವ ಕಾಯಕ. ಹಾಗಾಗಿ ಜನಜೀವನವನ್ನು ಒಳಹೊಕ್ಕು ನೋಡಲು, ಅದರ ವೈವಿಧ್ಯ ಮತ್ತು ವೈಶಿಷ್ಟ್ಯಗಳನ್ನು ಆಳವಾಗಿ, ಸೂಕ್ಷ್ಮವಾಗಿ ಅಭ್ಯಾಸಮಾಡಲು ಅವರಿಗೆ ಅನುಕೂಲವಾಯಿತು. ಜನರ ಸಂಪರ್ಕವನ್ನು ನಿಕಟವಾಗಿಟ್ಟುಕೊಂಡಿದ್ದ ಹರಿದಾಸರು ಜನರ ಎಲ್ಲ ದೌರ್ಬಲ್ಯಗಳನ್ನು, ದೋಷಗಳನ್ನು, ಕೊರತೆಗಳನ್ನು ಕಂಡುಕೊಂಡರು. ತಮ್ಮ ಸುತ್ತಮುತ್ತಲಿನ ಜನರ ಬಾಳು ಹಸನಾಗಬೇಕು ಎಂಬ ಹಂಬಲ ಅವರದು. ಜನರಲ್ಲಿ ದೈವಭಕ್ತಿ, ಸತ್ಯ - ಧರ್ಮ, ನೈಜನೀತಿ, ಜೀವನ ನಿಷ್ಠೆಗಳು ಬೆಳೆಯಬೇಕೆಂಬುದು ಅವರ ಕಾಳಜಿ; ಅದೇ ಅವರ ಬಾಳ ಉಸಿರು. ದಾಸರು ಒಂದು ಮತವನ್ನು, ಧರ್ಮವನ್ನು ಪ್ರತಿಪಾದಿಸಿದ್ದರೂ, ಅವರು ಮಾನವ ಮೌಲ್ಯಗಳನ್ನು ಎತ್ತಿಹಿಡಿದಿದ್ದಾರೆ. ಅದಿಲ್ಲದ ಯಾವುದನ್ನೂ ಅವರು ಒಪ್ಪಲಿಲ್ಲ, ಆದ್ದರಿಂದಲೇ ಅವರ ನುಡಿಗೆ, ಹಾಡುಗಳಿಗೆ ಸರ್ವಮಾನ್ಯತೆ ದೊರೆಯಿತು. ಅವರು ಲಕ್ಷಾಂತರ ಕೃತಿರಚನೆ ಮಾಡಿದ್ದಾರೆ. ಹಾಡಿದ್ದಾರೆ. ಪದ, ಸುಳಾದಿ, ಉಗಾಭೋಗ, ಸುವಾಲಿ, ಶ್ಲೋಕ, ಕಂದ, ವಚನ, ಸೀಸಪದ್ಯ, ವೃತ್ತ, ದ್ವಿಪದಿ, ತ್ರಿಪದಿ, ಷಟ್ಪದಿ, ಅಷ್ಟಪದಿ, ರಗಳೆ, ಯಾಲಪದ - ಹೀಗೆ ಅನೇಕ ಛಂದೋರೂಪಗಳಲ್ಲಿ ಕೃಷಿ ನಡೆಸಿದ್ದಾರೆ.

ಹರಿದಾಸರ ಸಾಹಿತ್ಯಸೃಷ್ಟಿಯು ಹಿಂದೆ ಮುಂದುವರಿಯುತ್ತಿರುವುದು ಅನಾದಿ ...



ಹೃದಯ. ತಮ್ಮ ಸಹಜೀವಿಗಳ ಬಗ್ಗೆ ಅವರಿಗೆ ಅಪಾರ ಅನುಕಂಪ. ಅವರು ಚೆನ್ನಾಗಿ ಬಾಳಬೇಕು; ಬದುಕಬೇಕು - ಎಂದು ಅವರ ಅಂತಃಕರಣ ತುಡಿಯಿತು. ತಿಳಿದೋ, ತಿಳಿಯದೆಯೋ ಜನರು ತಮ್ಮ ಬಾಳಿನಲ್ಲಿ ತೋರುವ ಅಂಧಶ್ರದ್ಧೆ - ಡಂಭಾಚಾರಗಳಿಂದ ಅವರು ಬೇಸತ್ತಿರುವಂತೆಯೇ ಸಮಾಜದ ನೈತಿಕ ಅಧಃಪತನವನ್ನು ಕಂಡು ನೊಂದಿದ್ದಾರೆ. ಜನತೆಯ ಅರ್ಥಹೀನ ಬದುಕನ್ನು ಕಂಡು ಕನಲಿದ್ದಾರೆ. ಇರುವ ತಪ್ಪನ್ನು ತಿದ್ದಿಕೊಂಡು ಬಾಳನ್ನು ಹಸನಾಗಿಸಿಕೊಳ್ಳಲು ಹಾರೈಸಿದ್ದಾರೆ. ಅವರು ಧರ್ಮದ ಮೇಲಣ ಕಾಳಜಿಯಿಂದ ನುಡಿದ ನುಡಿಗಳು ಇಂದಿಗೂ ಜ್ವಲಂತವಾಗಿವೆ. ಅಜ್ಞಾನ, ಜಡತೆಗಳನ್ನು ಹೊಡೆದಟ್ಟುವ ಜ್ಞಾನದ ಕಿಡಿಗಳಂತಿವೆ. ಜನರ ಡಾಂಭಿಕತನ ಅವರಿಗೆ ನಗೆ ತರಿಸಿದೆ.

ನಗೆಯು ಬರುತಿದೆ ಎನಗೆ
ನಗೆಯು ಬರುತಿದೆ
ಜಗದೊಳಿರುವ ಮನುಜರೆಲ್ಲ
ಹಗರಣ ಮಾಡುವುದ ಕಂಡು
ಪರರ ವನಿತೆಯೊಲುಮೆಗೊಲಿದು
ಹರುಷ ದಿಂದ ಅವಳ ಕರೆದು
ಹರಿವ ನೀರಿನೊಳಗೆ ಮುಳುಗಿ
ಬೆರಳ ಎಣಿಸುತಿಹರ ಕಂಡು
ಕಾಮ - ಕ್ರೋಧ ಮನದೊಳಿಟ್ಟು
ತಾನು ವಿಷಯ ಪುಂಜನಾಗಿ
ಪುರಂದರ ವಿಠಲನ ನಾಮ
ನೆನೆಯುವವರ ಕಂಡು

- ಎಂದು ಅವರು ಮುಖದ ಮೇಲೆ ಹೊಡೆದಂತೆ ಹೇಳಿದ್ದಾರೆ.

ಮಾನವನ ಮನಸ್ಸಿಗೆ ನಾಟುವಂತೆ ಅನುನಯದಿಂದ ಬುದ್ಧಿಹೇಳುವ ರೀತಿ ವಿಶಿಷ್ಟವಾದುದು :

ಸಾರಿ ದೂರಿ ಹೇಳುತೇನೆ
ಕೆಟ್ಟೆ ಕಂಡೆಯಾ ಬುದ್ಧಿಮನವೆ
ದೂರೋ ಬುದ್ಧಿ ಮಾಡಬೇಡ
ಕೈಯೊಳಿಕೋ ಕಡ್ಡಿ
ನಿನ್ನ ಕೈಯೊಳಿಕೊ ಕಡ್ಡಿ
ಕೋಪವನ್ನೇ ಮಾಡದಿರು
ಪಾಪಕೆ ಗುರಿಯಾಗದಿರು
ಶ್ರೀಪತಿಯ ನಾಮವನು
ನೀ ಪಠಿಸುತಲಿರು ಮನವೆ
ಅಷ್ಟಮದದಿ ಮೆರೆಯದಿರು
ನಷ್ಟಕೆ ಗುರಿಯಾಗದಿರು
ದುಷ್ಟ ಸಂಗವನ್ನು ಮಾಡಿ
ಭ್ರಷ್ಟನಾಗಬೇಡ ಮನವೆ

-ಎಂದು ವ್ಯಕ್ತಿತ್ವದ ಸಮಗ್ರ ವಿಕಸನದ ದಾರಿ ತೋರಿದ್ದಾರೆ.

ಬದುಕನ್ನು ಅರ್ಥಮಾಡಿಕೊಳ್ಳಲು ಮೊದಲ ಹೆಜ್ಜೆ ನಮ್ಮನ್ನು ನಾವು ಅರ್ಥಮಾಡಿಕೊಳ್ಳುವುದು. ಮನದ ಸರಕನ್ನೆಲ್ಲ ಬಿಚ್ಚಿ ಬಯಲಿಗಿಟ್ಟು, ಕೆಟ್ಟದ್ದನ್ನೆಲ್ಲ ಬಿಟ್ಟು ಒಳ್ಳೆಯದನ್ನೆಲ್ಲ ಮೈಗೂಡಿಸಿಕೊಳ್ಳಲು ಇದು ಅಗತ್ಯ.

ಒಬ್ಬೊಬ್ಬ ವ್ಯಕ್ತಿಯೂ ಹೀಗೆ ಆತ್ಮಶೋಧನೆ ಮಾಡಿಕೊಂಡು ತನ್ನ ಡೊಂಕನ್ನು ಸರಿಪಡಿಸಿಕೊಂಡರೆ ಸಮಾಜ - ದೇಶ ಸುಧಾರಿಸುವುದು ಎಷ್ಟು ಹೊತ್ತು? ಮನಃಶುದ್ಧಿಗೆ ಆತ್ಮಶೋಧನೆ ತೀರ ಅಗತ್ಯ. ಆಯಾ ದಿನದ ಮನಸ್ಸಿನ ಶೋಧನೆ ನಡೆದು, ಪಾಪ - ಪುಣ್ಯಗಳ ಜಮಾ - ಖರ್ಚು ನೋಡಿಕೊಳ್ಳಬೇಕೆನ್ನುತ್ತಾರೆ, ದಾಸರು.

ಮನವ ಶೋಧಿಸಬೇಕೋ ನಿಚ್ಚ
ದಿನ-ದಿನ ಮಾಡುವ ಪಾಪ-ಪುಣ್ಯದವೆಚ್ಚ
ಧರ್ಮ - ಅಧರ್ಮ ವಿಂಗಡಿಸಿ
ಅಧರ್ಮದ ನರಗಳ ಬೇರ ಕತ್ತರಿಸಿ
ನಿರ್ಮಲಾಚಾರದಿ ಚರಿಸಿ ಪರಬೊಮ್ಮ
ಮೂರುತಿ ಪಾದಕಮಲವ ಭಜಿಸಿ

-ಎಂದರು. ಹಾಗೆ ನೋಡಿಕೊಂಡಾಗ ನಮ್ಮ ಹುಳುಕು ನಮಗೆ ಕಾಣುತ್ತದೆ. ತಿದ್ದಿಕೊಳ್ಳಲು ಸಾಧ್ಯವಾಗುತ್ತದೆ.

ಎಳ್ಳುಕಾಳಿನಷ್ಟು ಭಕ್ತಿ ಎನ್ನೊಳಗಿಲ್ಲ
ಕಳ್ಳರಿಗೆ ಕಳ್ಳನಂತೆ ಬೆಳ್ಳಕ್ಕಿಯಂದದಿ ಡಂಭ
ಗಾಣದೆತ್ತಿನಂತೆ ಕಣ್ಣುಮುಚ್ಚಿ ಪ್ರದಕ್ಷಿಣೆ ಮಾಡಿ
ಕಾಣದೆ ತಿರುಗುವೆನೆರಡು ಕಣ್ಣಿದ್ದ ನಾನು
ಮಾಣಿಕ್ಯ ರಾಶಿಯಲ್ಲಿ ಅಂಧರೈವರು ಕೂಡಿ
ಆಣಿಮುತ್ತ ಹಿಡಿದು ಹಿಡಿದು
ಬಿಡುವಂತೆ ಭ್ರಮಿಪೆನಯ್ಯಾ

ಸಮಾಜದಲ್ಲಿ ಜನರನ್ನು ಮೆಚ್ಚಿಸಿ ಬಾಳುವುದು ಕಷ್ಟ. ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ಹೇಳಿ ದಿಕ್ಕು ತಪ್ಪಿಸುತ್ತಾರೆ. ಅವರೆಲ್ಲರನ್ನು ಅನುಸರಿಸಿ ಬಾಳುವುದು ಸುಲಭವಲ್ಲ; ಸಾಧುವೂ ಅಲ್ಲ. ತನ್ನ ಮನಸ್ಸನ್ನು ಶುದ್ಧವಾಗಿಸಿಕೊಂಡು ತನ್ನ ಮನ ಮೆಚ್ಚುವಂತೆ ಬಾಳುವುದು ಒಳ್ಳೆಯದು.

ಹರಿಹರಿ ನಿನ್ನನ್ನು ಒಲಿಸಲು ಬಹುದು
ನರಜನರೊಲಿಸೋದು ಬಲುಕಷ್ಟ
ಸರಿಬಂದಂತೆ ಆಡುವ ಜನರಿಗೆ
ಕಡೆತನ ನಿರ್ವಾಹವುದು ಕಡುಕಷ್ಟ
ಸುಮ್ಮನೆ ಇದ್ದರೆ ಸೇರರು ಸಖಿರು
ಗುಮ್ಮನಾತನೆಂತೆಂಬೋರು
ಉಸ್ಸುರಿಯದಿಂದ ಬಹಳನ್ನ ಉಂಡರೆ
ಭೂತಪ್ರಾಣಿ ಎವನೆಂಬೋರು
ಕಮ್ಮಿಯುಂಡರೆ ಕಡುಲೋಭಿಯೆಂಬರು
ಉಣದಿದ್ದರೆ ರೋಗ್ಯನೆಂಬುವರಯ್ಯಾ

ಬಾಳಿನಲ್ಲಿ ಹೊಗಳಿಕೆ - ತೆಗಳಿಕೆ ಇದ್ದೇ ಇರುತ್ತವೆ. ಸಾಮಾನ್ಯವಾಗಿ ಮನುಷ್ಯ ಹೊಗಳಿಕೆಗೆ ಹಿಗ್ಗಿ ತೆಗಳಿಕೆಗೆ ಕುಗ್ಗಿ ಹೋಗುತ್ತಾನೆ. ತನ್ನನ್ನು ಜನ ಹೊಗಳಲಿ ಎಂದು ಎಲ್ಲರೂ ಹಾತೊರೆಯುತ್ತಾರೆ. ಹೊಗಳುವವರು ಉಪಕಾರಿಗಳೆಂದು ಭಾವಿಸುತ್ತಾರೆ. ಆದರೆ ದಾಸರು ಈ ಬಗ್ಗೆ ಬೇರೆ ರೀತಿಯಾಗಿಯೇ ಚಿಂತಿಸಿದ್ದಾರೆ. ನಮಗೆ ಅಪಕಾರವಾಗುವುದು ತೆಗಳುವವರಿಂದಲ್ಲ, ಹೊಗಳುವವರಿಂದ - ಎಂದಿದ್ದಾರೆ ಅವರು. ಏಕೆಂದರೆ ವಂದಿಸಿ ಸ್ತುತಿಸುವ ಜನರೆಲ್ಲರೂ ನಮ್ಮ ಪುಣ್ಯವನ್ನೊಯ್ಯುವರು. ನಾವು ಪರಿಶುದ್ಧವಾಗಿರಲು ನಿಂದಕರು ಬೇಕು - ಎಂಬುದು ಅವರ ಅಭಿಪ್ರಾಯ. 'ಅವಮಾನವಾದರೆ ಒಳಿತು; ಮಾನದಿಂದ ಅಭಿಮಾನ ಹೆಚ್ಚುವುದು' - ಎಂಬುದು ಅವರ ವಿಶ್ವಾಸ. ಅದಕ್ಕೆ ಪುರಂದರದಾಸರು ಹೀಗೆನ್ನುತ್ತಾರೆ;

ಹಂದಿ ಇದ್ದರೆ ಕೇರಿ ಹ್ಯಾಂಗೆ
ಶುದ್ಧಿಯೋ ಹಾಂಗೆ ನಿಂದಕರು
ಅಂದಂದು ಮಾಡಿದ ಪಾಪವೆಂಬ
ಮಲ ತಿಂದು ಹೋಗುವರು
ದುಷ್ಟಜನರು ಈ ಸೃಷ್ಟಿಯೊಳಗಿದ್ದರೆ
ಶಿಷ್ಟಜನರಿಗೆಲ್ಲಾ ಕೀರ್ತಿಗಳು

ಋಜುಮಾರ್ಗದಲ್ಲಿ ಸಾಗುವ ಯಾರೂ ಇನ್ನೊಬ್ಬರಿಗೆ ಅಂಜಬೇಕಾಗಿಲ್ಲ. ಅಳುಕ ಬೇಕಾಗಿಲ್ಲ. ನಮ್ಮೆಲ್ಲರನ್ನು ಸಲಹುವ ದೇವನೊಬ್ಬನಿದ್ದಾನೆಂಬ ಅರಿವು ಇದ್ದರೆ ಸಾಕು. ಬೆಟ್ಟದ ಮೇಲಿರುವ ವೃಕ್ಷಕ್ಕೆ, ಕಲ್ಲಿನಲ್ಲಿರುವ ಕಪ್ಪೆಗೆ ಜೀವಧಾರೆಯನ್ನು, ಆನೆಯಂಥ ದೊಡ್ಡಪ್ರಾಣಿಗೆ ಬಂಡಿಗಟ್ಟಲೆ ಆಹಾರವನ್ನು ಒದಗಿಸುವ ಹೊಣೆಗಾರ ಭಗವಂತನಿದ್ದಾನೆ. ಅವನನ್ನು ನಂಬಿ ಸಾಗಬೇಕು. ದೇವರ ಬಗೆಗಿನ ನಂಬುಗೆ ಬಾಳಿನ ಇಂಬು ಎಂಬುದು ಅವರಿಗೆ ಗೊತ್ತಿತ್ತು. 'ರಾಮನಾಮ ಪಾಯಸಕ್ಕೆ ಕೃಷ್ಣನಾಮ ಸಕ್ಕರೆ, ವಿಠ್ಠಲ ನಾಮ ಸಕ್ಕರೆ ಬೆರೆಸಿ ಬಾಯಿ ಚಪ್ಪರಿಸ ಕಲಿತ' ಮಾನವನಿಗೆ ಇನ್ನಾವುದು ಕೊರತೆ? ಎಂದರವರು.

ಆದರೆ ಒಂದಕ್ಕೆ ಅಳುಕಬೇಕಾಗುತ್ತದೆ. ಅದೇ ಪರಸತಿ - ಪರಧನದ ಮೇಲಣ ಪಾಪದಾಸೆ:

ಉರಿಗಂಜೆ ಸೆರೆಗಂಜೆ ಶರೀರದ ಭಯಕಂಜೆ
ಹಾವಿಗಂಜೆ ಚೇಳಿಗಂಜೆ ಕತ್ತಿಯ ಧಾರೆಗಂಜೆ
ಇನ್ನೊಂದಕ್ಕಂಜುವೆ ಇನ್ನೊಂದಕ್ಕಳುಕುವೆ
ಪರಧನ ಪರಸತಿ ಗೆರಡಕ್ಕಂಜುವೆನಯ್ಯಾ
ಹಿಂದೆ ಕೌರವ ರಾವಣರೀಸಾಗಿ ಪೋದರು
ಮುಂದೆ ನಲಹೋ ಪುರಂದರ ವಿಠಲ

ಬದುಕಿನಲ್ಲಿ ಅತಿದೇಹಾಭಿಮಾನ ಹಾಗೂ ಸಂಸಾರವ್ಯಾಮೋಹ ಸಲ್ಲದು ಎಂಬುದನ್ನು ಹರಿದಾಸರು ಮನವರಿಕೆ ಮಾಡಿದ್ದಾರೆ. 'ಶರೀರಕ್ಕೆ ಬರುತಿದೆ ವೆಚ್ಚ; ನೀನಿರು ಬೇಗ - ಬೇಗ ಪಯಣದಿಂದೆಚ್ಚೆತ್ತು ನಿಚ್ಚ' - ಎಂದು ಎಚ್ಚರಿಸಿದರು :

ಈ ಶರೀರಭ್ರಾಂತಿ ಇನ್ನೇಕೆ ಮನವೆ
ದಂತಸಡಲಿ, ಧಾತು ಕುಂದಿ,
ಕಾಂತೆಯರು ಜರೆದು ಓಕರಿಸುವರು
ಕಣ್ಣುಹಿಂಗಿ ಕಾಲು ಜವಗುಂದಿ
ಯೌವನ ಹೋಗಿ ಜರೆಬಂತು
ಆಸೆಯಿನ್ನೇಕೆ ಮನವೆ,
ನೀರಬೊಬ್ಬುಳಿಯಂತೆ ಸ್ಥಿರವಲ್ಲ ಈ ದೇಹ
ಧರಣಿ, ಧನ, ಸ್ತ್ರೀ, ನೀ ಮರುಳಾಗಬೇಡ

ಜೀವನದಲ್ಲಿ ಯಾವುದು ಶಾಶ್ವತವಾದದ್ದು, ಯಾವುದಕ್ಕೆ ಹೆಚ್ಚು ಪ್ರಾಶಸ್ತ್ಯ ಕೊಡಬೇಕು - ಎಂಬ ವಿಚಾರದಲ್ಲಿ ದಾಸರ ಹಾಡುಗಳು ಮನನೀಯವಾಗಿವೆ.

ನಮ್ಮ ದೇಹವನ್ನು ಆಶ್ರಯಿಸಿರುವ ಜೀವ ಯಾವಕ್ಷಣದಲ್ಲಿ ಹೋಗುವುದೋ! ಹೋಗುವಾಗ ಅದು ಹೇಳುವುದೂ ಇಲ್ಲ; ಕೇಳುವುದೂ ಇಲ್ಲ. ಆದ್ದರಿಂದ ಇದ್ದಾಗಲೇ ನಾವು ಒಳ್ಳೆಯದನ್ನು ಮಾಡಿ ಮುಗಿಸಿ ಧನ್ಯರಾಗಬೇಕಲ್ಲವೆ ? ಇದನ್ನೇ ಹರಿದಾಸರು ಹೀಗೆ ಹೇಳುತ್ತಾರೆ.

ತನುವಿನೊಳಗೆ ಅನುದಿನವಿದ್ದು,
ಎನಗೊಂದು ಮಾತ ಹೇಳದೆ
ಹೋದೆ ಹಂಸಾ
ಒಳ್ಳೆಯ ತನುವನ್ನು ಎಗುರಿ ತಾ ಪೋಪಾಗ
ಒಳ್ಳಿಗೆ ಹೇಳದೆಹೋಯಿತು ಒಂದು ಮಾತ
ಘಟ್ಟಿ-ಜಟ್ಟಿಗಳಲಿ ಶಾಟಿಯ ತುದಿಯಲಿ
ಕಟ್ಟಿತು ಜೇನನು ಸುಖಿಕಾಗಿ
ಗಟ್ಟಿತುಪ್ಪನ ನುಂಡು ನೊಣ
ಹಾರಿ ಪೋಪಾಗ
ಹಿಪ್ಪೆಗೆ ಹೇಳದೆ ಹೋಯಿತು
ಒಂದು ಮಾತಾ
ರಸವನುವನುಂಡು ಜೋತಿ ತಾ ಪೋಪಾಗ
ಪಣತಿಗೆ ಹೇಳದೆ ಹೋಯಿತು
ಒಂದು ಮಾತಾ
ಸಿರಿಪುರಂದರ ವಿಠಲನ ಮಾತು ಪುಸಿಯಲ್ಲ
ಹಣೆಯ ಬರಹವನು ಮೀರಲು ಬಲ್ಲುದೆ?

ಜ್ಞಾನ, ಭಕ್ತಿ, ವೈರಾಗ್ಯಗಳು ಬೇರೂರಿ ಬೆಳೆಯಬೇಕಾದರೆ ವ್ಯಕ್ತಿಯ ಜೀವನ ರೀತಿ - ನಿಯಮಗಳನ್ನು ಪಾಲಿಸಬೇಕು; ಶೀಲದಿಂದ ಕೂಡಿರಬೇಕು. ಆದ್ದರಿಂದ ಹರಿದಾಸರು ತಮ್ಮ ಹಾಡುಗಳಲ್ಲಿ ಜನರನ್ನು ಎಚ್ಚರಿಸಿದ್ದಾರೆ; ಸಮಾಜದಲ್ಲಿನ ದೋಷಗಳನ್ನು ಟೀಕಿಸಿದ್ದಾರೆ. ಡಾಂಭಿಕತನ, ಕಪಟ, ಅರ್ಥವಿಲ್ಲದ ಬಾಹ್ಯಾಚಾರಗಳು, ಜಾತಿಯ ಅಹಂಕಾರ ಮುಂತಾದ ಜನರ ನಡತೆಯಲ್ಲಿನ ವಕ್ರತೆಗಳನ್ನು ಖಂಡಿಸಿದ್ದಾರೆ ಅಥವಾ ಹಾಸ್ಯಕ್ಕೆ ಗುರಿಮಾಡಿದ್ದಾರೆ. ಪುರಂದರದಾಸರು ಉತ್ತಮ ನಡತೆಯೇ ಸತ್ಕುಲದ ಲಕ್ಷಣ; ದುರ್ನಡತೆಯುಳ್ಳವರೇ ಹೊಲೆಯರೆಂದು ಚುಚ್ಚುವ ಮಾತುಗಳಲ್ಲಿ ಸಾರಿದರು. ಅಂತಹ ಹೊಲೆಯರ ಪಟ್ಟಿಯನ್ನು ಮಾಡಿದರು:

ಹೊಲೆಯ ಹೊರಗಿಹನೆ ಊರೊಳಗಿಲ್ಲವೆ
ಶ್ರೀಹರಿಯ ಸ್ಮರಣೆಯನು ಬಲ್ಲವರು ಹೇಳಿ
ಶೀಲವನು ಕೈಗೊಂಡು ನಡೆಸದಾತನೆ
ಹೊಲೆಯ
ಪೇಳಿದ ಹರಿಕಥೆಯ ಕೇಳದವ ಹೊಲೆಯ
ಉಂಡಮನೆಗೆರಡನ್ನು ಬಗೆವಾತ
ಹೊಲೆಯ
ಹೆಂಡತಿಯ ಇಚ್ಛೆಯವ ಹೇಡಿ ಹೊಲೆಯ
ಗುರುಹಿರಿಯರನು ನಮಿಸದಾತನೆ
ಹೊಲೆಯ

ಪುರಂದರ ದಾಸರು ಮಾಡಿದ ಜೀವನ ಮೌಲ್ಯಬೋಧೆಗೆ ಅವರು ಮೂರ್ಖ ರಾರೆಂಬುದನ್ನು ವಿವರಿಸುವ ಕೀರ್ತನೆ ಒಳ್ಳೆಯ ನಿದರ್ಶನ.

ಗಂಟನೊಬ್ಬರ ಕೈಯಲಿಡುವಾತ
ನೆಂಟರಿಗೆ ಸಾಲವನು ಕೊಡುವಾತ
ಪಡೆದ ಮಕ್ಕಳ ಮಾರಿ ಒಡಲ ಹೊರೆವವ
ಮಡದಿ ಹುಟ್ಟಿದ ಮನೆಯಲಿರುವವ
ಬಡತನ ಬಂದಾಗ ಬೈದುಕೊಂಬುವ,
ದೃಢಭಕ್ತಿ ಇಲ್ಲದವ
ಮುಪ್ಪಿನಲಿ ಮದುವೆ ಮಾಡಿಕೊಂಬುವ
ನತ್ತ ಕರುವಿನ ತಾಯ ಹಾಲು ಕರೆವವ,
ಒತ್ತೆ ಇಲ್ಲದೆ ಸಾಲ ಕೊಡುವವ
ಹತ್ತೆಂಟು ಬಗೆಯಲ್ಲಿ ಹಂಬಲಿಸುವವ
ಹೆತ್ತತಾಯಿಯ ಬೈವವ



ತಾಮಸರ ಕೂಡಿ ಕೊಂಡವ
ಭಂಡಮನೆಗೆ ಎರಡನ್ನು ಬಗೆಯುವಾತ
ಕೊಂಡಮಾತನು ಕೇಳಿ ಕುಣಿಯುವವ
ಪುರಂದರ ವಿಠಲನ ಕೊಂಡಾಡಿ ಭಜಿಸದವ

ವ್ಯಕ್ತಿಯ ಶೀಲ ಬೆಳೆಯ ಬೇಕಾದರೆ ಸತ್ಸಂಗ ಅತ್ಯಾವಶ್ಯಕ. ಈ ಉಪದೇಶವನ್ನು ಮನಮುಟ್ಟುವ ರೀತಿಯಲ್ಲಿ ಪುರಂದರದಾಸರು ಮಾಡಿದರು. ಪರನಿಂದೆ ಮಾಡಬಾರದೆಂದು ವಿಜಯದಾಸರು ತಮ್ಮ ಕೀರ್ತನೆಯೊಂದರಲ್ಲಿ ಎಚ್ಚರಿಸಿದ್ದಾರೆ.

ಏನು ಕಾರಣ ಮತಿಯಿಲ್ಲ ಮನವೆ
ಹೀನಾಯವಾಡದಿರು ಪರರ
ಗುಣಗಳ ಎಣಿಸಿ
ಅವನ ಗೊಡವೆಯೇಕೆ
ಅವನಾರು ನೀನಾರು
ಅವನ ಪಾಪಕ್ಕೆ ನೀ ಭಾಗಿಯಾಗೀಯೆ
ನಿನ್ನೊಳಗೆ ನೀ ತಿಳಿದು ವಿಜಯವಿಠಲನ್ನ
ಸನ್ನುತಿಸಿ ಭವರೋಗ ಬನ್ನವನು ಕಳೆಯೋ

ಈ ದಾಸ ಶ್ರೇಷ್ಠರು ಹೇಳಿದಂತೆ 'ಕಠಿನಭವ ತೊರೆಯೊಳಗೆ ಕಲ್ಲಾಗಿರಬೇಕು'. ಇಂತಹವರ ವಿಷಯದಲ್ಲಿ ನಾವು ಸಹನೆಯನ್ನು ತೋರುವುದು ಮಾತ್ರವಲ್ಲ, ಅವರನ್ನು ನಮ್ಮವರನ್ನಾಗಿ ಮಾಡಿಕೊಳ್ಳಬೇಕೆಂದು 'ಧರ್ಮವೇ ಜಯವೆಂಬ ದಿವ್ಯಮಂತ್ರ' - ಎಂದು ಆರಂಭವಾಗುವ ದೇವರನಾಮದಲ್ಲಿ ಉದಾತ್ತವಾದ ಮೌಲ್ಯವನ್ನು ನಮ್ಮ ಮುಂದೆ ಇಟ್ಟಿದ್ದಾರೆ:

ವಿಷವನಿಕ್ಕಿದವಗೆ ಷಡ್ರಸವನುಣಿಸಬೇಕು
ದ್ವೇಷ ಮಾಡಿದವನ ಪೋಷಿಸಲು ಬೇಕು
ಕುಂದೆಣಿಸುವವರ ಗೆಳೆತನ ಕೂಡಬೇಕು
ಕುಡು ಸಹಿಸದವರ ಕರೆಯಬೇಕು

ಇದೇ ರೀತಿಯ ಧೃತಿಯನ್ನೂ, ತಾಳ್ಮೆಯ ಮಹಿಮಾತಿಶಯನ್ನೂ ದಾಸರ ಮತ್ತೊಂದು ಪ್ರಸಿದ್ಧವಾದ ಕೀರ್ತನೆಯಲ್ಲಿ ನಾವು ಕಾಣುತ್ತೇವೆ:

ನಾನಿನ್ನ ಧ್ಯಾನದೊಳಿರಲು ಸದಾ
ಹೀನಮಾನವರೇನುಮಾಡಬಲ್ಲರೋ ರಂಗ
ಕಿಚ್ಚಿಗೆ ಇರುವೆ ಮುತ್ತುವುದೇ
ಕೇಳೆಲೋ ರಂಗ
ದಾಳಿಲಿ ಕುದುರೆ ವೈಯಾರದಿ ಕುಣಿಯಲು
ಧೂಳು ರವಿಯ ಮೇಲೆ ಮುಚ್ಚುವುದೆ
ತಾಳಿದವರಿಗೆ ವಿರುದ್ಧ ಲೋಕದಲುಂಟೆ
ಗಾಳಿಗೆ ಗಿರಿಯು ಅಲ್ಲಾಡಬಲ್ಲುದೆ

ದುರ್ಜನರನ್ನು ಜಾಲಿಯ ಮರಕ್ಕೆ ಹೋಲಿಸಿ ಪುರಂದರ ದಾಸರು ಹೇಳಿದ ಹಾಡು ಒಮ್ಮೆ ಕೇಳಿದವರಿಗೆ ಎಂದೂ ಮರೆಯಲಾಗ ದಂತಹುದು:

ಬಿಸಿಲಲಿ ಬಳಲಿ ಬಂದವರಿಗೆ ನೆರಳಿಲ್ಲ
ಹಸಿದು ಬಂದವರಿಗೆ ಹಣ್ಣು ಇಲ್ಲ
ಕುಸುಮವಾಸನೆ ಇಲ್ಲ, ಕೂಡಲು ಸ್ಥಳವಲ್ಲ
ತನ್ನಿಂದ ಉಪಕಾರ ತಟಕಾದರು ಇಲ್ಲ
ಬನ್ನದ ಮಾಡಿಗೆ ಕೊನೆ ಇಲ್ಲವು
ಅನ್ನಕ್ಕೆ ಸೇರಿದ ಶುನ್ನಿ ಮಾನವರಂತೆ
ಇನ್ನಿವರ ಕಾರ್ಯವು ಪುರಂದರವಿಠಲ

ಹುಟ್ಟು ಸ್ವಭಾವವನ್ನು ಮಾರ್ಪಡಿಸುವುದು ಬಹಳ ಕಷ್ಟ. ಇದಕ್ಕೆ ಸತ್ಸಂಗವೇ ಉಪಾಯವೆಂದು ಹಿಂದಿನ ಜ್ಞಾನಿಗಳು ಹೇಳಿದಂತೆ ದಾಸರೂ ಸತ್ಸಂಗದ ಅವಶ್ಯಕತೆಯನ್ನು ಒತ್ತಿ ಹೇಳಿದ್ದಾರೆ :

ಸಜ್ಜನರ ಸಂಗದೊಳಿರಿಸೆನ್ನ ರಂಗ
ದುರ್ಜನರ ಸಂಗ ನಾನೊಲ್ಲೆ ಮಂಗಳಾಂಗ
ಮೂಢ ಮೂರ್ಖರ ಸಂಗ
ಬಲುಭಂಗ ಎಲೊ ರಂಗ

- ಎಂದು ಕನಕದಾಸರು ಹಾಡಿದ್ದಾರೆ. ಪುರಂದರ ದಾಸರೂ ಒಂದು ಕೀರ್ತನೆಯಲ್ಲಿ :

ಅಜ್ಞಾನಿಗಳ ಕೂಡ ಅಧಿಕ ಸ್ನೇಹಕ್ಕಿಂತ
ಸುಜ್ಞಾನಿಗಳ ಕೂಡ ಜಗಳವೇ ಲೇಸು

ಎಂದು ಹೇಳಿದ್ದಾರೆ. ದುರ್ಜನರು ತಾವು ಮಾಡುವ ಕೆಟ್ಟ ಕೆಲಸಗಳಿಗೆ ಈ ಜನ್ಮದಲ್ಲೇ ತಕ್ಕ ಶಿಕ್ಷೆಯನ್ನನುಭವಿಸುತ್ತಾರೆಂದೂ, ಅನೇಕ ರೋಗಗಳಿಗೆ ತುತ್ತಾಗುತ್ತಾರೆಂದೂ ಕನಕದಾಸರು ಬೆದರಿಕೆ ಹಾಕಿದ್ದಾರೆ. ಜನರಲ್ಲಿ ಪಾಪಭೀತಿಯನ್ನು ಹುಟ್ಟಿಸಿ, ಅವರು ಸನ್ಮಾರ್ಗದಲ್ಲಿ ನಡೆಯುವಂತೆ ಉಪದೇಶಿಸಿದ್ದಾರೆ.

ಕನಕದಾಸರೂ - ಪುರಂದರದಾಸರೂ ಇದ್ದ ಕಾಲದಲ್ಲಿ ವಿಜಯನಗರ ಸಾಮ್ರಾಜ್ಯ ಅಪಾರವಾದ ಸಂಪದಭಿವೃದ್ಧಿಯನ್ನು ಹೊಂದಿತ್ತಾದರೂ ಜನರ ಜೀವನ ಮೌಲ್ಯಗಳು ಶಿಥಿಲವಾಗತೊಡಗಿದ್ದುವು. ಇದನ್ನು ಕಂಡು ಈ ದಾಸವರ್ಯರು ಮರುಗಿದರು. ಎಚ್ಚರಿಕೆ ಯನ್ನಿತ್ತರು. ಕನಕದಾಸರು 'ಕಲಿ ಹೆಚ್ಚು ಬಂದಿತಲ್ಲ' - ಎಂಬ ಕೀರ್ತನೆಯಲ್ಲಿ ಇದನ್ನು ಪ್ರಸ್ತಾಪಿಸಿದ್ದಾರೆ :

ಪಾತಕದಿ ಮನವೆರಗಿ ಮೋಹಿಪ
ಮಾತಾಪಿತೃ ಗುರುದೈವ ದ್ರೋಹದಿ
ಭೂತಳವು ನಡುಗುತಿಹುದು
ಬನ್ನಣಿ ಮಾತುಗಳು ಮತ್ತು -
ಮತ್ತು ಮತ್ಸರ ಕ್ರೋಧಗಳು
ಅನ್ಯಾಯದಿಂದ ಅರ್ಥವ ಗಳಿಸೋರು
ಕಲಿಯುಗದ ಮಹಿಮೆಯನು
ಕಂಡಷ್ಟು ಪೇಳುವೆನು

- ಎಂದು ಆರಂಭಿಸಿ ಆಗಿನ ಕಾಲದಲ್ಲಿ ನಡೆಯುತ್ತಿದ್ದ ಅತ್ಯಾಚಾರಗಳನ್ನು ವಿವರಿಸಿರುವರು. 'ನೆಚ್ಚದಿರೀ ಭಾಗ್ಯ ಯಾರಿಗೂ ಸ್ಥಿರವಲ್ಲ ನಿಶ್ಚಯವೆಚ್ಚರಿಕೆ' - ಎಂದು ಪುರಂದರದಾಸರು ಎಚ್ಚರ ನೀಡಿದರು.

ಹೀಗೆ ಸ್ಥಾಲೀಪುಲಾಕನ್ಯಾಯದಂತೆ ಹರಿದಾಸ ಸಾಹಿತ್ಯವನ್ನು ನಾವು ವೀಕ್ಷಿಸಿದಾಗ ಮೌಲ್ಯಗಳ ಕುಸಿತದ ಈ ದಿನಗಳಲ್ಲಿ ಅದು ತೀರ ಪ್ರಸ್ತುತವೆನಿಸುತ್ತದೆ. ಬದುಕಿಗೆ ಅರ್ಥತುಂಬಿ, ಮಾನವನನ್ನು ಮಾಧವತ್ವದ ಕಡೆಗೆ ಒಯ್ಯುವಲ್ಲಿ ಹರಿದಾಸರು ವಹಿಸಿದ ಕಾಳಜಿ ಅಪಾರ. ಬದುಕಿನ ಮೌಲ್ಯಗಳನ್ನು ಜಾಗೃತಗೊಳಿಸುವ ಹರಿದಾಸ ಸಾಹಿತ್ಯ ಒಂದಲ್ಲ ಒಂದು ತರದಲ್ಲಿ ಭಾರತೀಯ ಜೀವನ ಮೌಲ್ಯಗಳಿಂದ ವಂಚಿತರಾಗುತ್ತಿರುವ ನಮ್ಮ ಯುವಜನರಿಗೆ ಲಭ್ಯವಾಗಬೇಕು. ಶಾಲೆ-ಕಾಲೇಜುಗಳಲ್ಲಿ ಆಗಾಗ ಉಪನ್ಯಾಸ, ಹರಿಕೀರ್ತನೆಗಳನ್ನು ಏರ್ಪಡಿಸುವುದು, ಟಿ.ವಿ. ಯಂತಹ ವಿದ್ಯುನ್ಮಾಧ್ಯಮದಲ್ಲಿ ಜೀವನ ಮೌಲ್ಯಗಳನ್ನು ಪ್ರತಿಬಿಂಬಿಸುವ ಹರಿದಾಸ ಸಾಹಿತ್ಯದ ಆಯ್ದ ಭಾಗಗಳನ್ನು ಪ್ರಸ್ತುತ ಪಡಿಸುವುದು - ಹೀಗೆ ಮನಸ್ಸಿದ್ದರೆ ಮಾರ್ಗವಿದೆ. ಮುಖ್ಯವಾಗಿ ನಮ್ಮ ಧಾರ್ಮಿಕ, ಶೈಕ್ಷಣಿಕ ಮತ್ತಿತರ ಸಂಸ್ಥೆಗಳ ವರಿಷ್ಠರಿಗೆ ಈ ಮನಸ್ಸು ಬೇಕು. ಅಂತಹ ಮನಸ್ಸನ್ನು ಪೊಡವಿಗೊಡೆಯ ಉಡುಪಿ ಕೃಷ್ಣ ಪ್ರಚೋದಿಸಲಿ - ಎಂದು ಹಾರೈಸೋಣ.

★★★★★

ತಿರುಮಲೆಯಲ್ಲಿ ಪವಿತ್ರೋತ್ಸವ

- ಬಿ. ಎನ್. ಎಸ್.

ತಿರುಮಲೆಯ ಶ್ರೀ ವೆಂಕಟೇಶ್ವರಸ್ವಾಮಿ ಆಲಯ ನಿತ್ಯೋತ್ಸವದ ನಿಲಯ. ಪಕ್ಷೋತ್ಸವ ಮಾಸೋತ್ಸವಗಳು ಎಲ್ಲ ಪಕ್ಷ ಮಾಸಗಳಲ್ಲಿ ನಡೆಯುವುದು ನಿರಂತರವಾಗಿ ನಡೆದು ಬಂದಿದೆ. ಇಂತಹ ಉತ್ಸವಗಳಲ್ಲಿ ಪವಿತ್ರೋತ್ಸವವೂ ಒಂದು. ಇತರೆಲ್ಲ ಉತ್ಸವಗಳೂ ಭಗವಂತನ ಪ್ರೀತಿಗಾಗಿ, ಭಕ್ತನ ಅಪೇಕ್ಷೆ, ಆಕಾಂಕ್ಷೆಗಳಿಗಾಗಿ ಮಾಡುವಂತಹ ವಾದರೆ ಪವಿತ್ರೋತ್ಸವ ಬೇರೆಯೇ ಆದ ವೈಶಿಷ್ಟ್ಯವನ್ನು ಪಡೆದದ್ದಾಗಿದೆ. ಸ್ವಾಮಿಯ ನಿತ್ಯಪೂಜೆ ಉತ್ಸವಗಳು ವರ್ಷದುದ್ದಕ್ಕೂ ನಡೆದಿರುವಾಗ ಎಲ್ಲಸೇವೆಗಳೂ, ಉತ್ಸವಗಳೂ, ಕೈಂಕರ್ಯಗಳೂ, ಶಾಸ್ತ್ರಬದ್ಧವಾಗಿ, ಸೂತ್ರ ಸಿದ್ಧವಾಗಿ ನಡೆಯುತ್ತವೆ ಎಂಬ ಖಚಿತತೆ ಇರದು. ಇಲ್ಲಿ ಅವಸರದಿಂದ, ಅನವಧಾನದಿಂದ, ಅತಿವಿಶ್ವಾಸದಿಂದ ಹಲವು ಲೋಪ ದೋಷಗಳಿಗೆ ಅವಕಾಶವಾಗುವುದು. ಇಂತಹ ಲೋಪ, ದೋಷಗಳ, ಅಧಿಕ, ಆದೇಶಗಳ ದುಷ್ಪರಿಣಾಮಗಳ ನಿವಾರಣೆಗಾಗಿ ಮಾಡುವ ಆಗಮ ಪ್ರೋಕ್ತವಾದ ಉತ್ಸವ - ಪವಿತ್ರೋತ್ಸವ.

ಪವಿತ್ರೋತ್ಸವ ಹೆಸರೇ ಸೂಚಿಸುವಂತೆ ಒಂದು ಶುದ್ಧೀಕರಣದ ಉತ್ಸವ. ಪವಿತ್ರೀಕರಿಸುವ ಉತ್ಸವ. ಎಲ್ಲ ಆಲಯಗಳಲ್ಲಿಯೂ ಒಂದಿಲ್ಲೊಂದು ರೀತಿಯಲ್ಲಿ ನಡೆಯುವ ಶ್ರೇಷ್ಠ ಆಗಿದೆ. ಒಂದು ರೀತಿಯಲ್ಲಿ ಇದು ಪ್ರಾಯಶ್ಚಿತ್ತದ ಉತ್ಸವವೂ ಆಗಿದೆಯೆಂದು ಹೇಳಬಹುದು. ದೋಷ ನಿವರ್ತನ, ಸರ್ವದೋಷೋಪಶಮನ ಉತ್ಸವವೆಂದೂ ಹೇಳಲಾಗಿದೆ. ಆಲಯದ ಪೂಜೆಯಲ್ಲಿ ಉಂಟಾಗುವ ನ್ಯೂನತೆ (ಕೊರತೆ) ಅತಿರಿಕ್ತತೆ (ಹೆಚ್ಚಳವು) ಗಳ ಪರಿಣಾಮವು ಒಳಿತಾಗಲೆಂದು ಮಾಡುವ ಪೂಜೆ - ಉತ್ಸವವೇ ಪವಿತ್ರೋತ್ಸವ ಎಂದು ಕರೆಯಲಾಗಿದೆ. ಇದನ್ನು ಅಗ್ನಿ, ಗರುಡ ಪುರಾಣಗಳೂ ಮರೀಚಿ, ಭೃಗು ಸಂಹಿತೆಗಳೂ ವಿವರಿಸಿವೆ.

ಆಷಾಢ ಮಾಸದ ಕೊನೆಯಲ್ಲಿ ಅಥವಾ ಶ್ರಾವಣ ಮಾಸದ ಮೊದಲಲ್ಲಿ ದಶಮಿ ಏಕಾದಶಿಗಳಲ್ಲಿ ಪವಿತ್ರೋತ್ಸವಗಳನ್ನು ಆಲಯಗಳಲ್ಲಿ ಆರಂಭಿಸಬಹುದೆಂಬುದು ಆಗಮಗಳ ಅವಧಾರಣೆಯಾದರೆ ತಿರುಮಲೆಯಲ್ಲಿ ಪವಿತ್ರೋತ್ಸವದ ಪ್ರಥಮ ಉಲ್ಲೇಖ ಸಿಗುವುದು ಕ್ರಿ.ಶ. 1464 ರ ಹೊತ್ತಿಗೆ. ಸಾಳುವ ನರಸಿಂಹರಾಯನ ಕಾಲದಲ್ಲಿ ಸಾಳುವ ಮಲ್ಲಯದೇವ ಮಹಾರಾಯನು ಈ ಉತ್ಸವವನ್ನು ಪ್ರವೇಶಗೊಳಿಸಿದ. ಆತನು ಮೊದಲ ಬಾರಿಗೆ ಈ ಉತ್ಸವವನ್ನು ಆರಂಭಿಸಿದ್ದರಿಂದಾಗಿ ಉತ್ಸವದ ವಿವರಗಳನ್ನು ವೆಚ್ಚಗಳನ್ನು, ಪ್ರಸಾದಗಳನ್ನು, ಪ್ರಸಾದ ವಿತರಣ ವಿಧಾನವನ್ನು ವಿವರವಾಗಿಯೇ ತಿಳಿಸಿದ್ದಾನೆ.

ತಿರುಮಲೆಯ ಆಲಯದ ಹೊರಪ್ರಕಾರದ ಉತ್ತರದ ವಗಪ್ಪಡಿಯ ಗೋಡೆಯಲ್ಲಿರುವ ಈ ಶಾಸನವು ಗ್ರಂಥ ಲಿಪಿಯಲ್ಲಿ ಬರೆದ ತಮಿಳು ಭಾಷೆಯಲ್ಲಿದೆ. ತಿರುಕ್ಕೊಡಿ ತಿರುನಾಳ್, ತಿರುಕಾರ್ತಿಕೈ ದಿನಗಳಲ್ಲಿ ಆಲಯದ ಮುಂದಿನ ಮಂಟಪದಲ್ಲಿ ಸ್ವಾಮಿಯ ಮೆರವಣಿಗೆ ವಿಶ್ರಾಂತಿ ಪಡೆವಾಗ ನೀಡುವ ನಿವೇದನೆಗಳೊಡನೆ ಆತ ಆರಂಭಿಸಿದ ತಿರುಪವಿತ್ರ ತಿರುನಾಳ್ ಉತ್ಸವದ ಐದು ದಿನಗಳ ವೆಚ್ಚಗಳ ವಿವರಗಳನ್ನು ನೀಡಲಾಗಿದೆ. ಪವಿತ್ರೋತ್ಸವಕ್ಕೆ ಸಂಬಂಧಿಸಿದಂತೆ ಈ ಶಾಸನದ ವಿವರವನ್ನು ಗಮನಿಸಬಹುದು.

"ಸರ್ವರಿಗೆ ಸನ್ಮಂಗಳವಾಗಲಿ. ಶಕವರ್ಷ 1385 ಕ್ಕೆ (ಕ್ರಿ.ಶ. 1464 ಜನವರಿ 18) ಸುಭಾನು ಸಂವತ್ಸರದ ಮಕರ ಮಾಸದ ಪೂರ್ವಪಕ್ಷದ ದಶಮಿಯಂದು ರೋಹಿಣೀ ನಕ್ಷತ್ರವಿರುವ ಬುಧವಾರದ ದಿನದಲ್ಲಿ ತಿರುಮಲೆಯ ಆಲಯದ ಸ್ಥಾನತ್ತಾರರು ಶ್ರೀಮನ್ಮಹಾ ಮಂಡಳೇಶ್ವರ ಮೇದಿನೀ ಮೀಸರ ಗಂಡ, ಕಠಾರಿ ಸಾಳುವ, ಸಾಳುವ ಯರ್ರ ಕಂಪಯ ದೇವ ಮಹಾರಾಜರ ಮಕ್ಕಳು ಮಲ್ಲಯದೇವ ಮಹಾರಾಜರಿಗೆ ಮಾಡಿಸಿಕೊಟ್ಟ ಶಿಲಾಶಾಸನ - ಅಂಕು ರಾರ್ಪಣದೊಡನೆ ನವಧಾನ್ಯ ಬೀಜಗಳನ್ನು ಕುಂಭಗಳಲ್ಲಿ ಬೀಜಾವಾಪನೆ ಮಾಡುವುದರಿಂದ ಆವನಿ ಮಾಸದ ಶುಕ್ಲಪಕ್ಷದ ದಶಮಿಯಂದು ಆರಂಭವಾಗುವ ಐದುದಿನಗಳ ತಿರು ಪವಿತ್ರನಾಳನ್ನು ತಮ್ಮ ಹೆಸರಿನಲ್ಲಿ ನಡೆಸಬೇಕೆಂದು ನಿಶ್ಚಯಿಸಿ, ತತ್ಸಂಬಂಧಿ ವಸ್ತುಗಳ ಪ್ರಬಂಧಕ್ಕಾಗಿಯೂ, ಏಕಾದಶಿ ದ್ವಾದಶಿಗಳಲ್ಲಿ ತಿರುಮಾಮಣಿ ಮಂಟಪದ ಹಾಗೂ ಅಲ್ಲಿನ ಸ್ವಾಮಿಯ (ಮಲೈಕುನಿಯ ನಿನ್ರ ಪೆರುಮಾಳ್ ಹಾಗೂ ಉಭಯ ನಾಯಕಿಯರ) ಆಸನಗಳ ಅಲಂಕಾರಕ್ಕಾಗಿಯೂ, ಅವರಿಗೆ ಪವಿತ್ರಗಳನ್ನು ಸಿದ್ಧಪಡಿಸಿ ಸಮರ್ಪಿಸುವುದಕ್ಕೂ ನಂತರ ಮಾಡವೀಧಿಗಳಲ್ಲಿ ನಡೆಯತಕ್ಕ ಮೆರವಣಿಗೆ ಗಳಲ್ಲಿಯೂ ವೆಚ್ಚ ಮಾಡುವ ವಿವರಗಳು ಹೀಗಿವೆ.

★ ಯಜ್ಞೋಪವೀತಗಳು, ಪ್ರತಿಮೆ, ಜಲಕುಂಭಗಳೇ ಮೊದಲಾದವುಗಳಿಗಾಗಿ 103 ಪಣ.

★ ಆಚಾರ್ಯ ಹಸ್ತಮಾತ್ರ ಹಾಗೂ ಕರ್ಣ ಮಾತ್ರಗಳಿಗಾಗಿ (ಕೈ ಹಾಗೂ ಕಿವಿಗಳ ಆಭರಣಗಳು) ಹತ್ತುಪಣ.

★ ಸುವರ್ಣ, ಭೂ, ಗೋದಾನ, ದಕ್ಷಿಣೆಗಳಿಗಾಗಿ ಹನ್ನೆರಡು ಪಣಗಳು.

★ ರತ್ನಗಂಬಳಿ, ಮೆತ್ತೆ, ನವಿಲುಗರಿ ಬೀಸಣಿಗೆ, ಕೃಷ್ಣಾಜಿನ, ರೇಷ್ಮೆ ವಸ್ತ್ರಗಳಿಗಾಗಿ ನಲವತ್ತು ಪಣಗಳು.

★ ವೇದ ಪಾಠಕ ಹಾಗೂ ಪುರಾಣ ಪ್ರವಚನಕಾರರಿಗೆ ಪ್ರೋತ್ಸಾಹ ಸಂಭಾವನೆಗೆ ಐದು ಪಣಗಳು.



★ ಮೇಲಿನ ಎಲ್ಲ ವ್ಯಕ್ತಿಗಳ ದಕ್ಷಿಣೆಗಾಗಿ ಹತ್ತು ಪಣಗಳು.

★ ಪಂಚ ವರ್ಣದ ದಾರಗಳನ್ನು ಮಾಡುವಲ್ಲಿ ನೀಲಿ ರಂಗು ತರುವಾತನಿಗೆ ಮೂರೂಕಾಲು ಪಣ.

★ ಹಳದಿ ಬಣ್ಣದ ದಾರಕ್ಕೆಂದು ಅರ್ಧ ಪಣ.

★ ಕುಂಬಾರನಿಗೆ ಕುಂಭಗಳನ್ನು ಮಾಡಿ ತರಲು ಹಾಗೂ ಪಾಲಿಕೆಗಳನ್ನು ತರಲು ಏಳು ಪಣ.

★ ಹಾರುಪಟ (ದೇವರ ಚಿತ್ರದ ಪಟ) ಅಲಂಕಾರದ ಮಕರ ತೋರಣ, ಉತ್ಸವ ನಡೆಯುವ ಸ್ಥಳದಲ್ಲಿ ಎರಡು ಮಕರಗಳನ್ನು ಹೊಂದಿದ ದ್ವಾರಬಂಧ ಮಾಡಲು ಆಚಾರಿಗೆ ಎಂಟು ಪಣ.

- ಹೀಗೆ ಒಟ್ಟು 198¾ ಪಣಗಳ ವೆಚ್ಚ ಮಾಡಬೇಕು.

ಇಂತಹ ವಿವರಗಳನ್ನು ಹೊಂದಿದ ಪವಿತ್ರೋತ್ಸವ ಮೊದಲಿಗೆ ಐದುದಿನ ಅಂಕುರಾರ್ಪಣೆಯನ್ನು ಸೇರಿಸಿ ಒಟ್ಟು ಆರು ದಿನಗಳ ಉತ್ಸವ ನಡೆದಿದ್ದಿತು. ಪ್ರತಿ ದಿನವೂ ಸ್ವಾಮಿಯ ಮತ್ತು ಅಮ್ಮನವರುಗಳ ಉತ್ಸವ ವಿಗ್ರಹಗಳ ಮೆರವಣಿಗೆ ನಡೆಯುತ್ತಿದ್ದಿತು.

ಶಕವರ್ಷ 1415 ರ ಪ್ರಮಾದೀಚ ಸಂವತ್ಸರದ ಕುಂಭಮಾಸದ ಪೂರ್ವ ಪಕ್ಷದ ದ್ವಾದಶಿಯೆಂದು ಪುಷ್ಯನಕ್ಷತ್ರದ ಸೋಮವಾರದಲ್ಲಿ (1493 ರ ಫೆಬ್ರವರಿ 17 ರಂದು) ಚಂದ್ರಗಿರಿಯ ನಿಯೋಗಿಗಳಲ್ಲಿ ಒಬ್ಬನಾದಂತಹ ಕರಣೀಕ ಅನ್ನದಾತ ದೇವರ ಮಗ ತಿಮ್ಮಣ ದಂಡನಾಯಕನು ಪವಿತ್ರ ತಿರುನಾಳಿನ ಆರಂಭದದಿನ ಒಂದು ಅಪ್ಪ ಪಡಿಯ ನಿವೇದನೆಗೆ ಏರ್ಪಡಿಸಿದ (II - 113).

ಶಕವರ್ಷ 1417 ರಲ್ಲಿನ ರಾಕ್ಷಸ ಸಂವತ್ಸರದ ಉತ್ತರಾಷಾಢ ನಕ್ಷತ್ರದ ಸೋಮವಾರದ ದಶಮಿಯಂದು ಕಂದಾಡೈ ರಾಮಾನುಜಯ್ಯಂಗಾರ್ಯನು ಪವಿತ್ರೋತ್ಸವದ ಐದೂ ದಿನಗಳಲ್ಲಿ ಅಪ್ಪಪಡಿಯ ನಿವೇದನೆಗೆಂದು ಪ್ರಾವಧಾನವನ್ನು ಏರ್ಪಡಿಸಿದನು (II - 134)

ಶಕವರ್ಷ 1426 ರ ರಕ್ತಾಕ್ಷಿ ಸಂವತ್ಸರದ (ಕ್ರಿ.ಶ. 1504) ಕನ್ಯಾಮಾಸದ ಪೂರ್ವಪಕ್ಷದ ದಶಮಿ ಶ್ರವಣ ನಕ್ಷತ್ರದ ಶುಕ್ರವಾರದಂದು ತಿರುಪ್ಪಣಿಪಿಳ್ಳೈ (ಆಲಯದ ಮರಮತ್ತುಗಾರ) ಎಂಬೆರುಮಾನಾರ್ ಪವಿತ್ರೋತ್ಸವದ ಐದು ದಿನಗಳಂದು (ಪವಿತ್ರ ತಿರುನಾಳ್) ಐದು ಅತಿರಸ ಪಡಿ ನೈವೇದ್ಯಕ್ಕೆ ಏರ್ಪಾಡು ಮಾಡಿದನು (II - 138).

ಶಕವರ್ಷ 1430 ರಲ್ಲಿ ಪವಿತ್ರ ತಿರುನಾಳಿನ ನಾಲ್ಕು ದಿನಗಳಲ್ಲಿ ನಾಲ್ಕು ಅತಿರಸ ಪಡಿ ನಿವೇದನದ ಏರ್ಪಾಡು ಮಾಡಲಾಯಿತು.

ಶಕವರ್ಷ 1433 ರಲ್ಲಿಯೂ ಐದು ದಿನಗಳ ಪವಿತ್ರೋತ್ಸವದಲ್ಲಿ ಐದು ಪಡಿ ನಿವೇದನೆಗೆ ಏರ್ಪಾಡು ಮಾಡಲಾಯಿತು.

ಕ್ರಿ.ಶ. 1562 ಜುಲೈ 28 ರಂದು (ಶಕವರ್ಷ 1484) ದುಂದುಭಿ ಸಂವತ್ಸರದ ಕರ್ಕಾಟಕ ಮಾಸದ ಅಪರಪಕ್ಷದ ತ್ರಯೋದಶಿ ಮಂಗಳವಾರ ಪುನರ್ವಸು ನಕ್ಷತ್ರದ ದಿನದಂದು ಸೊಟ್ಟೈಏಟ್ಟೂರ್ ತಿರುಮಲೈ ನಂಬಿಯು ಹಲವು ಏರ್ಪಾಡುಗಳನ್ನು ಮಾಡುತ್ತ ಪವಿತ್ರೋತ್ಸವದ ಐದು ದಿನಗಳಂದು ಐದು ಅತಿರಸಪಡಿ ನೈವೇದ್ಯ ಮಾಡಲು ಸಿದ್ಧತೆ ಮಾಡಿದನು. ಇದು ಸದಾಶಿವರಾಯನು ಪೃಥ್ವೀರಾಜ್ಯ ಮಾಡುತ್ತಿದ್ದ ಕಾಲ. ಈ ಶಾಸನವಿರುವುದು ತಿರುಪತಿಯ ಶ್ರೀ ಗೋವಿಂದರಾಜಸ್ವಾಮಿ ಆಲಯದ ಎರಡನೆಯ ಪ್ರಾಕಾರದ ದಕ್ಷಿಣದ ಗೋಡೆಯಲ್ಲಿ.

ಇದಾದ ನಂತರ ಯಾವ ಕಡೆಯೂ ಪವಿತ್ರೋತ್ಸವದ ಹೆಸರು ಕೇಳಿ ಬರುವುದಿಲ್ಲ. ಆಂಗ್ಲರು ಅಧಿಕಾರ ವಹಿಸಿಕೊಂಡಾಗ 19 ನೇ ಶತಮಾನದಲ್ಲಿ ಆಲಯದ ಉತ್ಸವಗಳು ಯಾವ ಯಾವುದು ನಡೆಯುತ್ತಿದ್ದಿತು ಎಂಬ ವಿವರಗಳನ್ನು ದಾಖಲಿಸಿರುವರಾದರೂ ಈ ಪವಿತ್ರೋತ್ಸವ ಆ ಪಟ್ಟಿಯಲ್ಲಿ ಕಂಡು ಬರುವುದಿಲ್ಲ.

ಇಪ್ಪತ್ತನಯ ಶತಮಾನದಲ್ಲಿ ಕಂಡು ಬರುವ ಅಂಶವೆಂದರೆ ಕಂಚಿ, ಶ್ರೀರಂಗ, ಚೆನ್ನೈಗಳ ವಿಷ್ಣು ಆಲಯಗಳಲ್ಲಿ ಪವಿತ್ರೋತ್ಸವ ಒಂದು ಪ್ರಮುಖ ಉತ್ಸವವಾಗಿ ಆಚರಣೆಯಲ್ಲಿರುವುದು. ತಿರುಮಲೆಯಲ್ಲಿಯೂ 1962 ರಲ್ಲಿ ಎಂದರೆ ಐತಿಹಾಸಿಕ ದಾಖಲೆಗಳಿಂದ ದೂರವಾದ ನಾಲ್ಕು ನೂರು ವರ್ಷಗಳ ನಂತರ ಆರಂಭವಾಗಿ ಈಗ ಪ್ರತಿವರ್ಷ ಆಗಸ್ಟ್ ತಿಂಗಳಿನಲ್ಲಿ ಮೂರುದಿನದ ಉತ್ಸವವಾಗಿ ನಡೆಯುತ್ತಿದೆ. ಅಂಕುರಾರ್ಪಣೆಯನ್ನು ಸೇರಿಸಿಕೊಂಡರೆ ನಾಲ್ಕು ದಿನದ ಉತ್ಸವವಾಗುತ್ತದೆ.


ಅಂಕುರಾರ್ಪಣೆಯ ದಿನದಂದು ಸಂಜೆ ಆಚಾರ್ಯ ಪುರುಷರು ಆಲಯದ ವಿಷ್ವಕ್ಸೇನರೊಂದಿಗೆ ವಸಂತ ಮಂಟಪದ ವರೆಗೆ ಆಗಮಿಸಿ ಯಜ್ಞ ಮಂಟಪದಲ್ಲಿ ಕುಂಭಗಳಲ್ಲಿಡಲು ಮೃತ್ಸಂಗ್ರಹಣೆ ಮಾಡುವರು. ಆನಂತರ ಆಲಯದ ಯಾಗಶಾಲೆಯಲ್ಲಿ ಅಂಕುರಾರ್ಪಣವಾಗುತ್ತವೆ. ಮಾರನೆಯ ದಿನ ಪವಿತ್ರೋತ್ಸವದ ಮೊದಲದಿನ ಬೆಳಗ್ಗೆ ಪವಿತ್ರ ಪ್ರತಿಷ್ಠೆಯಾಗುತ್ತದೆ. ರೇಷ್ಮೆಯ ಐದು ಬಣ್ಣದ ದಾರಗಳನ್ನು ಮಣಿಗಳ ರೂಪದಲ್ಲಿ ಪೋಣಿಸಿದಂತೆ ಪವಿತ್ರಗಳನ್ನು ತಯಾರಿಸಿ ಪ್ರತಿಷ್ಠೆ ಮಾಡಲಾಗುತ್ತದೆ. ಅಂದು ಸಂಜೆ ಉತ್ಸವ ವಿಗ್ರಹಗಳನ್ನು ಊರ ಮೆರವಣಿಗೆಯಲ್ಲಿ ಕರೆದುಕೊಂಡು ಬರುವರು. ಪವಿತ್ರೋತ್ಸವದ ಎರಡನೆಯ ದಿನ ಪವಿತ್ರ ಸಮರ್ಪಣೆ ನಡೆಯುತ್ತದೆ. ಅಂದು ಸಂಜೆ ಊರಮೆರವಣಿಗೆಯಾದ ಮೇಲೆ ಮೂರನೆಯ ದಿನ ಪೂರ್ಣಾಹುತಿ ನಡೆಯುತ್ತದೆ. ಮೂರೂ ದಿನಗಳಲ್ಲಿಯೂ ವೇದ ಪಾರಾಯಣ ಹಾಗೂ ಮೂರು ದಿನಗಳಲ್ಲಿ ದಿವ್ಯಪ್ರಬಂಧ ಪಠಣಗಳು ನಡೆದು ಆಗಮೋಕ್ತವಾಗಿ ಪವಿತ್ರೋತ್ಸವ ಸಾಂಗವಾಗುತ್ತದೆ.

ಪವಿತ್ರೋತ್ಸವದಲ್ಲಿ ಭಕ್ತರು ಅರ್ಜಿತ ಶುಲ್ಕ ಸಲ್ಲಿಸಿ ಭಾಗವಹಿಸಬಹುದು. ಪವಿತ್ರೋತ್ಸವದ ದಿನಗಳಲ್ಲಿ ಕಲ್ಯಾಣೋತ್ಸವವೇ ಮೊದಲಾದ ಇತರ ಆರ್ಜಿತ ಸೇವೆಗಳು ಇರುವುದಿಲ್ಲ. ಈ ಬಾರಿಯ ಪವಿತ್ರೋತ್ಸವಗಳು 17-8-2002 ರಿಂದ 20-8-2002 ವರೆಗೆ ನಡೆಯುತ್ತವೆ. ಪಕ್ಕದ ಪುಟದಲ್ಲಿ ಪವಿತ್ರ ಧರಿಸಿದ ಮಲೆಯಪ್ಪ ಸ್ವಾಮಿಯನ್ನೂ, ಉಭಯನಾಯಕಿಯರನ್ನು ಕಾಣಬಹುದಾಗಿದೆ.

★★★★★


ತಿರುಮಲೆಯಲ್ಲಿ ಪವಿತ್ರೋತ್ಸವ - 17-8-2002 ರಿಂದ 20-8-2002
ಪವಿತ್ರ ಮಾಲೆಗಳೊಂದಿಗೆ ಶ್ರೀ ಮಲೆಯಪ್ಪಸ್ವಾಮಿ ಹಾಗೂ ಶ್ರೀ, ಭೂದೇವಿಯರು.







Kṛiṣṇam vande jagatgurum

SRI MALAYAPPASWAMI AS LORD KRISHNA


TIRUMALA TIRUPATI DEVASTHANAMS ©
PHOTOGRAPHS : MARKONDEYA, DESIGN : SIVAPRASAD, TTD









ತಿರುಚಾನೂರಿನಲ್ಲಿ ಈಚೆಗೆ ನಡೆದ ಶ್ರೀ ಪದ್ಮಾವತೀ ಅಮ್ಮನವರ ವಸಂತೋತ್ಸವ ದೃಶ್ಯಗಳು.

ತಿರುಮಲೆಯಲ್ಲಿ ನಡೆದ ಅಭಿದ್ಯೇಕ ಅಭಿಷೇಕ - ಜ್ಯೇಷ್ಠಾಭಿಷೇಕ ದೃಶ್ಯಗಳು.

ಈಚೆಗೆ ತಿರುಮಲೆಯನ್ನು ಸಂದರ್ಶಿಸಿದ
ಲೋಕಸಭಾಧ್ಯಕ್ಷ ಶ್ರೀ ಮನೋಹರಜೋಷಿ
ಅವರಿಗೆ ಸ್ವಾಮಿ ಪ್ರಸಾದ ನೀಡುತ್ತ
ಇ.ಓ. ಡಾ|| ಪಿ. ಕೃಷ್ಣಯ್ಯ

ಈಚೆಗೆ ತಿರುಮಲೆಯನ್ನು ಸಂದರ್ಶಿಸಿದ
ಮಹಾರಾಷ್ಟ್ರ ಮುಖ್ಯಮಂತ್ರಿ ಶ್ರೀ ವಿಲಾಸರಾವ್ ದೇಶಮುಖ್
ಅವರಿಗೆ ಸ್ವಾಮಿ ಪ್ರಸಾದ ನೀಡುತ್ತಿರುವ
ಜೆ.ಇ.ಓ. ಶ್ರೀ ಬಾಲಸುಬ್ರಹ್ಮಣ್ಯಂ

ತಿರುಮಲೆ - ತಿರುಪತಿ ದೇವಸ್ಥಾನಗಳು
ನಿಗಾ ಹಾಗೂ ಭದ್ರತಾ ವಿಭಾಗ

ತಿರುಮಲೆ ತಿರುಪತಿ ದೇವಸ್ಥಾನಗಳ ಪ್ರಮುಖ ಅಂಗವಾಗಿ ಬೆಳೆಯುತ್ತ ಬಂದಿರುವ ಒಂದು ವಿಭಾಗವೆಂದರೆ ನಿಗಾ ಹಾಗೂ ಭದ್ರತಾ ವಿಭಾಗ. ಸೂಪರಿಂಟೆಂಡೆಂಟ್ ಆಫ್ ಪೋಲೀಸ್ ಹುದ್ದೆಗೆ ಸಮನಾದ ಒಬ್ಬ ಐ.ಪಿ.ಎಸ್. ಅಧಿಕಾರಿಯ ನೇತೃತ್ವದಲ್ಲಿ ಈ ವಿಭಾಗ ಕೆಲಸ ಮಾಡುತ್ತಿದೆ. ರಕ್ಷಣೆ ಹಾಗೂ ಭದ್ರತೆಯ ದೃಷ್ಟಿಯಿಂದ ವಿಭಾಗವನ್ನು ಎರಡು ಕೇಂದ್ರಗಳಾಗಿ ಮಾಡಿ ಒಂದು ತಿರುಮಲೆ ಕೇಂದ್ರವಾಗಿಯೂ, ಒಂದು ತಿರುಪತಿ ಕೇಂದ್ರವಾಗಿಯೂ ಮಾಡಿಕೊಂಡು ಇಬ್ಬರು ರಕ್ಷಣಾಧಿಕಾರಿಗಳ (ಡೆಪ್ಯೂಟಿ ಎಸ್.ಪಿ. ಸಮಾನ ಪದವಿ) ಮೇಲು ವಿಚಾರಣೆಯಲ್ಲಿ ಮುಖ್ಯ ರಕ್ಷಣಾಧಿಕಾರಿಗಳ ನೇತೃತ್ವದಲ್ಲಿ ಕೆಲಸ ನಿರ್ವಹಿಸಲಾಗುತ್ತಿದೆ. ಇಲ್ಲಿನ ಸಿಬ್ಬಂದಿವರ್ಗ ಹೀಗಿದೆ - ಅ) ಪೋಲೀಸ್ ಇಲಾಖೆಯ ಇನ್‌ಸ್ಪೆಕ್ಟರ್‌ಗೆ ಸಮಾನವಾದ ಸಹಾಯಕ ರಕ್ಷಣಾಧಿಕಾರಿ ಪದವಿ, ಆ) ಸಬ್ ಇನ್‌ಸ್ಪೆಕ್ಟರ್‌ಗೆ ಸಮಾನವಾದ ಭದ್ರತಾಧಿಕಾರಿ, ಇ) ಹೆಡ್ ವಿಜಿಲೆನ್ಸ್ ಗಾರ್ಡ್, ಈ) ಭದ್ರತಾ ಭಟರು - ಪೋಲೀಸು ಕಾನ್‌ಸ್ಟೇಬಲ್ ಹೆಡ್‌ಕಾನ್‌ಸ್ಟೇಬಲ್ ಸಮನಾದ ಪದವಿಗಳು, ಉ) ಜಮಾದಾರರು, ಊ) ರಕ್ಷಕ ಭಟರು. ಋ) ಹೋಂ ಗಾರ್ಡ್ಸ್, ೠ) ತಿರುಪತಿ ಶಿಬಿರಗಳಲ್ಲಿ ಎಸ್.ಟಿ. ಎಫ್. ಪೋಲೀಸು ಸಿಬ್ಬಂದಿ.

ಸಿಬ್ಬಂದಿಯ ಮೇಲಿನ ಸ್ತರದ ಅಧಿಕಾರಿಗಳನ್ನು ಪೋಲೀಸು ಇಲಾಖೆಯಿಂದ ಐದು ವರ್ಷಗಳಿಗೆ ಎರವಲು ವ್ಯವಸ್ಥೆಯ ಮೇಲೆ ತೆಗೆದುಕೊಳ್ಳಲಾಗುವುದು. ಉಳಿದ ಸಿಬ್ಬಂದಿಯನ್ನು ತಿ. ತಿ. ದೇವಸ್ಥಾನಗಳು ಮಾಜಿ ಸೈನಿಕರು, ಸಾರ್ವಜನಿಕರಲ್ಲಿ ನಿಯಮಾನುಸಾರವಾಗಿ ನಿಯಮನ ಮಾಡಿಕೊಳ್ಳುವುದು.

ಇದರೊಡನೆಯೇ ಮುಖ್ಯ ರಕ್ಷಣಾಧಿಕಾರಿಗಳ ಕೈಕೆಳಗೆ ಸಂಪರ್ಕ ವಿಭಾಗವೂ ಪರಕಾಮಣಿ ವಿಭಾಗವೂ ಕೆಲಸ ಮಾಡುತ್ತಿವೆ.

ತಿರುಮಲೆಯಲ್ಲಿನ ರಕ್ಷಣೆ ಭದ್ರತೆಗಳನ್ನು ಬಲಗೊಳಿಸಲು ತಿ.ತಿ.ದೇ. ಆಡಳಿತವು ಹಲವು ಹನ್ನೊಂದು ರೀತಿಯ ಕ್ರಮಗಳನ್ನು ಕೈಗೊಂಡಿದೆ.

ಹೈದರಾಬಾದಿನಿಂದ ರಾಜ್ಯ ಗೂಢಚಾರಿ ಸಂಸ್ಥೆಯ ಬಾಂಬ್ ವಿಫಲೀಕರಣ ಕಾರ್ಯಸಮಿತಿಯ ಒಂದು ತಜ್ಞರ ತಂಡ ತಿರುಮಲೆಯನ್ನು ಸಂದರ್ಶಿಸಿ, ಇಲ್ಲಿನ ಸಿಬ್ಬಂದಿಗೆ ಬಾಂಬ್‌ಗಳ ಇರುವಿಕೆಯ ತಪಾಸಣೆ ಹಾಗೂ ಬಾಂಬ್‌ಗಳ ನಿಷ್ಫಲೀಕರಣ ಕ್ರಿಯೆಗಳಲ್ಲಿ ಮಾಹಿತಿ ನೀಡಿ, ತಕ್ಕ ತರಬೇತಿಯನ್ನು ನೀಡಿದ್ದಾರೆ. ಹೈದರಾಬಾದಿನ ಐ.ಜಿ.ಆಫ್ ಪೋಲೀಸ್ ಅವರ ಮೂಲಕ 70 ಲಕ್ಷ ರೂಪಾಯಿಗಳ ವೆಚ್ಚದಲ್ಲಿ ವಿಶೇಷ ರೀತಿಯ ಬಾಂಬ್ ತಪಾಸಣೆ ಹಾಗೂ ನಿಷ್ಫಲೀಕರಣದ ಪರಿಕರಗಳನ್ನು ಈಚೆಗೆ ಕೊಂಡುಕೊಳ್ಳಲಾಗಿದೆ. ಮೇಲಿನ ವಿಶೇಷವಾದ ಉಪಕರಣಗಳನ್ನು ಪರಿಕರಗಳನ್ನು ಬಳಸುವ ವಿಧಾನ, ರೀತಿ ನೀತಿಗಳ ಬಗ್ಗೆ ತಕ್ಕ ತರಬೇತಿಯನ್ನು ತಿ.ತಿ.ದೇ. ರಕ್ಷಣಾ ಸಿಬ್ಬಂದಿಗೆ ನೀಡಲಾಗಿದೆ.

ಉನ್ನತ ಮಟ್ಟದ ತಜ್ಞ ಸಮಿತಿಯ ಶಿಫಾರಸ್ಸಿನಂತೆ ತಿ.ತಿ.ದೇ.ಗಳು 27.56 ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಹೈದರಾಬಾದಿನ ಇಸಿ ಐಐನ ರಾಪಿಸ್ಕ್ಯಾನನ ಕೈಚೀಲ ತಪಾಸಣಾ ಕ್ಷ-ಕಿರಣ ಯಂತ್ರವನ್ನು ಕೊಂಡುಕೊಂಡಿದ್ದು, ತಿರುಮಲೆಯ ಆಲಯ ಮಹಾದ್ವಾರದಲ್ಲಿ ಸ್ಥಾಪಿಸಲಾಗಿದೆ. ಸ್ವಾಮಿ ಆಲಯಕ್ಕೆ ಯಾವುದೇ ರೀತಿಯ ಬ್ಯಾಗ್ ಅನ್ನು ಯಾತ್ರಿಕರು ತೆಗೆದುಕೊಂಡು ಹೋಗುವಾಗ ಅಂತಹ ಬ್ಯಾಗ್ ಅನ್ನು ಇಲ್ಲಿಯೇ ತರಬೇತಿ ಹೊಂದಿದ ರಕ್ಷಕ ದಳದವರು ಪರಿಶೀಲನೆ ಮಾಡಿ ಒಳಗೆ ಬಿಡುವರು. ಐ.ಸಿ.ಐ.ಎಲ್ ನಿಂದ ಸಿ.ಸಿ.ಟಿ.ವಿ. ಕ್ಯಾಮರಾಗಳು, ಕೋಣಗಳ ರಕ್ಷಣಾ ವ್ಯವಸ್ಥೆಯ ಪರಿಕರ, ಪೋಟ್ಟು (ಅಡಿಗೆ ಮನೆ) ವಿನ ಅಗ್ನಿ ಆಲಾರಂ ವ್ಯವಸ್ಥೆಗಳನ್ನು ಕೊಂಡು ಕೊಂಡು ಸೂಕ್ತ ಸ್ಥಳಗಳಲ್ಲಿ ಇವುಗಳನ್ನು ಸ್ಥಾಪಿಸಲಾಗಿದೆ. ಸ್ವಾಮಿ ಆಲಯದಲ್ಲಿನ ಶ್ರೀರಂಗನಾಯಕ ಮಂಟಪದ ಬಳಿಯಲ್ಲಿ ಒಂದು ಕಂಟ್ರೋಲ್ ರೂಂ ಅನ್ನು ಏರ್ಪಡಿಸಿ, ಇಲ್ಲಿ ಅನುಭವೀ ಭದ್ರತಾ ಪಡೆಯಿಂದ ನಿರಂತರ ಕಾವಲು ಏರ್ಪಡಿಸಲಾಗಿದೆ. ತಿ.ತಿ.ದೇ.ಗಳ ಸಂಪರ್ಕ ಇಲಾಖೆಯ ಒಬ್ಬ ಎಸ್. ಐ. ಈ ಕಾವಲಿನ ಹೊಣೆ ಹೊತ್ತಿರುವರು. ಸಿ.ಸಿ.ಟಿ.ವಿ.ಯ ಈ ಕಂಟ್ರೋಲ್ ರೂಂನ ಹೊರತಾಗಿ ಆಲಯದ ಹೊರಗಡೆಯ ಮೂರು ಸ್ಥಳಗಳಲ್ಲಿ ಎಂದರೆ ತಿರುಮಲೆಯ ತಿ.ತಿ.ದೇ. ಇ.ಓ., ತಿ.ತಿ.ದೇ., ಜೆ.ಇ.ಓ., ತಿ.ತಿ.ದೇ. ಮುಖ್ಯ ರಕ್ಷಣಾಧಿಕಾರಿಯವರುಗಳ ಕ್ಯಾಂಪ್ ಕಚೇರಿಗಳಲ್ಲಿ ಕಂಟ್ರೋಲ್ ಹಾಗೂ ಮಾನೀಟರ್‌ಗಳನ್ನು ಏರ್ಪಡಿಸಲಾಗಿದ್ದು ತಿರುಮಲೆಯ ಆಲಯದಲ್ಲಿ ನಡೆಯ ತಕ್ಕ ಎಲ್ಲ ಚಟುವಟಿಕೆಗಳ ಮೇಲೆ ಕಣ್ಣಿಡಬಹುದಾಗಿದೆ.

ಅಗ್ನಿ ಶಾಮಕ ದಳದ ಅಧಿಕಾರಿಯ ನೇತೃತ್ವದಲ್ಲಿ ತಿರುಮಲೆಯ ಎಲ್ಲ ಪ್ರಮಾದಾವಕಾಶದ ಸ್ಥಳಗಳಲ್ಲಿ ಬೆಂಕಿಯಾರಿಸುವ ಕ್ರಮಗಳನ್ನು ಪರಿಕರಗಳನ್ನು ಸಿದ್ಧಪಡಿಸಲಾಗಿದೆ.

ತಿರುಮಲೆಯ ವೈಕುಂಠಂ ಕ್ಯೂ ಕಾಂಪ್ಲೆಕ್ಸ್‌ನಲ್ಲಿ ಆಯುಧ ತಪಾಸಣಾ ದ್ವಾರಬಂಧಗಳನ್ನು ಏರ್ಪಡಿಸಿ ತಪಾಸಣೆಯನ್ನು ಪರಿಣಾಮಕಾರಿಯಾಗಿಸಲಾಗಿದೆ.

ಸ್ವಾಮಿಯ ಆಲಯ ಹಾಗೂ ಯಾತ್ರಿಕ ಸಮುದಾಯದ ಸುರಕ್ಷಿತತೆಯ ಬಗ್ಗೆ ಗಮನವಿಟ್ಟು, ಎಲ್ಲ ರೀತಿಯ ಅವಾಂಛಿತ ಘಟನೆಗಳನ್ನೂ ಪರಿಣಾಮಕಾರಿಯಾಗಿ ಎದುರಿಸಲು ಕ್ರಮಗಳನ್ನು ಕೈಗೊಳ್ಳಲಾಗಿದೆ.

ಸ್ವಾಮಿಯ ಹುಂಡಿಯ ಪರಕಾಮಣಿ :

ತಿರುಮಲೆಯ ಆಲಯದ ಒಳಗಡೆ ಪರಕಾಮಣಿ ನಡೆಯುತ್ತದೆ. ಪರಕಾಮಣಿ



ಎಂದರೆ ದಿನ ನಿತ್ಯವೂ ಆಲಯದ ಹುಂಡಿಯ ಕಾಣಿಕೆಗಳನ್ನು ಲೆಕ್ಕಮಾಡುವುದು ಎಂದರ್ಥ.

ಪರಕಾಮಣಿಯ ನಾಣ್ಯಗಳ ಹಾಗೂ ನೋಟುಗಳ ವಿಭಾಗವನ್ನು ಸುಭದ್ರಗೊಳಿಸಲು ಡೆಪ್ಯೂಟಿ ಸೂಪರಿಂಟೆಂಡೆಂಟ್ ಸ್ಥಾಯಿಯ ಒಬ್ಬ ನಿಗಾ ಹಾಗೂ ಭದ್ರತಾಧಿಕಾರಿಯನ್ನು ಪರಕಾಮಣಿಯ ಜವಾಬ್ದಾರಿ ಹೊರುವಂತೆ ಮಾಡಲಾಗಿದೆ. ಪರಕಾಮಣಿಯ ಈ ವಿ.ಎಸ್.ಓ. (ವಿಜಿಲೆನ್ಸ್ ಅಂಡ್ ಸೆಕ್ಯೂರಿಟಿ ಆಫೀಸರ್) ಅವರ ಅಧೀನದಲ್ಲಿ ಒಬ್ಬ ಸಹಾಯಕ ಭದ್ರತಾಧಿಕಾರಿ (ಎ.ವಿ.ಎಸ್.ಓ.) ಹಾಗೂ ಒಬ್ಬ ವಿಜಿಲೆನ್ಸ್ ಇನ್ಸ್‌ಪೆಕ್ಟರುಗಳು ಕೆಲಸ ಮಾಡುತ್ತಾರೆ. ಇತರ ರಕ್ಷಕ ಭಟರು, ಭದ್ರತಾ ದಳಗಳನ್ನು ಸೆಕ್ಟರ್ 1 ಹಾಗೂ ಸೆಕ್ಟರ್ 3 ರಲ್ಲಿನಿಂದ ತರಲಾಗುವುದು. ದಿನವೂ ಪರಕಾಮಣಿ ಕೆಲಸವು ಬೆಳಗ್ಗೆ 7 ರಿಂದ ಸಂಜೆ 6 ಗಂಟೆಯವರೆಗೆ ನಡೆಯುತ್ತದೆ. ನಾಲ್ಕು ಅವಧಿಗಳ ಎರಡು ಷಿಫ್ಟ್‌ಗಳಲ್ಲಿ ಸಿಬ್ಬಂದಿ ಕೆಲಸ ಮಾಡುವರು. ಬೆಳಗ್ಗೆ 7 ರಿಂದ 10 ಹಾಗೂ 1 ರಿಂದ 4 ಮೊದಲ ಷಿಫ್ಟ್ ಹಾಗೂ ಬೆಳಗ್ಗೆ 10 ರಿಂದ ಮಧ್ಯಾಹ್ನ 1 ಹಾಗೂ ಮಧ್ಯಾಹ್ನ 4 ರಿಂದ 6 ಗಂಟೆಯವರೆಗೆ ಎರಡನೆಯ ಷಿಫ್ಟ್. ಪರಕಾಮಣಿ ಮಾಡುವ ಸಲುವಾಗಿ ತಿ.ತಿ.ದೇ. ಗಳ ಇತರ ವಿಭಾಗಗಳಲ್ಲಿ ಕೆಲಸ ಮಾಡುವ ಮೇಲ್ದರ್ಜೆ ಕೆಳದರ್ಜೆಯ ಗುಮಾಸ್ತರು, ಅಸಿಸ್ಟೆಂಟ್‌ಗಳು ಹಾಗೂ ಅಟೆಂಡರುಗಳನ್ನು ನಿಯಮಿಸಲಾಗುತ್ತದೆ. ಈ ಸಿಬ್ಬಂದಿಯನ್ನು ತಿಂಗಳಿಗೆ ನಾಲ್ಕೈದು ಬಾರಿ ಕೆಲಸಕ್ಕೆ ತೆಗೆದು ಕೊಳ್ಳಲಾಗುತ್ತದೆ. ಪರಕಾಮಣಿಯ ವಿಭಾಗವು ಒಬ್ಬ ಡೆ.ಇ.ಓ. ಅವರ ಮೇಲುಸ್ತುವಾರಿಯಲ್ಲಿರುವುದು. ಇಲ್ಲಿ ಎ.ಇ.ಓ. ಗುಮಾಸ್ತರುಗಳು, ಅಧೀಕ್ಷಕರು, ಅಸಿಸ್ಟೆಂಟ್‌ಗಳು ಕೆಲಸ ಮಾಡುವರು. ನಾಣ್ಯಗಳು ಹಾಗೂ ನೋಟಿನ ಪರಕಾಮಣಿಯ ಸ್ಥಳಗಳಲ್ಲಿ ಸಿ.ಸಿ.ಟಿ.ವಿ. ಕ್ಯಾಮರಾವನ್ನು ಅಳವಡಿಸಲಾಗಿದ್ದು ಇದನ್ನು ತಿ.ತಿ. ಆಲಯದ ಒಳಗಿನ ರಂಗನಾಯಕ ಮಂಟಪದ ಕಂಟ್ರೋಲ್ ರೂಂ ನಿಂದ ಗಮನಿಸಬಹುದು. ರೇಡಿಯೋ ಪ್ರಸಾರ ವಿಭಾಗದ ಒಬ್ಬ ನುರಿತ ಸಿ.ಸಿ.ಟಿ.ವಿ. ಆಪರೇಟರು ಹಾಗೂ ಒಬ್ಬ ರಕ್ಷಣಾ ಗಾರ್ಡ್‌ಗಳು ಕಂಟ್ರೋಲ್ ರೂಮಿನಿಂದ ಪರಕಾಮಣಿಯ ಪರಿಶೀಲನೆ ನಡೆಸುತ್ತ ಗಂಟೆಗೊಂದು ಬಾರಿ ಸಾಮಾನ್ಯ ಡೈರಿಯಲ್ಲಿ ಒಂದು ವಿವರದ ದಾಖಲೆ ಮಾಡುತ್ತಾರೆ. ಪರಕಾಮಣಿಯ ಬಾಗಿಲಲ್ಲಿ ನಿಂತ ಪಟುಭಟರು ಮೆಟಲ್ ಡಿಟೆಕ್ಟರನ್ನು ಹಿಡಿದು ಪರಕಾಮಣಿ ಕ್ಷೇತ್ರದಿಂದ ಹೊರಗೆ ಹೋಗುವವರನ್ನೆಲ್ಲ ಯಾರೂ ಯಾವುದೇ ವಸ್ತುವನ್ನೂ ಪರಕಾಮಣಿಯಿಂದಾಚೆಗೆ ತೆಗೆದುಕೊಂಡು ಹೋಗದಂತೆ ಪರಿಶೀಲನೆ ನಡೆಸುವರು. ಈ ಪರಿಶೀಲನೆಗೆ ರಕ್ಷಣಾಧಿಕಾರಿ ಹಾಗೂ ಎ.ವಿ.ಎಸ್.ಓ. ಗಳು ಉಪಸ್ಥಿತರಿರಬೇಕು. ಈ ವ್ಯವಸ್ಥೆಯಲ್ಲಿ ಯಾವುದೇ ರೀತಿಯ ಅನವಧಾನವೂ ನಡೆಯ ಬಾರದೆಂದು ಮೂರು ಮಂದಿ ಯಾತ್ರಿಕ ಸಾಕ್ಷಿಗಳನ್ನು ವೈಕುಂಠಂ ಕ್ಯೂ ಕಾಂಪ್ಲೆಕ್ಸ್‌ನಲ್ಲಿ ಸಗಟಾಗಿ ಗುರುತಿಸಿ, ಕರೆತರಲಾಗುವುದು. ಇಂತಹ ಯಾತ್ರಿಕ ಸಾಕ್ಷಿಗಳನ್ನು ಮಹಾದ್ವಾರದಿಂದ ನೇರವಾಗಿ ಒಳಕ್ಕೆ ಕರೆತಂದು ನೋಟುಗಳ ಎಣಿಸುವಿಕೆಯಲ್ಲಿ ಇಬ್ಬರನ್ನೂ, ನಾಣ್ಯಗಳ ಎಣಿಸುವಿಕೆಯಲ್ಲಿ ಒಬ್ಬರನ್ನೂ ಕೂರಿಸಿ ನೋಡಿಕೊಳ್ಳಲು ಹೇಳಲಾಗುವುದು. ಇವರು 7 ರಿಂದ ಮಧ್ಯಾಹ್ನ 1 ರವರೆಗೆ ಎರಡು ಷಿಫ್ಟ್‌ಗಳಲ್ಲಿ ಕೆಲಸ ನಿರ್ವಹಿಸುವರು. ಮತ್ತೆ ಮಧ್ಯಾಹ್ನ 12 ಗಂಟೆಗೆ ಕ್ಯೂ ಕಾಂಪ್ಲೆಕ್ಸ್‌ನಲ್ಲಿ ಮತ್ತೂ ಮೂವರನ್ನು ಆಯ್ಕೆ ಮಾಡಿಕೊಂಡು ಅವರು ಮಧ್ಯಾಹ್ನ 1 ರಿಂದ 6 ವರೆಗೆ ಸಾಕ್ಷಿಗಳಾಗಿರುವರು. ಇವರು ಪರಕಾಮಣಿಯನ್ನು ಒಳಗೆ ಕುಳಿತು ನೋಡುವರು. ಪರಕಾಮಣಿ ಕೊಠಡಿಯಿಂದ ಪರಕಾಮಣಿ ಸಿಬ್ಬಂದಿ ಹೊರಕ್ಕೆ ಬರುವಾಗ ಮತ್ತೆ ಅವರನ್ನು ತಪಾಸಿಸುವ ಸಂದರ್ಭದಲ್ಲಿಯೂ ಯಾತ್ರಿಕ ಸಾಕ್ಷಿಯ ಉಪಸ್ಥಿತಿಯಿರುತ್ತದೆ. ಪರಕಾಮಣಿ ಅಂಗಳವನ್ನು ಬಿಟ್ಟು ಹೊರಟಾಗ, ಯಾತ್ರಿಕ ಸಾಕ್ಷಿಗಳಿಗೆ ಸ್ವಾಮಿ ದರ್ಶನವನ್ನು ಏರ್ಪಡಿಸಿ ಅವರಿಗೆ ಉಚಿತವಾಗಿ ಒಂದು ಲಾಡು ಒಂದು ವಡೆಯನ್ನು ಪ್ರಸಾದ ರೂಪವಾಗಿ ನೀಡಲಾಗುತ್ತದೆ. ಇಲ್ಲಿನ ಎಲ್ಲ ನಾಣ್ಯಗಳನ್ನು ನೋಟುಗಳನ್ನು ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಸರಿಯಾದ ಲೆಕ್ಕದೊಡನೆ ಇಡಲಾಗುವುದು. ಹುಂಡಿಯಲ್ಲಿ ಬರುವಂತಹ ಚಿನ್ನ ಬೆಳ್ಳಿಗಳನ್ನು ತಿ.ತಿ.ದೇ. ಬೆಲೆ ಕಟ್ಟುವವರ ಮೂಲಕ ಸರಿಯಾಗಿ ಲೆಕ್ಕ ಹಾಕಿಸಲಾಗುವುದು. ಇದರ ಜೊತೆಗೇ ಸೀರೆಗಳು, ಉತ್ತರೀಯಗಳು, ಮತ್ತಿತರ ವಸ್ತುಗಳನ್ನು ಬೇರೆಯಾಗಿಯೇ ಸಕ್ರಮವಾದ ಜಾಹೀರು ಮಾಡಿದ ನಂತರ ಹರಾಜು ಹಾಕಿ ಬಂದ ಹಣವನ್ನು ಸ್ವಾಮಿ ಸೇವೆಗೇ ಮುಡಿಪಾಗಿಡಲಾಗುವುದು.

ಹುಂಡಿಯನ್ನು ಸೀಲು ಮಾಡುವಿಕೆ :

ತಿರುಮಲೆಯ ಆಲಯದ ಉತ್ತರದ ಭಾಗದಲ್ಲಿ ತಿರುಮಾಮಣಿ ಮಂಟಪದಲ್ಲಿ ಪ್ರತ್ಯೇಕವಾದ ಕಟಾಂಜನದ ಒಳಗೆ ಹುಂಡಿಯನ್ನು ವ್ಯವಸ್ಥೆ ಮಾಡಲಾಗಿದೆ. ಸ್ವಾಮಿಯ ದರ್ಶನ ಮಾಡಿದ ನಂತರ ಪ್ರದಕ್ಷಿಣಾ ಪಥದಲ್ಲಿ ಸಾಗಿ ಬಂದು ಯಾತ್ರಿಕರು ಸರತಿಯ ಸಾಲಿನಲ್ಲಿ ನಿಂತು ತಮ್ಮ ಕಾಣಿಕೆಗಳನ್ನು ಹುಂಡಿಯಲ್ಲಿ ಸಮರ್ಪಿಸುವರು. ಇಲ್ಲಿ ಹುಂಡಿಯು ತುಂಬಿದ ಕೂಡಲೇ ಸನ್ನಿಧಿಯಲ್ಲಿರುವ ಅಧೀಕ್ಷಕರು ತಮ್ಮ ಸಿಬ್ಬಂದಿಯ ನೆರವಿನಿಂದ ಇಬ್ಬರು ಯಾತ್ರಿಕರ ಹಾಗೂ ಒಬ್ಬ ಭದ್ರತಾ ಸಿಬ್ಬಂದಿಯನ್ನು ಸಾಕ್ಷಿಯಾಗಿಟ್ಟು ಕೊಂಡು ತುಂಬಿದ ಹುಂಡಿಯ ಬಟ್ಟೆಯನ್ನು ಮುಚ್ಚಿ ತಕ್ಕ ಮುದ್ರೆಗಳನ್ನು ಒತ್ತಿ ಭದ್ರವಾಗಿ ಸೀಲು ಮಾಡುವರು. ಅಂದಿನ ದಿನಾಂಕ, ಕಾಲ, ಯಾತ್ರಿಕ ಸಾಕ್ಷಿಗಳ ವಿಳಾಸಗಳನ್ನು ಸರಿಯಾಗಿ ದಾಖಲೆ ಪುಸ್ತಕದಲ್ಲಿ ನಮೂದಿಸಿ ಭದ್ರತಾ ಸಿಬ್ಬಂದಿಯವರು ಸಂಬಂಧಪಟ್ಟ ಎಲ್ಲರಿಂದಲೂ ಸಹಿ ಪಡೆಯುವರು. ಇವೆಲ್ಲ ಕ್ರಮಗಳನ್ನೂ ನಡೆಸಿದ ಮೇಲೆ ಸೀಲು ಮಾಡಿದ ಹುಂಡಿಯನ್ನು ಸನ್ನಿಧಿಯ ಸಿಬ್ಬಂದಿ ಕಾಣಿಕೆಗಳ ಕೋಣೆಗೆ ತಂದು ಅಲ್ಲಿರುವ ದಾಖಲಾತಿ ಪುಸ್ತಕದಲ್ಲಿ ಸರಿಯಾದ ದಾಖಲೆಗಳನ್ನು ನಮೂದಿಸಿ ಸೀಲು ಮಾಡಿದ ತುಂಬಿದ ಹುಂಡಿಯನ್ನು ಅಲ್ಲಿ ಸುರಕ್ಷಿತವಾಗಿ ಇಡುವರು.

ರಕ್ಷಣೆ ಹಾಗೂ ಭದ್ರತಾ ಸಿಬ್ಬಂದಿಯ ದೈನಿಕ ಕರ್ತವ್ಯಗಳು :

ಬಿ.ಡಿ.ಡಿ.ಎಸ್. ಪರಿಕರಗಳನ್ನು ಬಳಸಿ ನುರಿತ ಸಿಬ್ಬಂದಿಯು ದಿನಕ್ಕೆ ಎರಡುಬಾರಿ ಒಮ್ಮೆ ಬೆಳಗ್ಗೆ ಒಮ್ಮೆ ಸಂಜೆಯಲ್ಲಿ ವೈಕುಂಠ ಕ್ಯೂ ಕಾಂಪ್ಲೆಕ್ಸ್ ಅನ್ನು ಪರಿಶೀಲಿಸುವರು. ಕೈಯಲ್ಲಿ ಹಿಡಿದು ಸಾಗುವ ಹಾಗೂ ದ್ವಾರ ಬಂಧದ ಆಯುಧ ತಪಾಸಣೆ ಪರಿಕರವನ್ನು ಭದ್ರತಾ ಸಿಬ್ಬಂದಿಯವರು ಮೇಲಿಂದ ಮೇಲೆ ವೈಕುಂಠಂ ಕ್ಯೂ ಕಾಂಪ್ಲೆಕ್ಸ್‌ನಲ್ಲಿಯೂ, ಸ್ವಾಮಿ ಆಲಯದಲ್ಲಿಯೂ ಬಳಸುತ್ತಲೇ ಇರುತ್ತಾರೆ. ಜೊತೆಗೇ ಈ ಮುಂದೆ ಪಟ್ಟಿ ಮಾಡಿರುವ ಹಲವು ಕರ್ತವ್ಯಗಳನ್ನು ಭದ್ರತಾ ಸಿಬ್ಬಂದಿಯವರು ನಿರ್ವಹಿಸುವರು.

★ ಗುಪ್ತವಾಗಿ ಮಾಹಿತಿಯನ್ನು ಸಂಗ್ರಹಿಸುವ ವಿಧಾನ.

★ ಬ್ಲಾಕ್ ಮಾರ್ಕೆಟ್ ಮಾಡುವವರನ್ನು ಹಿಡಿದು ಕ್ರೈಂ ಪೋಲೀಸರಿಗೆ ಒಪ್ಪಿಸುವಿಕೆ.

★ ಅಸಾಮಾಜಿಕ ವ್ಯಕ್ತಿಗಳ ಬಗ್ಗೆ ಕಣ್ಣಿಡುವಿಕೆ.

★ ದೂರು ದೋಷಗಳ ಪರಿಶೀಲನೆ ಮುಂತಾದುವು.

★ ಗುಪ್ತಶೋಧನೆಗಳು.

★ ಬ್ರಹ್ಮೋತ್ಸವವೇ ಮೊದಲಾದ ಉತ್ಸವಗಳ ಹೊತ್ತಿನಲ್ಲಿ ಹೆಚ್ಚುವ ಜನಸಂದಣಿಗೆ ತೊಂದರೆಯಾಗದಂತೆ ಜನ ಸಂದಣಿಯ ವ್ಯವಸ್ಥೀಕರಣ ಹಾಗೂ ನಿಯಂತ್ರಣ.

★ ತಿರುಮಲೆಯಲ್ಲಿ ನಿಷೇಧಿತವಾದ ಹೊಗೆಸೊಪ್ಪು, ಮಾದಕ ಪದಾರ್ಥಗಳು, ಮದ್ಯ ಮಾಂಸಗಳನ್ನು ಸಾಗಿಸುವವರನ್ನು ಹಿಡಿಯುವಿಕೆ, ಅಂತಹವರನ್ನು ಹಿಡಿದು ಆಯಾ ವಸ್ತುಗಳೊಡನೆ ಸ್ಥಳೀಯ ಪೋಲೀಸರಿಗೆ ಒಪ್ಪಿಸುವಿಕೆ.

ಮೇಲಿನ ಕೆಲಸಗಳ ಜೊತೆಗೇ ಸಂದಣಿಯಲ್ಲಿ ಬೇರೆಯಾಗಿ ತಮ್ಮವರಿಂದ ತಪ್ಪಿಸಿಕೊಂಡ ವೃದ್ಧರು ಹಾಗೂ ಮಕ್ಕಳನ್ನು ಕಾಪಾಡಿ, ಧ್ವನಿವರ್ಧಕ ವ್ಯವಸ್ಥೆಯಲ್ಲಿ ಅವರ ವಿವರಗಳನ್ನು ಪ್ರಕಟಿಸಿ ಸಂಬಂಧ ಪಟ್ಟವರಿಗೆ ಒಪ್ಪಿಸುವ, ಕಳೆದು ಹೋಗಿ ದೊರಕಿದ ವಸ್ತುಗಳನ್ನು ತತ್ಸಂಬಂಧಿ ವ್ಯಕ್ತಿಗಳಿಗೆ ಒಪ್ಪಿಸುವುದು ಮೊದಲಾದ ಕೆಲಸಗಳನ್ನೂ ಮಾಡುವುದು.

ಈ ಎಲ್ಲ ಕೆಲಸಗಳ ಕರ್ತವ್ಯಗಳ ನಿರ್ವಹಣೆಗಾಗಿ ರಕ್ಷಣೆ ಮತ್ತು ಭದ್ರತೆಯ ಇಡೀ ಕಾರ್ಯ ಕ್ಷೇತ್ರವನ್ನು ಹತ್ತು ಭಾಗಗಳೆಂದು (ಸೆಕ್ಟರ್‌ಗಳು) ವಿಭಾಗಿಸಿ ಗುರುತಿಸಲಾಗಿದೆ. ಇವುಗಳಲ್ಲಿ ಮೊದಲನೆಯ ಏಳು ಭಾಗಗಳು ತಿರುಮಲೆಯಲ್ಲಿ ಹಾಗೂ ಕಡೆಯ ಮೂರು ಭಾಗ ತಿರುಪತಿ ಹಾಗೂ ಮತ್ತಿತರ ಸ್ಥಳಗಳಲ್ಲಿ ಗುರುತಿಸಲಾಗಿದೆ.

ಮೊದಲನೆಯ ಸೆಕ್ಟರ್ ತಿರುಮಲೆಯ ಆಲಯ, ಪುಷ್ಕರಿಣಿ, ವರಾಹಸ್ವಾಮಿ ಆಲಯ ಹಾಗೂ ಲಾಡು ಕೌಂಟರ್‌ಗಳು. ಎರಡನೆಯ ಸೆಕ್ಟರಿನಲ್ಲಿ ವಿಜಯಾಬ್ಯಾಂಕ್, ಆರ್ಜಿತಂ ಕಚೇರಿ, ವೈಕುಂಠಂ ಕ್ಯೂಕಾಂಪ್ಲೆಕ್ಸ್ 1, 2 ಎ.ಟಿ.ಸಿ. ಕ್ಯಾಂಟೀನ್ ಬರುತ್ತವೆ. ಮೂರನೆಯ ಸೆಕ್ಟರಿನಲ್ಲಿ ಕೇಂದ್ರ ಸ್ವಾಗತಕಚೇರಿ, ಎಸ್.ವಿ. ಪ್ರೌಢಶಾಲೆ. ಫಿಲ್ಟರ್ ಹೌಸ್, ನಿಗಾ ಹಾಗೂ ಭದ್ರತಾ ಕಚೇರಿಗಳಿದ್ದರೆ ನಾಲ್ಕನೆಯ ಸೆಕ್ಟರಿನಲ್ಲಿ ಅನ್ನದಾನಂ ಕಲ್ಯಾಣಕಟ್ಟೆ, ಸಿಬ್ಬಂದಿಯ ಕ್ಯಾಂಟೀನ್, ಪುರೋಹಿತ ಸಂಘ, ಸನ್ನಿಧಿ ಬೀದಿ ತಿರುಮಲೆಯ ಷಾಪಿಂಗ್ ಕಾಂಪ್ಲೆಕ್ಸ್‌ಗಳು ಬಂದರೆ ಈ ಪ್ರಾಂತ್ಯವೆಲ್ಲ ಐದನೆಯ ಸೆಕ್ಟರಿನಲ್ಲಿ ಬರುತ್ತದೆ. ಆರನೇ ಸೆಕ್ಟರಿನಲ್ಲಿ ತಿರುಮಲೆಯ ಜಿ.ಎನ್.ಸಿ. ಟೋಲ್‌ಗೇಟ್, ಕಾಲುಹಾದಿ ಹಾಗೂ ಘಟ್ಟದ ಎರಡೂ ರಸ್ತೆಗಳು ಬರುವುವು. ಏಳನೆಯ ಸೆಕ್ಟರಿನಲ್ಲಿ ತಿರುಮಲೆಯ ಇತರ ಪ್ರದೇಶಗಳಾದ ಪಾಪನಾಶನಂ, ಆಕಾಶಗಂಗ, ಬಾಲಾಜಿನಗರ ಧರ್ಮಗಿರಿ - ಮೊದಲಾದ ಸ್ಥಳಗಳೆಲ್ಲ ಬರುತ್ತವೆ.

ಎಂಟನೇ ಸೆಕ್ಟರಿನಲ್ಲಿ ತಿ.ತಿ.ದೇ. ಆಡಳಿತಕ್ಕೆ ಸೇರಿದ ಅಲಿಪಿರಿಯಿಂದ ಗಾಳಿಗೋಪುರದ ಕಾಲುಹಾದಿ, ಶ್ರೀನಿವಾಸ ಮಂಗಾಪುರದ ಆಲಯ, ಅಲಿಪಿರಿ ಟೋಲ್‌ಗೇಟು, ಕಪಿಲ ತೀರ್ಥ, ತಿ.ತಿ.ದೇ. ಡಿ.ಪಿ. ಡಬ್ಲ್ಯೂ, ಉಗ್ರಾಣ, ಅಲಿಪಿರಿಯ ಲಗ್ಗೇಜು ಕೌಂಟರು, ಪಾದಾಲ ಮಂಟಪಂ, ಘಟ್ಟದ ರಸ್ತೆಯ ವಿನಾಯಕ ಆಲಯ ಮೊದಲಾದವುಗಳಿದ್ದರೆ 9 ನೇ ಸೆಕ್ಟರಿನಲ್ಲಿ ತಿರುಚಾನೂರು ಆಲಯ, ಶ್ರೀ ಗೋವಿಂದ ರಾಜಸ್ವಾಮಿ ಆಲಯ, ಶ್ರೀ ಕೋದಂಡ ರಾಮಸ್ವಾಮಿ ಆಲಯ, ತಿ.ತಿ.ದೇ. ಪ್ರೆಸ್, ಸಾರಿಗೆ ವಿಭಾಗ, 1,2,3 ನೇ ಸತ್ರಗಳು, ತಿ.ತಿ.ದೇ. ಆಡಳಿತ ಭವನ, ಪುಷ್ಕರಿಣಿಗಳು, ಶ್ರೀ ಆಂಜನೇಯಸ್ವಾಮಿ ಆಲಯ ಮೊದಲಾದವೆಲ್ಲ ಇವೆ.



ರಕ್ಷಣಾತರಬೇತಿ ಶಿಬಿರದ ಮೂರನೆಯ ತಂಡದ ತರಬೇತಿಯ ಆರಂಭದ ಸಮಾವೇಶ.



ಹತ್ತನೆಯ ಸೆಕ್ಟರ್ ಆಚೆಗೆ ಇರುವಂತಹ ನಾರಾಯಣವನ, ನಾಗಲಾಪುರ, ಅಪ್ಪಲಾಯ ಗುಂಟ, ಕಾರ್ವೇಟಿನಗರ, ಹೃಷೀಕೇಶದ ಆಲಯಗಳು, ಅಲಿಪಿರಿಯ ಅತಿಥಿಗೃಹ, ತಿ.ತಿ.ದೇ. ಶಿಕ್ಷಣ ಸಂಸ್ಥೆಗಳು, ಎಸ್.ವಿ. ಮ್ಯೂಸಿಯಂ, ಅನ್ನಮಾಚಾರ್ಯ ಕಲಾ ಮಂದಿರ, ಎಸ್.ವಿ. ಅತಿಥಿಗೃಹ, ಎಸ್.ಪಿ. ಅತಿಥಿಗೃಹ ಆಸ್ಪತ್ರೆಗಳು, ಕಾರ್ಯನಿರ್ವಹಣಾಧಿ ಕಾರಿಗಳ ಬಂಗಲೆ ಮೊದಲಾದವುಗಳು ಬರುತ್ತವೆ.

ಮೇಲಿನ ಎಲ್ಲ ಸೆಕ್ಟರುಗಳಲ್ಲಿಯೂ ಒಬ್ಬ ಎ.ವಿ. ಅಂಡ್ ಎಸ್.ಓ. (ಅಸಿಸ್ಟೆಂಟ್ ವಿಜಿಲೆನ್ಸ್ ಅಂಡ್ ಸೆಕ್ಯೂರಿಟಿ ಆಫೀಸರ್) ಹೊಣೆಗಾರರಾಗಿದ್ದು ಅವರ ಕೆಳಗೆ ಕನಿಷ್ಠ ಪಕ್ಷ ಒಬ್ಬ ವಿಜಿಲೆನ್ಸ್ ಇನ್ಸ್‌ಪೆಕ್ಟರ್ ಆದರೂ ಇರುವರು. ಇವರು ತಮ್ಮ ಭಾಗದ ಇಡೀ ರಕ್ಷಕ ಭಟರ, ಭದ್ರತಾದಳದ ಮೇಲುವಿಚಾರಣೆ ನಡೆಸುವರು. ಸರತಿಯ ಸಾಲನ್ನು ಗಮನವಿಟ್ಟು ಕಾಯುವಿಕೆ, ಪರಿಶೀಲಿಸುವಿಕೆ, ತಿ.ತಿ.ದೇ. ಸಿಬ್ಬಂದಿ ಶಿಸ್ತುಪಾಲನೆ ಮಾಡುವಂತೆ ನೋಡುವಿಕೆ, ಗುಮಾನಿ ವ್ಯಕ್ತಿಗಳನ್ನು ಗುರುತಿಸುವಿಕೆ, ಅಪರಿಚಿತ ವಸ್ತುಗಳನ್ನು ಗಮನಿಸುವಿಕೆ, ಗರ್ಭಗುಡಿಯ ಬಗ್ಗೆ ಹೆಚ್ಚು ಗಮನ ನೀಡುವಿಕೆ, ಸಿ.ಸಿ.ಟಿ.ವಿ. ಮಾನಿಟರ್‌ಗಳ ಪರಿಶೀಲನೆ, ನಿಷಿದ್ಧ ಪ್ರದೇಶದಲ್ಲಿ ಬೀದಿ ಮಾರಾಟಗಾರರಿಲ್ಲದಂತೆ ನೋಡುವಿಕೆಗಳು ಇವರ ಕರ್ತವ್ಯಗಳಲ್ಲಿ ಕೆಲವು.

ಮಿಕ್ಕಂತೆ ರಕ್ಷಣಾ ಸಿಬ್ಬಂದಿ ಮೂರು ಕಾಲಾವಧಿಗಳಲ್ಲಿ ಕೆಲಸ ಮಾಡುತ್ತದೆ. ಮೊದಲನೆಯ ಷಿಫ್ಟ್ ಮಧ್ಯಾಹ್ನ 12 ರಿಂದ ರಾತ್ರಿ 8 ಗಂಟೆಯ ವರೆಗೆ ಎರಡನೆಯ ಷಿಫ್ಟ್ ರಾತ್ರಿ 8 ರಿಂದ ಬೆಳಗ್ಗೆ ಎಂಟರವರೆಗೆ ಮತ್ತು ಬೆಳಗ್ಗೆ ಎಂಟರಿಂದ ಮಧ್ಯಾಹ್ನ 12 ರವರೆಗೆ ಕೆಲಸ ಮಾಡಿದರೆ ಮೂರನೆಯ ಒಂದು ಗುಂಪು ವಿಶ್ರಾಂತಿಯಲ್ಲಿರುವುದು. ಪ್ರತಿ ಸೆಕ್ಟರಿನಲ್ಲಿಯೂ ಹಾಜರಾತಿ, ರೋಸ್ಟರ್, ಸಂಚಲನ, ಘೋಷಣೆಗಳ ರಿಜಿಸ್ಟರ್‌ಗಳಿರುತ್ತವೆ.

ತಿಂಗಳಿಗೆ ಒಮ್ಮೆ ಆಲಯದ ಒಳಗಡೆ ಮುಖ್ಯ ರಕ್ಷಣಾಧಿಕಾರಿಗಳಿಂದ ರಕ್ಷಣಾಕಾರ್ಯಾಗಾರ ನಡೆದು ಎಲ್ಲ ರಕ್ಷಣೆಯ ಪರಿಕರಗಳು, ಅವುಗಳನ್ನು ಬಳಸತಕ್ಕ ಮನುಷ್ಯಸಿಬ್ಬಂದಿ ತಕ್ಕ ಸಿದ್ಧತೆಯಲ್ಲಿರುವರೆಂಬುದನ್ನು ಖಚಿತಪಡಿಸಿ ಕೊಳ್ಳಲಾಗುತ್ತದೆ.

ತಿರುಮಲೆ ತಿರುಪತಿಗಳಲ್ಲಿ ಕಂಟ್ರೋಲ್ ಕೇಂದ್ರಗಳು :

2001 ರ ಜನವರಿ 26 ರಂದು ಮುಖ್ಯ ರಕ್ಷಣಾಧಿಕಾರಿಗಳು ತಿರುಮಲೆಯಲ್ಲಿ ಒಂದು ಹಾಗೂ ತಿರುಪತಿಯಲ್ಲಿ ಒಂದು ಕಂಟ್ರೋಲ್ ಪಾಯಿಂಟಗಳನ್ನು ಉಂಟಾಗಿಸಿದರು. ಎರಡೂ ಕೇಂದ್ರಗಳನ್ನು ಇಪ್ಪತ್ನಾಲ್ಕು ಗಂಟೆಯೂ ನೋಡಿಕೊಳ್ಳಲು ಸಿಬ್ಬಂದಿಯಿರುತ್ತದೆ. ಎರಡೂ ಕಂಟ್ರೋಲ್ ರೂಂಗಳನ್ನೂ ಇಡೀ ಸಂಪರ್ಕ ವ್ಯವಸ್ಥೆಯೊಡನೆ ಜೋಡಿಸಲಾಗಿದೆ. ತಿರುಮಲೆಯ ಕಂಟ್ರೋಲ್ ರೂಂ ನ ದೂರವಾಣಿ ನಂಬರು 08574 - 77395 ಹಾಗೂ ತಿರುಪತಿಯ ಕಂಟ್ರೋಲ್ ರೂಮಿನ ದೂರವಾಣಿ ನಂಬರ್ 08574-34825 ಆಗಿರುವುದು. ಇಲ್ಲಿನ ಸಿಬ್ಬಂದಿಯ ಕರ್ತವ್ಯವೆಂದರೆ-

★ ಪ್ರತಿನಿತ್ಯವೂ ವಿವಿಧ ಸೆಕ್ಟರ್‌ಗಳಿಂದ ಬರುವ ಪರಿಸ್ಥಿತಿ ವರದಿಗಳನ್ನು ಕಾರ್ಯನಿರ್ವಹಣಾಧಿಕಾರಿಗಳಿಗೆ/ಮುಖ್ಯ ರಕ್ಷಣಾಧಿಕಾರಿಗಳಿಗೆ ನೀಡುವುದು. ಇದಕ್ಕಾಗಿ ಪ್ರತ್ಯೇಕವಾದ ಪದ್ಧತಿಯ ಪೂರ್ವ ನಿರ್ಧಾರಿತ ...ಯ ವಿವರಗಳ ಪಟ್ಟಿಕೆಯನ್ನು ತುಂಬಬೇಕಾಗುವುದು.

★ ಯಾತ್ರಿಕರ ದೂರುಗಳನ್ನು ಸ್ವೀಕರಿಸಿ ತತ್ಸಂಬಂಧಿ ರಕ್ಷಣಾಧಿಕಾರಿಗಳಿಗೆ ತಿಳಿಸುವುದು.

★ ರಿಪೀಟರ್ ಸ್ಟೇಷನ್ ನ ಸಂಪರ್ಕ ಹೊಂದಿರುವುದು.

★ ಕಂಟ್ರೋಲ್ ರೂಂ ನವರು ಪ್ರತಿ ಎರಡು ಗಂಟೆಗೆ ಒಮ್ಮೆ ಸತ್ರಗಳಲ್ಲಿರುವ ಜನ ವಿವರ, ಸುದರ್ಶನ ಟೋಕನ್‌ನ ಕಾಲ ವಿವರ, ಧರ್ಮದರ್ಶನದ ಕೋಣೆಗಳ ಸಂದಣಿಯ ವಿವರಗಳನ್ನು ಪಡೆದು ರಿಪೀಟರ್ ಸ್ಟೇಷನ್, ತಿರುಪತಿ ಕಂಟ್ರೋಲ್ ಮತ್ತಿತರ ನಿಸ್ತಂತು ನಿಲ್ದಾಣಗಳಿಗೆ ವಿ.ಎಚ್.ಎಫ್. ಸೆಟ್ ಮೂಲಕ ತಿಳಿಸಬೇಕು.

ರಾಷ್ಟ್ರ ಧ್ವಜ ವಂದನೆ :

ರಾಷ್ಟ್ರ ವಂದನೆಯ ಸಂಕೇತವಾಗಿ ಗಣತಂತ್ರದಿನ ಹಾಗೂ ಸ್ವಾತಂತ್ರ್ಯದಿನಗಳಂದು ನಿಗಾ ಹಾಗೂ ಭದ್ರತೆಯ ವಿಭಾಗದ ಸಿಬ್ಬಂದಿಯು ರಾಷ್ಟ್ರ ಧ್ವಜವನ್ನು ವಂದಿಸುತ್ತದೆ. ತಿರುಪತಿಯಲ್ಲಿನ ಆಡಳಿತ ಭವನದಲ್ಲಿ ತಿ.ತಿ.ದೇ. ಕಾರ್ಯನಿರ್ವಹಣಾಧಿಕಾರಿಗಳು ಧ್ವಜವನ್ನು ಆರೋಹಣಗೈಸುವರು.

ಸರ್ವಂಕಷ ತರಬೇತಿ ವ್ಯವಸ್ಥೆ :

ತಿ. ತಿ. ದೇವಸ್ಥಾನಗಳ ಸಿಬ್ಬಂದಿ ತರಬೇತಿ ಶಾಲೆಯಲ್ಲಿ, ತಿ.ತಿ.ದೇ. ರಕ್ಷಣಾಸಿಬ್ಬಂದಿಗೆ ರಕ್ಷಣೆಯ ವಿಷಯದಲ್ಲಿ ತರಬೇತಿ ನೀಡಲಾಗುತ್ತದೆ. 2001 ರ ನವಂಬರ್ ತಿಂಗಳಿನಿಂದ ಎಲ್ಲ ಸಿಬ್ಬಂದಿಗೂ ತಂಡ ತಂಡಗಳಲ್ಲಿ ತರಬೇತಿ ತರಗತಿಗಳನ್ನು ನಡೆಸಿ ಎಲ್ಲ ಸಿಬ್ಬಂದಿಗೂ ಈ ತರಬೇತಿಯನ್ನು ನೀಡಲಾಗುತ್ತಿದೆ. ಬೇರೆ ಬೇರೆ ರಕ್ಷಣಾ ಇಲಾಖೆಗಳಿಂದ ತಜ್ಞ ತರಬೇತುಗಾರರನ್ನು ಕರೆಸಿ ಈ ಶಿಕ್ಷಣವನ್ನು ಪೂರೈಸಲಾಗುತ್ತಿದೆ. ಕೇಂದ್ರ ಗುಪ್ತಚರ ವಿಭಾಗ, ಪೋಲೀಸು ಟ್ರೈನಿಂಗ್ ಕಾಲೇಜು, ತಿ.ತಿ.ದೇ. ಗಳಲ್ಲಿ ನಿವೃತ್ತರಾದ ರಕ್ಷಣಾಧಿಕಾರಿಗಳು, ಅಗ್ನಿ ಶಾಮಕ ವಿಭಾಗ, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಸಿಬ್ಬಂದಿ ತರಬೇತಿ ಶಾಲೆ - ಮೊದಲಾದ ಸಂಸ್ಥೆಗಳಿಂದ ವಿಶೇಷ ಪರಿಣತಿ ಹೊಂದಿದವರುಗಳು ಬಂದು ಈ ತರಗತಿಗಳನ್ನು ನಿರ್ವಹಿಸಿ ವಿವಿಧ ರೀತಿಯ ಪ್ರಾಯೋಗಿಕೆಗಳಲ್ಲಿ ಅಭಿಪ್ರಾಯಗಳ ಸಮಾಲೋಚನ, ವಿಚಾರ ಸಂಕಿರಣಗಳಲ್ಲಿ ಭಾಗವಹಿಸಿ ನಿರ್ವಹಿಸುವರು. ಇದುವರೆಗೆ ಹಲವು ತಂಡಗಳು ಈ ರೀತಿಯ ತರಬೇತಿ ಪಡೆದಿವೆ.

★★★★★

ಕಾಯುವಸ್ಥರನ್ನು ಕಾಣೆ.

ಸುಕ್ಷೇತ್ರ ಸನ್ನತಿ

-ಪ್ರೊ॥ ವಸಂತ ಕುಷ್ಟಗಿ.

ಕರ್ನಾಟಕ ರಾಜ್ಯದಲ್ಲಿ ಪುರಾಣ ಪ್ರಸಿದ್ಧವಾದ, ಇತಿಹಾಸ ಪ್ರಸಿದ್ಧವಾದ ಸುಕ್ಷೇತ್ರ ಸನ್ನತಿಯು ಕಲಬುರಗಿ ಜಿಲ್ಲೆಯ ಚಿತ್ತಾಪೂರ ತಾಲ್ಲೂಕಿಗೆ ಸೇರಿದ ಗ್ರಾಮ. ಈ ಸನ್ನತಿಯು ಚಿತ್ತಾಪುರದಿಂದ ನೈಋತ್ಯಕ್ಕೆ 48 ಕಿಲೋಮೀಟರ್ ದೂರದಲ್ಲಿದೆ. ಯಾದಗಿರಿಯ ವಾಯುವ್ಯಕ್ಕೆ 56 ಕಿಲೋಮೀಟರ್ ಅಂತರದಲ್ಲಿ ಶಹಾಪೂರದಿಂದ ಉತ್ತರಕ್ಕೆ 19 ಕಿಲೋಮೀಟರ್ ದೂರದಲ್ಲಿದೆ. ಈ ಮೂರೂ ಕಡೆಯಿಂದ ರಸ್ತೆ ಮುಖಾಂತರ ಸಾರಿಗೆ ಸಂಬಂಧವಿದೆ.

ಸನ್ನತಿಗೆ ಹೋಗಲು, ಮುಂಬಯಿ - ಮದ್ರಾಸ್ ಬ್ರಾಡಗೇಜ ಮೇಲೆ ಇರುವ ರೈಲು ನಿಲ್ದಾಣ - ನಾಲವಾರದಿಂದಲೂ ಹೋಗಬಹುದು. ಇಲ್ಲಿಂದ 19 ಕಿಲೋಮೀಟರ್ ಅಂತರ. ಈ ದಾರಿ ಕಷ್ಟಸಾಧ್ಯವೇ ಹೌದು. ಎತ್ತಿನ ಗಾಡಿ ಟಾಂಗಾಗಳಿಂದ ದಾರಿ ಕ್ರಮಿಸಬೇಕು. ಅನೇಕ ಸಂದರ್ಭದಲ್ಲಿ ನಡೆಯುತ್ತಲೇ ಹೋಗಬೇಕಾಗುವುದು. ಬಸ್ಸುಗಳ ಸಾರಿಗೆ ಸಂಪರ್ಕ ಇದ್ದರೂ ಸಾಲದು. ಯಾವ ರೀತಿಯಿಂದಲೇ ಸಾಗಿದರೂ, ರಸ್ತೆಗಳು ಮಾತ್ರ ತೆಗ್ಗು ತೆವರುಗಳಿಂದ ಕೊರಕಲುಗಳಿಂದ ಕೂಡಿರುವುದರಿಂದ ದಾರಿ ಸಾಗುವುದು ಶ್ರಮವೇ ಹೌದು.

ಬಹು ಪುರಾತನ ಇತಿಹಾಸದ ಅವಶೇಷಗಳಿಂದ ತುಂಬಿರುವ ಸನ್ನತಿ ಈಗ ಒಂದು ಗ್ರಾಮ. ಶಹಾಬಾದಿ ಸುಣ್ಣದ ಕಲ್ಲುಗಳ ಚಪ್ಪರದ ಮಾಳಿಗೆಗಳಿಂದ ಕೂಡಿದ ಮನೆಗಳು, ಚಿಕ್ಕ ಚಿಕ್ಕ ಓಣಿಗಳು. ಇನ್ನೂ ಹೆಚ್ಚಿಗೆ ನವನಾಗರಿಕತೆ ಮುಟ್ಟದ ಸ್ವಾಭಾವಿಕ ಜೀವನದ ಗ್ರಾಮ. ಇಲ್ಲಿಯ ಸಾಮಾನ್ಯ ಜನರು ಈ ಗ್ರಾಮವನ್ನು 'ಸೊಂಟಿ' ಎಂದೇ ಕರೆಯುತ್ತಾರೆ. ಆದರೆ ಸನ್ನತಿಯೆಂಬುದೇ ಅದರ ಶುದ್ಧರೂಪ. ಈ ಸನ್ನತಿ ಶಕ್ತಿವಾಚಕ ಶಬ್ದವೂ ಹೌದು. ರಮೆಯ ಒಂಭತ್ತು ಶಕ್ತಿಗಳಲ್ಲಿ ಒಂದು ಈ ಸನ್ನತಿ.

ಸನ್ನತಿ ಹಳೆ ಶಿಲಾಯುಗದ ಅವಶೇಷಗಳನ್ನೂ ಹೊಂದಿದೆ. ಶಾತವಾಹನರ ಕಾಲದ ಬೌದ್ಧಸ್ತೂಪಗಳ ಅವಶೇಷಗಳಿಂದ ಕೂಡಿದೆ. ಇದು ಪ್ರಾಗ್ಯೈತಿಹಾಸ ಹಾಗೂ ಪ್ರಾಚೀನ ಚರಿತ್ರೆಯ ನೆಲೆಯಿಂದಕೂಡಿದೆ. ಇದಕ್ಕೆಲ್ಲ ಪ್ರಮಾಣಗಳನ್ನು ನೋಡಬೇಕಾದರೆ ನಾವು ಕಲಬುರಗಿಯಲ್ಲಿರುವ ರಾಜ್ಯ ವಸ್ತು ಸಂಗ್ರಹಾಲಯವನ್ನು ನೋಡಬೇಕು. ಈ ಸಂಗ್ರಹಾಲಯದಲ್ಲಿರುವ ಸನ್ನತಿಯ ಅವಶೇಷಗಳ ಸಂಖ್ಯೆ ಸುಮಾರು 59 ಕ್ಕೂ ಹೆಚ್ಚಿರಬಹುದು.

ಇವುಗಳಲ್ಲಿ ಸ್ತೂಪದ ಕಟಕಟೆಯ ಕಂಬದ ಮೇಲಿನ ಪುಷ್ಪವಿನ್ಯಾಸ; ನಾಗರ ಹಾವು; ಎತ್ತಿನ ಬಂಡಿ; ಪುಷ್ಪವಿನ್ಯಾಸ; ಪುರುಷ ಶಿಲ್ಪ; ಕುಳಿತ ರಾಜ ದಂಪತಿಗಳು. ಮಗುವನ್ನು ತೊಡೆಯ ಮೇಲೆ ಅಡ್ಡಾಗಿ ಮಲಗಿಸಿಕೊಂಡ ತಾಯಿ ಮಗುವಿನ ಶಿಲ್ಪ; ಇನ್ನೊಂದು ಸ್ತ್ರೀ ಶಿಲ್ಪ; ಜೊತೆಗೆ ಬುದ್ಧನ ಶ್ರೀಪಾದಗಳು ಕೂಡ.

ಈ ಎಲ್ಲ ಅವಶೇಷಗಳು ಸನ್ನತಿಯು ಬೌದ್ಧಧರ್ಮದ ಕೇಂದ್ರವಾಗಿತ್ತು ಎಂಬುದಕ್ಕೆ ವಿಶೇಷ ಬೆಳಕು ಚೆಲ್ಲುತ್ತವೆ. ಇಲ್ಲಿ ಶಾಸನದ ತುಣುಕುಗಳೂ ಸಿಕ್ಕುತ್ತವೆ.

ಗುಡಿಯ ಪೋಳಿಯೊಳಗೆ ಹಿಂದೆ ಭದ್ರವಾಗಿ ತಂದು ಇಟ್ಟಿರುವ ಶಿಲಾಶಾಸನದ ಭಾಗವಿದೆ. ಇದೊಂದು ಅಶೋಕನ ಶಾಸನ. ಬ್ರಾಹ್ಮಿ ಲಿಪಿಯಲ್ಲಿದೆ.

ಸುಕ್ಷೇತ್ರ ಸನ್ನತಿ ನೆಲೆಸಿರುವುದು ಭೀಮಾನದಿಯ ದಂಡೆಯ ಮೇಲೆ. ಈ ನದಿಗೆ ಭೀಮರಥಿಯೆಂತಲೂ ಹೆಸರು. ಭೀಮ ರಥಿಯೆಂಬ ನದಿ ತಂಪು ಎಂದು ಜಾನಪದರೂ ಹಾಡುತ್ತಾರೆ.

ಈ ನದಿಯ ದಂಡೆಯ ಮೇಲೆ ಸೋಮೇಶ್ವರ ದೇವಾಲಯವು ಸುಂದರವಾದ ನೆನಪುಗಳನ್ನು ತುಂಬಿಕೊಂಡು ನಿಂತಿದೆ. ಸೇತುರಾಜನು ಕಾಮುಕನಾಗಿ, ನಾರಾಯಣ ಮುನಿಯ ಪತ್ನಿ ಚಂದ್ರಲೆಯ ಮೇಲೆ ಕೈಮಾಡಲು ಬಂದಾಗ, ಆ ಚಂದ್ರಲೆ ವ್ರತದ ನೆವದಲ್ಲಿ ಇಲ್ಲಿಯೇ ಆ ಅನಿರ್ಧಿಷ್ಟ ಕಾಲವನ್ನು ಕಳೆದದ್ದು. ಕೊನೆಗೆ ಇಲ್ಲಿಯೇ ಸೋಮೇಶ್ವರನಲ್ಲಿ ಲೀನವಾದಳೆಂಬ ಆಖ್ಯಾಯಿಕೆ. ಆದರೆ, ಇದೊಂದು ಪುರಾತನ ಕಾಲದ ಸುಂದರ ಕಟ್ಟಡ. ಸುಂದರವಾದ ಕಂಬಗಳಿವೆ. ಸುಂದರವಾದ ಬಾಗಿಲುವಾಡವಿದೆ. ಮೇಲೆ ಬಣ್ಣ ಬಳಿಯಲಾಗಿದೆ. ಈ ದೇವಾಲಯವು ಸುಮಾರು 10-11 ನೆಯ ಶತಮಾನಕ್ಕೆ ಸೇರಿದ್ದಿರಬಹುದು. ಈ ದೇವಾಲಯದ ಸುತ್ತಮುತ್ತಲೂ ಅನೇಕ ಅವಶೇಷಗಳಿವೆ.

ಈಗ ನಮಗೆ ಜುಳು ಜುಳು ಹರಿಯುತ್ತಿರುವ ಆ ನದಿಯ ದಂಡೆಯ ಮೇಲೆ ಕಾಣುತ್ತಿರುವುದು ಸೇತುರಾಜನ ಕಟ್ಟೆ. ಈ ಕಟ್ಟೆಯ ಸಮೀಪದಲ್ಲಿ ನದಿಯಲ್ಲಿರುವುದೇ ಸೇತುರಾಜನ ಮಡು. ಚಂದ್ರಲೆಯ ಮೇಲೆ ಕೆಟ್ಟ ದೃಷ್ಟಿಯನ್ನು ಇಟ್ಟುಕೊಂಡ ಸೇತುರಾಜನನ್ನು ದುಂಬಿಗಳು ಮುಕ್ಕುರಿದಾಗ, ಈ ಮಡುವಿನಲ್ಲಿ ಹಾರಿ ಆತ ಅಸು ನೀಗಿದನೆಂದು ಪುರಾಣ ಹೇಳುತ್ತದೆ. ಇಲ್ಲಿ ಈಗಲೂ ಮುತ್ತೈದೆಯರು ಸ್ನಾನ ಮಾಡಿ ಮರದ ಬಾಗಿಣ ಕೊಟ್ಟು ಧನ್ಯರಾಗುತ್ತಾರೆ. ಇದೇ ಕಟ್ಟೆಯಿಂದ ನದಿಯ ಆ ಕಡೆ ಕಾಣುವ ದಂಡೆ ಶಿರವಾಳದ ದಂಡೆ. ಅದೂ ಕೂಡ ಇತಿಹಾಸದ ಅವಶೇಷಗಳಿಂದ ಕೂಡಿದ ಗುಡಿಗುಂಡಾರಗಳ ಗ್ರಾಮ. ಆ ಕಡೆ ಹೋಗಲು ಹರಿಗೋಲು ದೋಣಿಗಳು ಸಜ್ಜಾಗಿರುತ್ತವೆ.

ಈ ದೃಶ್ಯದಿಂದ ಸ್ವಲ್ಪ ಮುಂದಕ್ಕೆ ಇರುವುದೇ ರಣಮಂಡಲ. ಇದು ಸನ್ನತಿಯಿಂದ ಒಂದೂವರೆ



ಕಿಲೋಮೀಟರ್ ದೂರದಲ್ಲಿದೆ. ಶ್ರಮಪಟ್ಟು ಅಲ್ಲಿಗೆ ಮುಟ್ಟಬೇಕು. ಇಲ್ಲಿ ಉತ್ಖನನಗೊಂಡ ಹಳೆ ಶಿಲಾಯುಗದ ಹಾಗೂ ಸೂಕ್ಷ್ಮ ಶಿಲಾಯುಗದ ಅವಶೇಷಗಳು ದೊರೆಯುತ್ತವೆ. ಶಾತವಾಹನರ ಕಾಲದ್ದೆಂದು ಹೇಳುವ ಇಟ್ಟಿಗೆಗಳಿಂದ ನಿರ್ಮಾಣವಾದ ಎರಡು ಸುತ್ತಿನ ಕೋಟೆಯ ಅವಶೇಷಗಳನ್ನು ಇಲ್ಲಿ ಕಾಣಬಹುದು. ಅದೇ ರೀತಿ ಅಲ್ಲಿ ರಾಜವಾಡೆಯು ಅವಶೇಷ. ಮತ್ತೆ ಎಂಟು ಹಗೇವುಗಳೂ ಚೌಕಾಕಾರದ ಐದು ಕೋಣೆಗಳ ವಿನ್ಯಾಸಗಳ ಅವಶೇಷಗಳೂ ಅಲ್ಲಿ ಇವೆ. ರೋಮನ್ ಮಡಿಕೆ ಚೂರುಗಳು, ಮೌರ್ಯ ಶಾತವಾಹನರ ಕಾಲದ ಮಡಿಕೆ ಚೂರುಗಳೂ ದೊರೆಯುವುದರಿಂದ ಸನ್ನತಿಯು ರೋಮನ್ ಸಂಪರ್ಕವನ್ನಿಟ್ಟುಕೊಂಡ ವಾಣಿಜ್ಯ ಕೇಂದ್ರವಾಗಿದ್ದಿರಬೇಕು. ಇಂಥ ಕೆಲವು ಅವಶೇಷಗಳನ್ನು ಕಲಬುರಗಿಯ ಪ್ರಾಚ್ಯ ವಸ್ತು ಸಂಗ್ರಹಾಲಯದಲ್ಲಿ ಕಾಣಬಹುದು. ಅಲ್ಲದೆ ಈ ಭಾಗವನ್ನು 'ರಣ ಮಂಡಲ' ಎಂದು ಕರೆದಿರುವುದರಿಂದ ಇಲ್ಲಿಯುದ್ಧವೂ ನಡೆದಿರಬೇಕು.

ಪ್ರಶಾಂತವಾಗಿ ಭೀಮಾ ನದಿ ಹರಿಯುತ್ತಿದೆ. ಭಕ್ತಾದಿಗಳು, ಯಾತ್ರಿಕರು ಸ್ನಾನಮಾಡಿ ಏರಿಹೋಗಲು ಪಾವಟಿಗೆಗಳು. ನದಿಯಲ್ಲಿ ಸ್ನಾನ ಮಾಡುತ್ತ ಮುಳುಗು ಹಾಕುತ್ತ ಮೇಲೆ ನೋಡಿದರೆ ಕಾಣುವುದೇ ಚಂದ್ರಲಾ ಪರಮೇಶ್ವರಿಯ ಚಿತ್ತಾಕರ್ಷಣೀಯ ಮಂದಿರದ ಒಟ್ಟು ಅಂದ. ಗೋಣೆತ್ತಿ ನೋಡಿದಾಗ ಮೊತ್ತ ಮೊದಲಿಗೆ ಕಾಣುವುದೇ ದ್ರಾವಿಡ ಶೈಲಿಯ ಭವ್ಯ ಅರ್ವಾಚಿನ ಗೋಪುರ. ಇದನ್ನು ದೇವಿಯ ಭಕ್ತರಾದ ವಿಜಾಪುರದ ಅಣ್ಣಾಸಾಹೇಬ ದೇಶಪಾಂಡೆಯವರು 1990 ರಲ್ಲಿ ಸೇವಾ ರೂಪದಲ್ಲಿ ಕಟ್ಟಿಸಿದರೆಂದು ತಿಳಿಸಿದೆ.

ಈ ಗೋಪುರವನ್ನು ನೋಡುತ್ತ ಕಣ್ಣಿಗೆ ಆನಂದವನ್ನು ಹೊಂದುತ್ತ ಮಹಾದ್ವಾರದ ಬಳಿ ಬಂದು ನಿಂತರೆ, ಎದುರಿನ ಬನ್ನಿ ಗಿಡದ ಕೆಳಗೆ ದೊಡ್ಡ ಶಿಲಾಫಲಕದ ಮೇಲೆ ಸಿಂಹಾಸನವಿದೆ. ಅಲ್ಲಿ ಕಮಲದ ಮೇಲೆ ಬುದ್ಧನ ಪಾದಗಳಿವೆ. ಹಿಂದುಗಡೆ ಬೋಧಿವೃಕ್ಷವಿದೆ. ಇಂಥ ಅವಶೇಷಗಳು ತುಂಬ ಇವೆ - ಎಂದು ಮೊದಲಗೆ ಪತ್ತೆ ಹಚ್ಚಿದವರು, ದಿವಂಗತ ಕಪಟರಾಳ ಕೃಷ್ಣರಾಯರು. ಇದರಿಂದಾಗಿ ಈ ಸ್ಥಳವು ಕ್ರಿ.ಶ. ನಾಲ್ಕನೆಯ ಶತಮಾನದಲ್ಲಿ ಮಹಾಯಾನ ಪಂಥದ ಬೌದ್ಧರ ಪವಿತ್ರ ಕ್ಷೇತ್ರವಾಗಿತ್ತೆಂದು ಅವರು ನಿರ್ಣಯಿಸಿದ್ದಾರೆ. ಇಲ್ಲಿಯೇ ಪಕ್ಕದಲ್ಲಿ ವೀರಗಲ್ಲುಗಳೂ ಕಾಣುತ್ತವೆ.

ಮಹಾದ್ವಾರದ ಬಾಗಿಲಿನ ಮೇಲೆ ಒಬ್ಬ ಸ್ತ್ರೀಯ ತಲೆಯ ಮೇಲೆ ತ್ರಿಕೋಣಾಕಾರದ ಪಟ್ಟಿಯನ್ನು ಇಟ್ಟುಕೊಂಡಂತೆ ಕಾಣುವ ಚಿತ್ರವಿದೆ. ಇದು ಮಹಂಜೋದಾರದಲ್ಲಿಯ ಚಿತ್ರವನ್ನು ನೆನಪಿಗೆ ಕೊಡುತ್ತದೆಂದು ಕಪಟರಾಳರು ಉಲ್ಲೇಖಿಸಿದ್ದಾರೆ.

ಚಂದ್ರಲಾ ಪರಮೇಶ್ವರಿಯ ದೇವಾಲಯವು ಪೂರ್ವಾಭಿಮುಖವಾಗಿದ್ದು ಒಳಗೆ ಪ್ರವೇಶಿಸಿದಾಗ ದೀಪಸ್ತಂಭಗಳು ಕಣ್ಣನ್ನು ಸೆಳೆಯುತ್ತವೆ. ಗರ್ಭಗೃಹ, ತೆರೆದ ಅಂತರಾಳ ಹಾಗೂ ನವರಂಗಗಳು ಅತ್ಯಂತ ಮನೋಹರವಾಗಿವೆ. ವಿಶಾಲವಾದ ಸಭಾ ಮಂಟಪವೂ ಇದೆ. ಸುಮಾರು ಎರಡು ಸಾವಿರ ಜನ ಸೇರುವ ಅವಕಾಶ. ದೇವಿಯ ಬಲಭಾಗಕ್ಕೆ ವಿಶಾಲವಾದ ಪೌಳಿ ಆರಂಭವಾಗಿ ಕಂಬಗಳಿಂದ ಆಕರ್ಷಿಸುತ್ತದೆ. ಎಡಗಡೆಗೂ ಕಂಬಗಳಿರುವ ಅಂಕಣಗಳ ಸಾಲು. ಕೆಲವು ಅಂಕಣಗಳನ್ನು ಗೋಡೆಗಳಿಂದ ಮುಚ್ಚಿ ಕೋಣೆಗಳನ್ನು ಮಾಡಿಕೊಂಡು ಕಾರ್ಯಾಲಯ ಮುಂತಾದವುಗಳನ್ನು ಈಗ ಮಾಡಿಕೊಂಡಿದ್ದಾರೆ. ಇಲ್ಲಿಯ ಕಂಬಗಳಲ್ಲಿ ಗೋಡೆಗಳಲ್ಲಿ ಕೆಲವು ಶಾಸನದ ತುಣುಕುಗಳನ್ನೂ ಕಾಣಬಹುದು. ಉತ್ಸವಗಳಲ್ಲಿ ಯಾತ್ರಿಕರು ಒಂದೊಂದು ಅಂಕಣದಲ್ಲಿ ಇಳಿದುಕೊಳ್ಳುತ್ತಾರೆ. ದೇವಾಲಯದ ಹಿಂದುಗಡೆ ಬಂದು ನೋಡಿದರೆ, ದೇವಾಲಯದ ಕಟ್ಟಡದ ವಿನ್ಯಾಸವು ನಯನ ಮನೋಹರವಾಗಿ ಕಾಣುತ್ತದೆ. ಈ ಗೋಪುರವು ಶ್ರೀ ಚಕ್ರಾಕಾರವಾಗಿದೆ. ಶ್ರೀ ಎಂದರೆ ಶಂ ರೂಪ. ಶಂ ಎಂದರೆ ಚಂದ್ರಾ ಎಂದೂ ಅರ್ಥವಾಗುತ್ತದೆ. ಪ್ರವೇಶದ್ವಾರವನ್ನು ದಾಟಿ ಒಳಗೆ ಬಂದಾಗಲೂ ಅಲ್ಲಿ ಎಡಕಟ್ಟೆಯ ಮೇಲೆ ಮೇರು ಪ್ರಸ್ತಾರದ ಶ್ರೀ ಚಕ್ರವನ್ನು ನೋಡುತ್ತೇವೆ. ಶ್ರೀ ಚಕ್ರದ ಕೆಳಭಾಗದಲ್ಲಿ ಮೂರು ಚೌಕದ ಸ್ತರಗಳು ಇರುತ್ತವೆ. ಅವುಗಳ ಮೇಲೆ ಮೂರು ವರ್ತುಲಗಳಿರುತ್ತವೆ. ಅವುಗಳ ಮೇಲೆ ಎರಡರಲ್ಲಿ 16 ಮತ್ತು 8 ಹೂವಿನ ದಳಗಳಿದ್ದು ಮೇಲಿರುವ ಮೂರನೆಯ ವರ್ತುಳದ ಮೇಲ್ಭಾಗದಲ್ಲಿ ಶ್ರೀಚಕ್ರದ ಚಿಹ್ನೆ ಇದೆ. ಗರ್ಭಗುಡಿಯ ಮೇಲಿರುವ ಶಿಖರವೂ ಶ್ರೀಚಕ್ರಾಕರದ್ದೇ. ಅಲ್ಲಿರುವ ಕಂಬಗಳಲ್ಲಿಯೂ ಶ್ರೀಚಕ್ರವನ್ನು ಕಾಣಬಹುದು. ದೇವಾಲಯದ ಗರ್ಭಗೃಹವೂ ಶ್ರೀಚಕ್ರದ ತಳ ವಿನ್ಯಾಸದಲ್ಲಿಯೇ ಇದೆ. ಇಲ್ಲಿ ಸರ್ಪ, ಮಹಾಕಾಳಿ, ಸರಸ್ವತಿಯರ ಕೆತ್ತನೆಯುಳ್ಳ ಪ್ರಭಾವಳಿ ಇದೆ. ಅಲ್ಲದೆ ಧ್ವಜ, ಶಂಖ, ಚಕ್ರಗಳಿವೆ.

ಗರ್ಭಗುಡಿಯಲ್ಲಿ ಹೋದಕೂಡಲೇ ದೇವಿಯ ಎರಡು ಪಾದಗಳು ಕಾಣುತ್ತವೆ. ಸುಮಾರು 46 ಸೆ.ಮೀ. ಉದ್ದ. ಅವುಗಳಲ್ಲಿ ಬಲಪಾದದ ಮೇಲೆ ಮೂರು ರಂಧ್ರ, ಎಡ ಪಾದದ ಮೇಲೆ ಎರಡು ರಂಧ್ರಗಳಿವೆ. ಈ ಐದು ರಂಧ್ರಗಳಲ್ಲಿ ಬಿದ್ದ ನೀರು ಮತ್ತೆ ಭೀಮಾ ನದಿಯಲ್ಲಿ ಸೇತುರಾಜನ ಮಡು ಸೇರುತ್ತದೆಯೆಂದು ಪ್ರತೀತಿ. ಈ ಪಾದುಕೆಗಳ ಹಿಂದೆ ಶ್ರೀಚಕ್ರ ಕಾಣುತ್ತದೆ. ಈ ಶ್ರೀಚಕ್ರದ

ವೃಕ್ಷೋ ರಕ್ಷತಿ ರಕ್ಷಿತಃ

ಹಸಿರಿನಿಂದಲೆ ನೀರು
ಹಸಿರಿನಿಂದಲೆ ಬೆಳೆಯು
ಹಸಿರಿನಿಂದಲೆ ಉಸಿರು
ಹಸಿರಿನಿಂದಲೆ ಜಗವು
ಹಸಿರಿನಿಂದಲೆ ಜೀವ

ಮನುಜತೆಯಲಿ ನೀ ನೋಡು ಮಹಮಾಯೆ.

ಒಂದು ಕಡೆ ಪ್ರಾಚೀನ ಶಿಲ್ಪದಲ್ಲಿ ಮಹಿಷಾಸುರ ಮರ್ದಿನಿಯ ಮೂರ್ತಿ, ಮತ್ತೊಂದು ಕಡೆ ಚಂದ್ರಲಾಪರಮೇಶ್ವರಿಯ ಮಗ್ಗುಲುಗಳೂ ಕಾಣದ ಅರ್ಧನಾರೀ ಮೂರ್ತಿ ಶಿಲ್ಪವಿದೆ. ಈ ದೇವಾಲಯದ ಮುಖ್ಯ ಆರಾಧ್ಯ ದೇವತೆ ಈಕೆ - ಚಂದ್ರಲಾಂಬೆ.

ಈ ದೇವಸ್ಥಾನವಿರುವ ಪ್ರದೇಶವು ಬೌದ್ಧರಕಾಲದಲ್ಲಿ ಬೌದ್ಧರ ಸ್ಥಾನವಾಗಿಯೂ, ಶೈವ ಶಾಕ್ತರ ಕಾಲದಲ್ಲಿ ಪಾರ್ವತಿ ಮಹಾಕಾಳಿಯರ ಸ್ಥಾನವಾಗಿಯೂ ವೈಷ್ಣವರಿಗೆ ಶ್ರೀರಮಾ, ಸರಸ್ವತಿಯ ಸ್ಥಾನವಾಗಿಯೂ ಪ್ರೇರಣೆ ನೀಡಿದೆ. ಲಲಿತಾ ಸಹಸ್ರನಾಮಕ್ಕೆ ಪ್ರಸಿದ್ಧ ತಾಂತ್ರಿಕ ಆಚಾರ್ಯನಾದ ಭಾಸ್ಕರರಾಯನು ವ್ಯಾಖ್ಯಾನ ಬರೆದು ಚಂದ್ರಲಾ ಪರಮೇಶ್ವರಿಯನ್ನು ಮುಕ್ತ ಕಂಠದಿಂದ ಹೊಗಳಿದ್ದಾನೆ.

ಈ ದೇವತೆ ಚಾಳುಕ್ಯರಿಗೂ, ರಾಷ್ಟ್ರಕೂಟರಿಗೂ ಕುಲದೇವತೆಯೂ ಆಗಿದ್ದಳು. ಆ ರಾಜರ ಕಾಲದ ಶಿಲ್ಪ ಕಲೆಯ ವಿನ್ಯಾಸವನ್ನು ಇಲ್ಲಿ ಅಲ್ಲಲ್ಲಿ ಕಾಣಬಹುದು.

ಈ ದೇವಾಲಯದಲ್ಲಿ ಸದಾ ಕಾಲ ಕುಂಕುಮಾರ್ಚನೆ ಪೂಜೆಗಳು ನಡೆಯುತ್ತವೆ. ಅಷ್ಟೋತ್ತರ, ಮಂಗಳಾರತಿ ನಡೆಯುತ್ತವೆ. ಸುಂದರವಾದ ಪ್ರಭಾವಳಿಯ ಹಿನ್ನೆಲೆಯಲ್ಲಿ ತೊಟ್ಟಿಲು ಸೇವೆಯೂ ನಡೆಯುತ್ತದೆ. ಭಯ ಭಕ್ತಿಗಳಿಂದ ಭಕ್ತಾದಿಗಳು ಪೂಜೆಗಳಿಂದ ಪ್ರಭಾವಿತರಾಗುತ್ತಾರೆ.

ಸಂಕ್ರಮಣದಲ್ಲಿ ತೀರ್ಥಸ್ನಾನ ಶ್ರಾವಣಮಾಸದಲ್ಲಿ ಕುಂಕುಮಾರ್ಚನೆ, ನವರಾತ್ರಿಯಲ್ಲಿ ದೀಪೋತ್ಸವಗಳು ಮಹತ್ವದ ಪರ್ವಕಾಲಗಳು. ಪ್ರತಿವರ್ಷ ಚಂದ್ರಲಾ ಪರಮೇಶ್ವರಿಯ ಜಾತ್ರೆಯು ಚೈತ್ರ ಬಹುಳ ಪಂಚಮಿಯಂದು ನಡೆಯುತ್ತದೆ. ಆಗ ದೇವಿಯು ರಥೋತ್ಸವವೂ ನಡೆಯುತ್ತದೆ. ಸುಂದರವಾದ ರಥವು ಇಲ್ಲಿ ವಿಜೃಂಭಿಸುತ್ತದೆ. ಶ್ರಾವಣ ಮಾಸದಲ್ಲಿ ಒಂಬತ್ತು ದಿನ ಉತ್ಸವ ನಡೆಯುತ್ತದೆ. ಈ ಸಂದರ್ಭಗಳಲ್ಲೆಲ್ಲ ಒಂದೊಂದು ದಿವಸ ಒಂದೊಂದು ವಾಹನೋತ್ಸವ ನಡೆಯುತ್ತದೆ. ಭಕ್ತಾದಿಗಳು ಭಜನೆ, ಕೀರ್ತನೆ ನರ್ತನಗಳಿಂದ ಭಕ್ತಿಯನ್ನು ಮೆರೆಯುತ್ತಾರೆ.

ಚಂದ್ರಲಾ ಪರಮೇಶ್ವರಿಯ ಪಕ್ಕದಲ್ಲಿರುವುದೇ ಕಾಳಿಕಾದೇವಿಯ ಗುಡಿ. ಇದೂ ಕೂಡ ಪೂರ್ವಾಭಿಮುಖವಾಗಿದೆ. ಇಲ್ಲಿರುವ ಮಹಾಕಾಳಿ ಮೂರ್ತಿ ಅತ್ಯಂತ ಪ್ರಭಾವಿಯಾದದ್ದು. ಪದ್ಮಪೀಠದ ಮೇಲೆ ದೇವಿ ವಿರಾಜಮಾನಳಾಗಿದ್ದು ಎಡಗೈಯಲ್ಲಿ ತ್ರಿಶೂಲ. ಅದರ ತುದಿ ದೈತ್ಯನ ಬೆನ್ನಲ್ಲಿ ನಟ್ಟು ಹೊರಬಂದಿದೆ. ದೈತ್ಯನು ಅಸಹಾಯಕನಾಗಿ ನೋಡುಗರಿಗೆ ಕಾಣುತ್ತಾನೆ. ಕೆಳ ಎಡಗೈಯಲ್ಲಿ ಪಾನಪಾತ್ರೆ ಇದೆ. ಕಂಠದಲ್ಲಿ ಏಕಾವಳಿ ಹಾಗೂ ಜನಿವಾರದಂತೆ ರುಂಡಮಾಲೆ. ಎದೆಯ ಮೇಲೆ ಚೇಳಿನ ಆಭರಣ, ಜಡೆ ಹಾವಿನಿಂದ ಕಟ್ಟಿದ್ದು. ನಾಗ ಮುರಿಗೆ, ಬಳೆಗಳಿವೆ. ಚೆನ್ನಾಗಿ ಸೀರೆ ಉಟ್ಟುಕೊಂಡಿದ್ದಾಳೆ ಈ ದೇವಿ. ಈ ದೇವಿಯ ವಿಗ್ರಹದ ಬಾಯಿ, ಕಣ್ಣು, ಹಣೆಗಳು ಸ್ಪಷ್ಟವಾಗಿ ಗೋಚರವಾಗುತ್ತವೆ. ಕೆಂಪು ಕುಂಕುಮ ಹಚ್ಚಿರುವುದರಿಂದ ದೇವಿಯನ್ನು ನೋಡಲು ಹಿರಿಯರಿಗೂ ಭಯವಾಗುತ್ತದೆ. ಈ ದೇವಾಲಯದ ಎಡಬಲಕ್ಕೆ ಶಿಲಾಬಾಲಕಿಯರು ಸ್ವಾಗತಿಸುತ್ತಾರೆ.

ಈ ದೇವತೆಗೂ ಕುಂಕುಮಾರ್ಚನೆ ಮಂಗಳಾರತಿ ಪೂಜೆ ಪುನಸ್ಕಾರ ನಡೆಯುತ್ತವೆ. ಭಕ್ತಾದಿಗಳು ಭಯ ಭಕ್ತಿಯಿಂದ ನಮನಗಳನ್ನು ಹರಕೆಗಳನ್ನು ಅರ್ಪಿಸುತ್ತಾರೆ.

ಚಂದ್ರಲಾ ಪರಮೇಶ್ವರಿಯ ದೇವಾಲಯ ಟ್ರಸ್ಟಿನವರು ಬಂದ ಭಕ್ತಾದಿಗಳಿಗೆ ಯಾತ್ರಿಕರಿಗೆ ಅಚ್ಚುಕಟ್ಟಾದ ಊಟದ ವ್ಯವಸ್ಥೆಯನ್ನೂ ಮಾಡಿದ್ದಾರೆ. ಹೀಗಾಗಿ ಭೀಮಾನದಿಯ ಸ್ನಾನ, ದೇವಿಯ ದರ್ಶನ ಹಾಗೂ ತೀರ್ಥ ಪ್ರಸಾದಗಳಿಂದ ಸುಕ್ಷೇತ್ರ ಸನ್ನತಿಯ ಯಾತ್ರೆ ಪ್ರಸನ್ನವಾಗಿರುತ್ತದೆ.

★★★★★

(14ನೇ ಪುಟದಿಂದ)

ಪ್ರಸನ್ನ ವೆಂಕಟೇಶದಾಸರು ಉಡುಪಿ ಶ್ರೀಕೃಷ್ಣನ ದರ್ಶನ ಪಡೆಯಲು ಅಪೇಕ್ಷಿಸಿದಾಗ ಅವರಿಗೆ ತುಳಸಿಗಿರೀಶನಲ್ಲಿ ಕೃಷ್ಣಕಂಡನೆಂದು ಪ್ರತೀತಿ ಇದೆ.

6. ಗೋವಿನದಿನ್ನೇಶ :

ಕೃಷ್ಣಾನದಿಯ ದಂಡೆಯ ಕೊಲ್ಹಾರ - ಕೊರ್ತಿ ಗ್ರಾಮಗಳಿಂದ ಪೂರ್ವ ದಿಕ್ಕಿನಲ್ಲಿರುವ ಗೋವಿನದಿನ್ನಿ ಗ್ರಾಮದಲ್ಲಿ ಹನುಮಂತ ದೇವರ ಜಾಗೃತ ದೇವಸ್ಥಾನವಿದೆ.

ಈ ಗೋವಿನದಿನ್ನೇಶನ ಅನೇಕ ಭಕ್ತಾದಿಗಳು ಆರಾಧ್ಯದೇವನನ್ನು ಆರಾಧಿಸಿ ತಮ್ಮ ಮನೋರಥ ಪೂರ್ಣಗೊಳಿಸಿಕೊಳ್ಳುವರು. ಚೈತ್ರ ಮಾಸದ ಪ್ರತಿಪದೆಯಿಂದ ಜಯಂತಿವರೆಗೆ ಹದಿನೈದು ದಿನಗಳ ಕಾಲ ಇಲ್ಲಿ ಉತ್ಸವ ಅತ್ಯಂತ ಭಕ್ತಿ ಪುರಸ್ಸರವಾಗಿ ನಡೆಯುತ್ತದೆ.

7. ಹಲಗಣೇಶ :

ವಿಜಾಪುರದಿಂದ 25 ಕಿ.ಮೀ. ಉತ್ತರದಲ್ಲಿರುವ ಹಲಗಣ ಗ್ರಾಮದಲ್ಲಿಯ ಶ್ರೀ ಮಾರುತಿ ಮಂದಿರ ಜಾಗೃತ ದೇವಾಲಯವಾಗಿದೆ. ಪ್ರಾಚೀನ ಕಾಲದಲ್ಲಿ ಈ ದೇವಸ್ಥಾನವನ್ನು ಪ್ರತಿಷ್ಠಾಪಿಸಲಾಗಿದೆ ಎಂದು ಹೇಳಲಾಗುತ್ತಿದೆ.

ಅಗಸ್ತ್ಯ ಋಷಿ ಈ ಜಾಗೆಯಲ್ಲಿ ಯಜ್ಞಯಾಗಾದಿ ಮಾಡಿ ಜನಮೇಜಯನನ್ನು ಕಾರಣವೆಂದು ಗುರುತಿಸಿದ್ದರಿಂದ ಭೂಮಿಯಿಂದಲೆ ಸ್ವಯಂಭೂ ಮೂರ್ತಿ ಉದ್ಭವವಾಯಿತೆಂದು ಪ್ರತೀತಿ ಇದೆ.

ಈ ಮೂರ್ತಿಯ ವೈಶಿಷ್ಟ್ಯವೆಂದರೆ ಅದರ ದೃಷ್ಟಿ ದಕ್ಷಿಣದ ಕಡೆಗಿದ್ದರೆ ಮಾರುತಿ ಉತ್ತರ ದಿಕ್ಕಿನಡೆಗೆ ನೋಡುತ್ತಿರುವಂತೆ ಕಾಣುತ್ತದೆ. ಪ್ರತಿ ಶನಿವಾರ ಹಾಗೂ ಅಮಾವಾಸ್ಯೆಯಂದು ಹಲಗಣೇಶನ ದರ್ಶನ ಪಡೆದುಕೊಳ್ಳುವ ಭಾವುಕ ಭಕ್ತರು ಸಾಗರೋಪಾದಿಯಲ್ಲಿ ಆಗಮಿಸುತ್ತಾರೆ. ಹನುಮ ಜಯಂತಿಯನ್ನು ಈ ಕ್ಷೇತ್ರದಲ್ಲಿ ಉತ್ಸಾಹದಿಂದ ಆಚರಿಸಲಾಗುತ್ತದೆ.

★★★★★

ತಿರುಮಲೆಯ ಸ್ವಾಮಿಗೆ "ಗೋಸೇವಾ ನಿಧಿ"

ತಿರುಮಲ ತಿರುಪತಿ ದೇವಸ್ಥಾನದವರ ಶ್ರೀ ವೆಂಕಟೇಶ್ವರ ಡೈರಿ ಫಾರಂ ಅಭಿವೃದ್ಧಿ ಹೊಂದುತ್ತಿರುವ ಸಂಸ್ಥೆ, ತಿರುಮಲೆಯ ಸ್ವಾಮಿಯ ನಿತ್ಯಸೇವೆಗಳಿಗೆ ನಿತ್ಯಾನ್ನದಾನಕ್ಕೆ ವಿಕಲಾಂಗ ಸೇವಾ ಶಿಬಿರಗಳಿಗೆ ಮತ್ತೂ ತಿ.ತಿ.ದೇ. ಆಡಳಿತದ ಆಲಯಗಳಿಗೆ ನಿತ್ಯವೂ ಅವಸರವಾಗುವ ಹಾಲು ಹೊಸರು ತುಪ್ಪಗಳನ್ನು ಒದಗಿಸುತ್ತಿದೆ.

ಈ ಡೈರಿ ಫಾರಮ್ಮಿನಲ್ಲಿ - ಪಶುಸಂಗೋಪನಶಾಲೆಯಲ್ಲ = ಸುಮಾರು 500 ಹಸುಗಳು ಮತ್ತು ಸ್ವಾಮಿಗೆ ಸೇರಿದ ಕುದುರೆಗಳು, ಆನೆಗಳು, ಪುನುಗು ಬೆಕ್ಕು, ನಂದಿವಾಹನಗಳು ಮೊದಲಾದವೆಲ್ಲ ಡಾ॥ ಪಿ. ಕೊಂಡಾರೆಡ್ಡಿ ಅವರ ಪರ್ಯವೇಕ್ಷಣೆಯಲ್ಲಿ ನಿಪುಣರಾದ ವೈದ್ಯರುಗಳ ನಿರಂತರ ಕೃಷಿಯಿಂದ ಪೋಷಿಸಲ್ಪಡುತ್ತಿವೆ.

ಸ್ವಾಮಿ ಸೇವೆಯಲ್ಲಿ ಗೋಕ್ಷೀರದ ಅಗತ್ಯವನ್ನು ಗುರುತಿಸುತ್ತ ಅನೇಕ ಮಂದಿ ಭಕ್ತರು ಅನಾದಿ ಕಾಲದಿಂದಲೂ ಗೋದಾನವನ್ನು ಮಾಡುತ್ತಿದ್ದಾರೆ. ಮುಖ್ಯವಾಗಿ ಈಚಿನ ಕಾಲದಲ್ಲಿ ಶ್ರೀ ವೆಂಕಟೇಶ್ವರ ಭಕ್ತ ಸಮಾಜದಂತಹವರ ಮೂಲಕ ಹಲವು ಲಕ್ಷ ರೂಪಾಯಿಗಳು ಈ ಕಾರ್ಯಕ್ಕಾಗಿ ಸೇರಿ ಬಂದಿವೆ. ಈಗ ಆಸ್ಟ್ರೇಲಿಯಾದಿಂದಲೂ ಪ್ರತ್ಯೇಕವಾಗಿ ಪುಷ್ಟಿಯಿಂದ ಬೆಳೆದ ಹಸುಗಳನ್ನು ತರಿಸಲಾಗುತ್ತಿದೆ.

ಮುಖ್ಯವಾಗಿ ಗೋಶಾಲೆಯ ಮೂಲಕ ಮತ್ತಷ್ಟು ಹಸುಗಳನ್ನು ಸೇರಿಸಿ ಸ್ವಾಮಿಯ ನಿತ್ಯಸೇವೆಗಳಲ್ಲಿ ಕ್ಷೀರಸಮೃದ್ಧಿಯಿರುವಂತೆ ನೋಡಿಕೊಳ್ಳಲು ತಿ.ತಿ.ದೇ. ವತಿಯಿಂದ ಶ್ರೀ ವೆಂಕಟೇಶ್ವರ ಗೋಸಂರಕ್ಷಣ ಟ್ರಸ್ಟ್ ಏರ್ಪಾಡಾಗಿದೆ.

ಗೋಮಾತೆಯ ಸೇವೆ ಭಾರತೀಯರಿಗೆ ಪವಿತ್ರತಮವಾದ ಕರ್ತವ್ಯ. ಗೋಮಾತೆಯ ತ್ಯಾಗ ನಿರತಿ, ಪವಿತ್ರಗಳನ್ನು ಸ್ತುತಿಸಲು ಆದಿಶೇಷನಿಗೂ ಅಸದಳವೆಂಬುದು ಸರಿ. ಅಂತಹ ಗೋವು ಸ್ವಾಮಿಯನ್ನು ಸೇವಿಸಲು ಗೋಶಾಲೆಗೆ ಬರುವುದಾದರೆ, ಬಂದರೆ, ಅವನ್ನು ಪವಿತ್ರವಾಗಿ ಪೂಜ್ಯವಾಗಿ ಪರಿರಕ್ಷಿಸಿ ಪೋಷಿಸುವುದು ನಮ್ಮ ಧರ್ಮವೂ ಆಗಿದೆ.

ಶ್ರೀ ವಾಡ್ರೇವು ಗವರ್‍ರಾಜು ಅವರು ಶ್ರೀ ವೆಂಕಟೇಶ್ವರ ಭಕ್ತಸಮಾಜದ ಮೂಲಕ ಇದುವರೆಗೆ ಬ್ಯಾಂಕ್ ಡ್ರಾಫ್ಟ್‌ಗಳ ಮೂಲಕವೇ ಗೋಸೇವೆ ಸಲ್ಲಿಸಿದಂತೆಯೇ ಬರುವ ಆಗಸ್ಟ್ 31 ರಂದು ಶ್ರೀಕೃಷ್ಣ ಜನ್ಮಾಷ್ಟಮಿ ದಿನದಂದು ತಿ. ತಿ. ದೇವಸ್ಥಾನಗಳ ಸಹಕಾರದಿಂದ 'ಕಾಮಧೇನು ಮಹಾಯಜ್ಞವನ್ನು' ನಿರ್ವಹಿಸಿ ಶ್ರೀ ವೆಂಕಟೇಶ್ವರ ಗೋಸಂರಕ್ಷಣ ನಿಧಿಗೆ ಒಂದು ಕೋಟಿ ರೂಪಾಯಿಗಳ ನಿಧಿಯನ್ನು ಸಮರ್ಪಿಸಲಿದ್ದಾರೆ.

ಇಂತಹ ಮಹತ್ತರ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಕಂಚಿ ಕಾಮಕೋಟಿ ಪೀಠಾಧಿಪತಿಗಳು ಶ್ರೀ ಶ್ರೀ ಶಂಕರ ವಿಜಯೇಂದ್ರ ಸರಸ್ವತೀ ಸ್ವಾಮಿಜೀ ಅವರು ಬರಲಿದ್ದಾರೆ. ತಿ.ತಿ.ದೇ. ಪೂರ್ವ ಕಾರ್ಯನಿರ್ವಹಣಾಧಿಕಾರಿಗಳಾದ ಶ್ರೀ ಪಿ. ವಿ. ಆರ್. ಕೆ. ಪ್ರಸಾದ್, ಡಾ॥ ಐ. ವಿ. ಸುಬ್ಬಾರಾವ್ ಅವರು ಸಹ ಭಾಗವಹಿಸಲಿದ್ದಾರೆ.

ಇದರೊಡನೆಯೇ ಶ್ರೀ ವೆಂಕಟೇಶ್ವರ ಭಕ್ತಿ ಪ್ರಚಾರ ಪೀಠದ ಪ್ರತ್ಯೇಕ ಕಾರ್ಯಕ್ರಮಗಳಾಗಿ ಆಗಸ್ಟ್ - 30 ಹಾಗೂ ಸೆಪ್ಟಂಬರ 1 ರಂದು ಗಣಪತಿಹೋಮ, ಶ್ರೀನಿವಾಸ ಐಶ್ವರ್ಯ ಲಕ್ಷ್ಮಿಹೋಮ, ಶ್ರೀ ವೆಂಕಟೇಶ್ವರ ಲಕ್ಷನಾಮಾರ್ಚನ, ಆಯುಷ್‌ಹೋಮ, ಶ್ರೀ ವೆಂಕಟೇಶ್ವರ ಲಿಖಿತನಾಮ ಜಪ ಸಮರ್ಪಣ, ಅನ್ನಮಯ್ಯ ಆರಾಧನೋತ್ಸವಗಳು ನಡೆಯುತ್ತವೆ.

ತಿರುಮಲೆ ಸ್ವಾಮಿಯ ಗೋಸೇವಾನಿಧಿಯ ವಂತಿಗೆಗಳನ್ನು ನೀಡಬಯಸುವ ಭಕ್ತರು ಕೇವಲ ಬ್ಯಾಂಕ್ ಡ್ರಾಫ್ಟ್‌ಗಳ ಮೂಲಕ ಮಾತ್ರವೇ ಸಾವಿರ ಹಾಗೂ ಅದರ ಗುಣಕಗಳಲ್ಲಿ ವಂತಿಗೆಗಳನ್ನು ನಿರ್ದೇಶಕರು, ಎಸ್.ವಿ.ಡೈರಿಫಾರಂ, ತಿ.ತಿ.ದೇ., ತಿರುಪತಿ ಇವರಿಗಾಗಲೀ ಶ್ರೀ ವೆಂಕಟೇಶ್ವರ **ಭಕ್ತಿಪ್ರಚಾರ ಪೀಠ 2-1108/1/1 ಶಿವಂ ರಸ್ತೆ, ನ್ಯೂ ನಲ್ಲಕುಂಟ, ಹೈದರಾಬಾದ್** (ದೂರವಾಣಿ - 7550846) ಇವರಿಗಾಗಲೀ **2002 ರ ಆಗಸ್ಟ್ 14 ರ ಒಳಗೆ ಕಳುಹಿಸಬೇಕು.** ತಮ್ಮ ಹೆಸರು, ಗೋತ್ರ, ಪೂರ್ತಿ ವಿಳಾಸ - ಫೋನ್ ನಂಬರು ಮೊದಲಾದವನ್ನೂ ಜೊತೆಗೇ ಕಳುಹಿಸಬೇಕು. ಅಂತಹವರಿಗೆ ಕಾರ್ಯಕ್ರಮದ ಆಹ್ವಾನ ಪತ್ರ ಅನುಮತಿ ಪತ್ರ, ಮೊದಲಾದವನ್ನು ಕಳುಹಿಸಲಾಗುತ್ತದೆ. ನಗದು ವಂತಿಗೆಗಳನ್ನು ಸ್ವೀಕರಿಸಲಾಗುವುದಿಲ್ಲ. ಐದು ಸಾವಿರ ರೂಪಾಯಿಗಳಿಗಿಂತ ಹೆಚ್ಚಿನ ದಾನಗಳಿಗೆ ಪ್ರತ್ಯೇಕ ಸತ್ಕಾರವುಂಟು.

ಶ್ರೀ ವೆಂಕಟೇಶ್ವರ ಗೋಸೇವಾ ಟ್ರಸ್ಟ್‌ಗೆ ನೀಡುವ ದಾನಗಳೆಲ್ಲ ಸೆಕ್ಷನ್ 80 (G) ಪ್ರಕಾರ ಆದಾಯಕರ ಮುಕ್ತವಾಗುತ್ತವೆ.

ಕೀರ್ತಿಶೇಷರಾದ ತಮ್ಮ ಹಿರಿಯರ, ಕಿರಿಯರ ಹೆಸರಿನಲ್ಲಿಯೂ ದಾನಿಗಳು ವಂತಿಗೆಗಳನ್ನು ಸಲ್ಲಿಸಬಹುದಾಗಿದೆ.

ಗೋದಾನವನ್ನು ಸ್ವೀಕರಿಸುವವನು ಶ್ರೀನಿವಾಸ, ನೀಡುವವನು ಭಕ್ತ. ಇಂತಹ ದೊಡ್ಡ ಅದೃಷ್ಟ ಇಂದಿನ ಮಾನವರಿಗೆ ದೊರೆಯುವುದೇ ಒಂದು ವಿಶೇಷ.

ತಿರುಪತಿಗೆ ಬರುವ ಸ್ವಾಮಿಯ ಭಕ್ತರೆಲ್ಲ ಸ್ವಾಮಿಯ ಗೋಶಾಲೆಯನ್ನು ತಪ್ಪದೆ ಸಂದರ್ಶಿಸಿ. ಗೋಮಾತೆಯ ದರ್ಶನದಿಂದ ಸಂತೃಪ್ತಿ ಪಡೆಯಿರಿ - ಎಂದು ವಿನಂತಿ.

ತಿರುಮಲೆ - ತಿರುಪತಿ - ತಿರುಚಾನೂರು

ಮೂಲ : ಡಾ|| ಎಂ. ರಾಮರಾವ್ ಎಂ.ಎ.ಪಿಹೆಚ್.ಡಿ.
ಅನುವಾದ : ಎಸ್. ವಿ. ಹೇಮಾವತಿ ಎಂ.ಎ., ಬಿ.ಎಡ್.


ತಿರುಮಲೆಯ ಆಲಯ

ತಿರುಮಲೆಯ ಆಲಯದ ಒಳ ವಿವರಗಳು ಈ ರೀತಿಯಲ್ಲಿವೆ. ಪ್ರಸಿದ್ಧವಾದ ಶ್ರೀ ವೆಂಕಟೇಶ್ವರಸ್ವಾಮಿ ಆಲಯವು ವೆಂಕಟಾದ್ರಿ ಹೆಸರಿನ ಬೆಟ್ಟದ ಮೇಲೆ ಸುತ್ತಲೂ ಎತ್ತರವಾಗಿರುವ ಪರ್ವತಾವಳಿಯ ನಡುವೆ ತಗ್ಗಿನಲ್ಲಿರುವಂತೆ ಕಂಡುಬರುತ್ತದೆ. ಈ ಆಲಯದ ಇಡೀ ಪ್ರಕಾರವು ಒಂದಕ್ಕೊಂದು ಸೇರಿಸಿದಂತಹ ದೊಡ್ಡ ದೊಡ್ಡ ಕಲ್ಲುಗಳಿಂದ ನಿರ್ಮಾಣವಾಗಿದ್ದು, ಈ ಹೊರ ಪ್ರಾಕಾರದ ಗೋಡೆಗಳು ಪೂರ್ವಪಶ್ಚಿಮ 414 ಅಡಿಗಳೂ ಉತ್ತರದಕ್ಷಿಣ 263 ಅಡಿಗಳೂ ಆಗಿದ್ದು, ಆಲಯದ ಪೂರ್ವಭಾಗದಲ್ಲಿ ಒಂದೇ ಒಂದು ಮಹಾದ್ವಾರವಿದೆ. ಮೇಲೆ ಒಂದು ಗೋಪುರವನ್ನೂ ಹೊಂದಿರುವ ಈ ಮಹಾದ್ವಾರವನ್ನು ಪಡಿಕಾವಲಿ ಎಂದೂ, ಈ ಗೋಪುರವನ್ನು ಪಡಿಕಾವಲಿ ಗೋಪುರ ಎಂದೂ ಕರೆಯುವರು. ಕ್ರಿ.ಶ. ಹದಿಮೂರನೆಯ ಶತಮಾನದಲ್ಲಿಯೂ ಈ ಗೋಪುರದ ತಳಗಟ್ಟು ಇದ್ದಿರಬೇಕು. ಗೋಪುರ ಮಾತ್ರ ನಂತರದ ಕಾಲದಲ್ಲಿ ನಿರ್ಮಾಣವಾಗಿರಬೇಕು. (I-84)

ಹೊರ ಅಂಗಳ ಅಥವಾ ಸಂಪಂಗಿ ಪ್ರದಕ್ಷಿಣೆ : ಪಡಿಕಾವಲಿ ಗೋಪುರದಿಂದ ಒಳಕ್ಕೆ ಬಂದರೆ ಆಲಯದ ಹೊರ ಆವರಣದ ಅಂಗಳಕ್ಕೆ ಬರುತ್ತೇವೆ. ಒಳ ಬಂದ ಕೂಡಲೇ ಎಡಬಲಗಳಲ್ಲಿ ಹರಡಿ ಮಧ್ಯದಲ್ಲಿ ದಾರಿಯಂತಿರುವ ಒಂದು ಮಂಟಪವನ್ನು ಸೇರಿದಂತಾಗುತ್ತದೆ. ಎರಡೂ ಕಡೆಯ ಭಾಗಗಳೂ ನಾಲ್ಕು ಕಂಭಗಳ ಎರಡು ಸಾಲಿನಿಂದ ಕೂಡಿವೆ. ಹೊರಸಾಲಿನ ಕಂಭಗಳು ಸಾಧಾರಣವಾಗಿದ್ದು ತಳದಲ್ಲಿ ಸಾಲಕೋಷ್ಠಗಳನ್ನು ಹೊಂದಿವೆ. ಈ ಮಂಟಪದ ಉತ್ತರ ಭಾಗದಲ್ಲಿ ಹೊರ ಪ್ರಾಕಾರಕ್ಕೆ ಅಂಟಿಕೊಂಡಂತೆ ಮೂರು ಲೋಹದ ಪ್ರತಿಮೆಗಳಿವೆ. ಆಳೆತ್ತರದ ಈ ಪ್ರತಿಮೆಗಳು ವಿಜಯನಗರದ ಅರಸ [illegible] ಪತ್ನಿಯರ

ದ್ದಾಗಿವೆ. ಇದರಂತೆಯೇ ದಕ್ಷಿಣಭಾಗದಲ್ಲಿ ಎರಡು (ಅಚ್ಯುತರಾಯ ಅವನ ಪತ್ನಿ ವರದಾಜೀ ಅಮ್ಮನವರ) ಪ್ರತಿಮೆಗಳೂ, ವೆಂಕಟಪತಿ ರಾಯನ ಪ್ರತ್ಯೇಕವಾದ ಒಂಟಿ ಪ್ರತಿಮೆಯೂ ಇವೆ. ಇಲ್ಲಿನ ಕಂಬಗಳ ಮಾದರಿಯನ್ನು ನೋಡಿದರೆ ಈ ಮಂಟಪವನ್ನು ಅರ್ವಾಚೀನ ವಿಜಯನಗರ ಕಾಲದಲ್ಲಿ ಎಂದರೆ 16 ನೆಯ ಶತಮಾನದ ಮೊದಲರ್ಧ ಭಾಗದಲ್ಲಿ ನಿರ್ಮಿಸಿರಬಹುದು ಎಂದು ತೋರುವುದು.

ರಂಗಮಂಟಪ : ಈ ಮಂಟಪದ ದಕ್ಷಿಣಕ್ಕೆ ರಂಗಮಂಟಪವೆಂದು ಕರೆಯಲಾಗುವ ದೊಡ್ಡ ಮಂಟಪವೊಂದಿದೆ. ಇದರಲ್ಲಿ ಮುಂಭಾಗದಲ್ಲಿ ಒಂದು ಹಜಾರವಿದೆ. ಇಲ್ಲಿ ನಾಲ್ಕು ಕಂಬಗಳ ಎರಡು ಸಾಲು ಇದ್ದು, ಹೊರಗಡೆಯ ಕಂಬಗಳು ಮೂರು ಅಂತರ್ಗಂಭಗಳನ್ನು ಹೊಂದಿದ್ದು ಒಳಗಡೆಯ ಕಂಬಗಳು ಪ್ರಾಣಿಶಿಲ್ಪಗಳನ್ನು ಹೊಂದಿವೆ. ಕಂಬಗಳ ಮೇಲಿನ ತೊಲೆಗಳು ಮಧ್ಯದಲ್ಲಿ ಬೋದಿಗೆಗಳಿಂದ ಕೂಡಿದ್ದು ಈ





ನಡುವಿನ ಸ್ಥಳದಲ್ಲಿ ಕಪೋತ ಸಮೇತವಾದ ಎರಡು ಪಟ್ಟಿಕೆಗಳೂ ಇವೆ.

ಇಲ್ಲಿ ನೃತ್ಯಗಾರ್ತಿಯರ ಶಿಲ್ಪಗಳಿದ್ದು ವೈಷ್ಣವ ಪುರಾಣ ಸಂಘಟನೆಗಳೂ ಶಿಲ್ಪಗಳಾಗಿವೆ. ಮಂಟಪದ ದಕ್ಷಿಣ ಭಾಗದಲ್ಲಿ ಒಂದು ಅಂಗಳವೂ ಒಂದು ಗುಡಿಯೂ ಇದೆ. ಅಂಗಳವು ಕರಿಶಿಲೆಯಿಂದ ಕೂಡಿದ್ದರೂ ಈಗ ಸುಣ್ಣಬಳಿಯಲ್ಪಟ್ಟು ವಾಹನವನ್ನಿಡಲು ಬಳಕೆಯಾಗುತ್ತಿದೆ. ಇಲ್ಲಿಕಿರುಗುಡಿಯಲ್ಲಿ ಒಂದು ಗರ್ಭಗುಡಿಯೂ ಇದೆ. ಸುತ್ತಲ ಗೋಡೆಗಳು ಅನುಕ್ರಮವಾಗಿ ಪಿಲಾಸ್ತರು, ಕುಂಭ ಪಂಜರ, ಪಿಲಾಸ್ತರು, ಸಾಲಕೋಷ್ಠ, ಪಿಲಾಸ್ತರು, ಕುಂಭ ಪಂಜರಗಳ ಅಲಂಕಾರ ಪಡೆದಿವೆ. ಗರ್ಭಗುಡಿಯ ಒಳಗಿನ ಹಿಂಬದಿಯ ಗೋಡೆಯೂ ಹೀಗೆಯೇ ಅಲಂಕೃತವಾಗಿದೆ. ಗುಡಿಯ ಮುಂಭಾಗದಲ್ಲಿನ ದ್ವಾರದ ಎರಡೂ ಬದಿಯಲ್ಲಿ ಸಾಲಕೋಷ್ಠಗಳಿವೆ. ಇಡೀ ಮುಂಭಾಗದಲ್ಲಿ ಸಿಂಹಲಲಾಟ ಹೊಂದಿದ ಕಪೋತದಿಂದ ಅಲಂಕೃತವಾದ ನಾಸಿಕಗಳು ಇವೆ. ವಾಸ್ತು ಶಿಲ್ಪದ ದೃಷ್ಟಿಯಿಂದ ಈ ಗುಡಿಯನ್ನು ಹದಿನಾಲ್ಕನೇ ಶತಮಾನಕ್ಕೆ ಸೇರಿಸಬಹುದು.

ಊಂಜಲ್ ಮಂಟಪ : ರಂಗಮಂಟಪದ ಪಶ್ಚಿಮಕ್ಕೆ ಎರಡು ಭಾಗಗಳಲ್ಲಿ ಅನ್ನಾ ಊಂಜಲ್ ಮಂಟಪ, ತಿರುಮಲರಾಯ ಮಂಟಪಗಳಿವೆ. ಮುಂಭಾಗವು ಕೆಳಮಟ್ಟ ದಲ್ಲಿಯೂ (ತಿರುಮಲರಾಯ ಮಂಟಪ) ಹಿಂಭಾಗವು ಎತ್ತರದಲ್ಲಿಯೂ ಇವೆ (ಊಂಜಲ್ ಮಂಟಪ). ಹಿಂಭಾಗದ ಎತ್ತರದ ಜಗಲಿಯ ಮೇಲಿನ ಮಂಟಪವನ್ನು ವಿಜಯನಗರದ ಸಾಳುವ ನರಸಿಂಹನು 1473 ರಲ್ಲಿ ನಿರ್ಮಿಸಿದನು. (II - 50). ಮುಂದಿನ ಭಾಗವನ್ನು ಅರವೀಡು ತಿರುಮಲರಾಯನು 16 ನೇ ಶತಮಾನದಲ್ಲಿ ನಿರ್ಮಿಸಿದ (VI - 1) ಮುಂಭಾಗವು ಎರಡೂ ಬದಿಗೆ ನಾಲ್ಕು ಕಂಭಗಳ ಎರಡು ಸಾಲು ಹೊಂದಿದೆ. ಹೊರಭಾಗದ ಎರಡು ಸಾಲಿನ ಕಂಭಗಳು ಅಲಂಕಾರ ವಿಹೀನವಾಗಿದ್ದು ಒಳಭಾಗದ ಕಂಭಗಳು ಪ್ರಾಣಿ ಶಿಲ್ಪಗಳನ್ನು ಹೊಂದಿವೆ. ಮಂಟಪದ ಹಿಂಭಾಗದಲ್ಲಿ ಹೊರಗಿನ ಕಂಭಗಳು ಅಲಂಕಾರ ರಹಿತವಾಗಿದ್ದರೆ ಒಳಭಾಗದ ಕಂಭಗಳಲ್ಲಿ ಒಂದೊಂದು ಅಂತರ್ಗಂಭಗಳಿವೆ. ಮಂಟಪದ ಮಧ್ಯಭಾಗದಲ್ಲಿ ಕರಿಶಿಲೆಯ ಸುಂದರ ಒಳಮಂಟಪವಿದೆ. ಈ ಒಳಮಂಟಪದ ಹಿಂದೆ ಮುಂದೆ ಎರಡು ಕಂಭಗಳ ಎರಡು ಸಾಲು ಇವೆ. ಒಳಮಂಟಪಕ್ಕೆ ನಾಲ್ಕು ಮೂಲೆಗಳಲ್ಲಿ ಮೂರು ಮೂರು ಅಂತರ್ಗಂಬಗಳ ನಾಲ್ಕು ಕಂಭಗಳಿವೆ. ಈ ಒಳಮಂಟಪದ ತೊಲೆಗಳ ಕಂಭಗಳಲ್ಲಿ ಹಲವು ವೈಷ್ಣವ ಶಿಲ್ಪಗಳಿವೆ. ಈ ತಿರುಮಲರಾಯ ಮಂಟಪದಲ್ಲಿ ತೋದರಮಲ್ (ಲಾಲಾ ಖೇಮರಾಮ) ಆತನ ತಾಯಿ ಮತ್ತು ಪತ್ನಿಯರ ವಿಗ್ರಹಗಳಿವೆ.

ಅಯಿನಾಮಹಲ್ : ಮುಖಮಂಟಪ - ಪ್ರತಿಮಾ ಮಂಟಪದ ಹೊರ ಅಂಗಳದ ಉತ್ತರಭಾಗದಲ್ಲಿ ಅಯಿನಾ ಮಹಲ್ ಎಂದು ಕರೆಯಲಾಗುವ ಕಟ್ಟಡವಿದೆ.

ಇದರಲ್ಲಿ ಎರಡು ಭಾಗಗಳು. ಮುಂಭಾಗದಲ್ಲಿ ಆರು ಕಂಭಗಳ ಆರುಸಾಲಿನ ತೆರೆದ ಮಂಟಪವಿದೆ. ಹಿಂಭಾಗದಲ್ಲಿ ಒಂದು ಗುಡಿಯಿದ್ದು, ಒಂದು ಅಂತರಾಳ ಒಂದು ಗರ್ಭಗುಡಿ ಇವೆ.

ಧ್ವಜಸ್ತಂಭ ಮಂಟಪ : ಆಲಯದ ಹೊರ ಅಂಗಳದಲ್ಲಿನ ಪಶ್ಚಿಮದಲ್ಲಿ ಒಳಗೋಪುರವನ್ನು ಮುಟ್ಟುವಂತೆ - ಎರಡನೆಯ ಬಾಗಿಲಿಗೆ ಹೊಂದಿಕೊಂಡಂತೆ ಒಂದು ಮಂಟಪವಿದೆ. ಇಲ್ಲಿ ಉತ್ತರ ದಕ್ಷಿಣಗಳಲ್ಲಿ ಐದು ಕಂಭಗಳ ಎರಡು ಸಾಲುಗಳಿದ್ದು ಮಧ್ಯದಲ್ಲಿ ಧ್ವಜಸ್ಥಂಭ ಬಲಿಪೀಠಗಳಿವೆ.

ಹೊರ ಅಂಗಳದ ಮಿಕ್ಕ ಭಾಗಗಳಲ್ಲಿ ಪಶ್ಚಿಮ, ಉತ್ತರದಕ್ಷಿಣಗಳಲ್ಲಿ ಇಡೀ ಹೊರ ಪ್ರಾಕಾರಕ್ಕೆ ಹೊಂದಿಕೊಂಡಂತೆ ಕಂಭಗಳ ಸಾಲಿನ ಮಂಟಪಗಳಿದ್ದಂತೆ ಕಂಡುಬರುವುದಾದರೂ ಕ್ರಮೇಣ ಈ ಮಂಟಪಗಳನ್ನು ಬೇರೆ ಬೇರೆ ಪ್ರಯೋಜನಗಳಿಗೆ ತಕ್ಕಂತೆ ಕೊಠಡಿಗಳಾಗಿ ಪರಿವರ್ತಿಸಲಾಗಿದೆ.


ಒಳ ಆವರಣ : ಆಲಯದ ಒಳ ಆವರಣವನ್ನು ಅಥವಾ ಎರಡನೆಯ ಆವರಣವನ್ನು - ಒಂದು ಬಾಗಿಲ ಮೂಲಕ ಮಾತ್ರವೇ ಪ್ರವೇಶಿಸಬಹುದು. ಇಲ್ಲಿಯೇ ಎರಡನೆಯ ಗೋಪುರವಿದೆ. ಈ ಬಾಗಿಲ ನೆಲಗಟ್ಟು 13ನೇ ಶತಮಾನದ ಆರಂಭದಲ್ಲಿ ಉಂಟಾದಂತೆ ಕಂಡುಬರುವುದು. ಈ ಒಳ ಆವರಣವನ್ನು ವಿಮಾನ ಪ್ರದಕ್ಷಿಣೆ ಎನ್ನುವರು.

ವರದರಾಜಸ್ವಾಮಿ ಆಲಯ : ಎರಡನೆಯ ಗೋಪುರದಿಂದ ಒಳಪ್ರವೇಶಿಸಿದರೆ ದಕ್ಷಿಣ ಭಾಗದ ಮೂಲೆಯಲ್ಲಿ ವರದರಾಜಸ್ವಾಮಿಯ ಚಿಕ್ಕದೇವಾಲಯವಿದೆ. ಒಂದು ಎತ್ತರದ ಅಧಿಷ್ಠಾನದ ಮೇಲೆ ಅಂತರಾಳ ಗರ್ಭಗೃಹ ವಿಮಾನಗಳಿಂದ ಕೂಡಿದ ಈ ಗುಡಿಯು ವೇಸರ ಮಾದರಿಯದಾಗಿದೆ. ಗರ್ಭಗೃಹದ ಗೋಡೆಗಳು ನಾಲ್ಕು ಪಿಲಾಸ್ತರುಗಳಿಂದಲೂ, ಅಂತರಾಳವು ಒಂದು ಪಿಲಾಸ್ತರಿನಿಂದಲೂ, ಹಿಂಭಾಗದ ಗೋಡೆ ನಾಲ್ಕು ಪಿಲಾಸ್ತರುಗಳಿಂದಲೂ ಕೂಡಿದೆ. ಪಶ್ಚಿಮಕ್ಕೆ ಮುಖ ಮಾಡಿರುವ ಸ್ವಾಮಿಯ ದರ್ಶನಕ್ಕೆ ಪಶ್ಚಿಮದಿಂದಲೇ ಪ್ರವೇಶ. ಇಲ್ಲಿ ಎರಡೂ ಕಡೆಯೂ ಪಿಲಾಸ್ತರುಗಳಿವೆ. ಸಿಂಹ ಲಲಾಟ, ಕಪೋತ ನಾಸಿಕಗಳುಂಟು. ಗೋಡೆಗಳ ಮೇಲೆ ಇದೇ ರೀತಿ ಅಲಂಕೃತಗೊಂಡ ಕಪೋತಗಳುಂಟು. ಗರ್ಭಗುಡಿಯಲ್ಲಿ ಕಲ್ಲಿನಿಂದ ಮಾಡಿದ ವರದರಾಜ ಸ್ವಾಮಿಯ ಮೂರ್ತಿಯಿದೆ.

ಕಲ್ಯಾಣಮಂಟಪ : ಒಳ ಪ್ರದಕ್ಷಿಣಾ ಪಥದಲ್ಲಿ ದಕ್ಷಿಣಕ್ಕೆ ಕಲ್ಯಾಣ ಮಂಟಪವಿದೆ. ಇದರ ವಿಸ್ತೀರ್ಣ 80 X 36 ಅಡಿಗಳು. ಪೂರ್ವದಲ್ಲಿನ ನಾಲ್ಕು ಮೆಟ್ಟಿಲನ್ನು ಹತ್ತಿ ಈ ಮಂಟಪವನ್ನು ಸೇರಬೇಕು. ಈ ಮಂಟಪದ ಉತ್ತರದಲ್ಲಿ 9 ಕಂಭಗಳ ಎರಡು ಸಾಲು ಇದ್ದರೆ ದಕ್ಷಿಣದಲ್ಲಿ ಒಂದೇ ಸಾಲಿನಲ್ಲಿ 9 ಕಂಭಗಳಿವೆ. ಉತ್ತರದ ಕಡೆಯ ಹೊರಗಂಬಗಳು ಅಲಂಕಾರ ರಹಿತವಾಗಿದ್ದರೆ, ಮಿಕ್ಕವು ಪ್ರಾಣಿ ಶಿಲ್ಪಗಳನ್ನು ಹೊಂದಿವೆ. ಈ ಕಂಭಗಳಲ್ಲಿ ನರಸಿಂಹ, ಶ್ರೀಕೃಷ್ಣ, ವೇಣುಗೋಪಾಲ - ಮುಂತಾದ ಸುಂದರ

ವೈಷ್ಣವ ಶಿಲ್ಪಗಳೂ ಉಂಟು. ಈ ಮಂಟಪದಲ್ಲಿ ಒಂದು ಸುಂದರವಾದ ಕಿರುಗುಡಿಯು ಅಧಿಷ್ಠಾನದ ಮೇಲೆ ನಿಂತಿದೆ. ಇದರ ಆವರಣದ ಗೋಡೆಗಳು ಸುಂದರ ಅಲಂಕಾರದಿಂದ ಕೂಡಿವೆ. ಈ ಕಲ್ಯಾಣಮಂಟಪವನ್ನು ಅವಸರದ ಚೆನ್ನಪ್ಪನೆಂಬ ದಳಪತಿಯು ಕ್ರಿ.ಶ. 1586 ರಲ್ಲಿ ನಿರ್ಮಿಸಿದನು (VI - 7).

ನರಸಿಂಹನಗುಡಿ : ಒಳ ಪ್ರಾಕಾರದ ಉತ್ತರದಲ್ಲಿನ ಎತ್ತರದ ಜಗಲಿಯ ಮೇಲೆ ನರಸಿಂಹಸ್ವಾಮಿಯ ಗುಡಿಯಿದೆ. ಈ ಗುಡಿಯ ಮುಂಭಾಗದಲ್ಲಿ ಎರಡು ಕಂಭಗಳೂ ಬದಿಗಳಲ್ಲಿ ಐದೈದು ಕಂಭಗಳೂ ಇವೆ. ಬದಿಯ ಕಂಭಗಳು ಸಾಧಾರಣವಾಗಿವೆ. ಮಂದಿರದಲ್ಲಿ ಒಂದು ಅಂತರಾಳ ಹಾಗೂ ಗರ್ಭಗುಡಿಗಳಿವೆ.



ಶ್ರೀ ವರದರಾಜಸ್ವಾಮಿ.

ಗರ್ಭಗುಡಿಯಲ್ಲಿ ಸುಂದರವಾದ ಯೋಗನರಸಿಂಹನ ವಿಗ್ರಹವಿದೆ. ಅಳಗಿಯ ಸಿಂಗರ್ ಎನ್ನಲಾದ ಈ ದೇವರ ಬಗೆಗೆ ಅತಿ ಹಿಂದಿನ ಉಲ್ಲೇಖ ಕಂಡು ಬರುವ ಶಾಸನವೆಂದರೆ ಕ್ರಿ.ಶ. 1469 ರ ಕಾಲದ್ದು. ಇಲ್ಲಿ ಈ ದೇವರಿಗೆ ನೈವೇದ್ಯ ಮಾಡಿದ ವಿವರವಿದೆ (II - 39). ಇನ್ನೊಂದು ಶಾಸನವು (II - 101) ಧನುರ್ಮಾಸ ಪೂಜೆಯ ಮೂವತ್ತು ದಿನಗಳಲ್ಲಿ, ವಸಂತ ಪಂಚಮಿಯ ದಿನ, ಶ್ರೀರಾಮ ನವಮಿಯ ದಿನಗಳಲ್ಲಿಯೂ, ತಿರುಕ್ಕೊಡಿ ತಿರುನಾಳ್‌ನ 7 ನೇ ದಿನವೂ ಸ್ವಾಮಿಗೆ ನೀಡಲಾಗುವ ನೈವೇದ್ಯಗಳನ್ನು ಹೆಸರಿಸಿರುವುದು. ಮತ್ತೊಂದು ಶಾಸನವು (III - 11) ವಸಂತ ಪಂಚಮಿಯ ಸಮರ್ಪಣೆಯನ್ನು ತಿಳಿಸುವುದು. ಕಂದಾಡೈ ರಾಮಾನುಜ ಅಯ್ಯಂಗಾರ್ಯನು ಈ ದೇವರ ತಿರುಮಂಜನಕ್ಕೆ ಏರ್ಪಾಡು ಮಾಡಿ ಪಂಗುಣಿ ಅಮಾವಾಸ್ಯೆ, ವಸಂತ ಪೂರ್ಣಿಮೆಗಳಲ್ಲಿ ನಿವೇದನೆಗೆ ಏರ್ಪಾಡು ಮಾಡಿದನು.

ಮುಖ್ಯ ಆಲಯ : ಶ್ರೀ ವೆಂಕಟೇಶ್ವರ ಸ್ವಾಮಿಯ ವಿಗ್ರಹವನ್ನು ಹೊಂದಿರುವ ಪ್ರಧಾನ ಆಲಯವು ಹಲವು ಕಟ್ಟಡಗಳ ಸಂಕೀರ್ಣ. ಇದು ಪಶ್ಚಿಮದ ಕಡೆಯ ಗರ್ಭಗೃಹದಿಂದ ಆರಂಭವಾಗಿ ಪೂರ್ವದ ಕಡೆಯ ತಿರುಮಾಮಣಿ ಮಂಟಪದಲ್ಲಿ ಮುಗಿಯುತ್ತದೆ. ಈ ವಿಸ್ತಾರದ ಒಂದು ಭಾಗವು ಉತ್ತರ ದಕ್ಷಿಣದಲ್ಲಿನ ಮುಕ್ಕೋಟಿ ಪ್ರದಕ್ಷಿಣೆಯನ್ನೂ ಒಳಗೊಳ್ಳುವುದು. ಈ ಮುಕ್ಕೋಟಿ ಪ್ರದಕ್ಷಿಣೆಯು ಒಂದು ಕಿರುಗಾತ್ರದ ಅಧಿಷ್ಠಾನದಲ್ಲಿದ್ದು ಸಾಧಾರಣವಾದ ದಪ್ಪವಾದ ಗೋಡೆಗಳಿಂದ ಕೂಡಿದೆ. ಮುಕ್ಕೋಟಿ ಪ್ರದಕ್ಷಿಣೆ ಪೂರ್ವಕ್ಕೆ ಹೊರಚಾಚಿದಂತಿದೆ. ಹೀಗಾಗಿ ಉತ್ತರದಿಂದ ನೋಡಿದರೆ ಪ್ರಧಾನ ಆಲಯವು ಮೂರು ಭಾಗಗಳಂತೆ ಕಂಡುಬರುವುದು.

ಗರ್ಭಗೃಹದ ಮೇಲೆದ್ದಿರುವ ವಿಮಾನವು ದ್ವಿತಾಳದಿಂದ ಕೂಡಿ ವೇಸರ ಪದ್ಧತಿಯದಾಗಿದೆ. ಪ್ರತಿಯೊಂದು ತಾಳವೂ ಕೂಟ, ಪಂಜರ,



ಸಾಲಪಂಜರ, ಕೂಟಗಳಿಂದ ಕೂಡಿದೆ. ಎರಡು ತಾಳಗಳ ಮೇಲೆ ಚಿಕ್ಕ ಮೆಟ್ಟಿಲ ಮೇಲೆ ಮೂಲೆಗಳಲ್ಲಿ ಸಿಂಹಗಳಿವೆ. ಮೇಲ್ಗಡೆ ಕಳಶವಿದೆ. ವಿಮಾನದಲ್ಲಿ ಹಲವಾರು ವೈಷ್ಣವ ಪ್ರತಿಮೆಗಳಿದ್ದು ಚಿನ್ನದ ಮುಲಾಮಿನ ತಾಮ್ರದ ತಗಡಿನಿಂದ ಹೊದಿಸಲ್ಪಟ್ಟಿದೆ.

ತಿರುಮಾಮಣಿ ಮಂಟಪ : ಇದೊಂದು ಕಂಭಗಳಿಂದ ಕೂಡಿದ ತೆರೆದ ಮಂಟಪ. ಇದರ ನಂತರ ಸಿಗುವುದು ಸ್ನಪನ ಮಂಟಪ. ಇಲ್ಲಿ ಮೂರು ಭಾಗ. ಮಧ್ಯಭಾಗವು ಉತ್ತರ ದಕ್ಷಿಣ ಭಾಗಗಳಿಗಿಂತ ಹೆಚ್ಚು ಅಗಲವಾಗಿದೆ. ಮುಂದಿನ ಮತ್ತು ಹಿಂದಿನ ಭಾಗಗಳು ಒಂದು ಅಧಿಷ್ಠಾನದ ಮೇಲಿದ್ದು, ಈ ಅಧಿಷ್ಠಾನದಲ್ಲಿ ಉಪಾನ, ದೊಡ್ಡ ಪಟ್ಟಿಕೆ, ಕಿರಿಯ ಪಟ್ಟಿಕೆ, ಪದ್ಮ, ದೊಡ್ಡ ಪಟ್ಟಿಕೆಗಳ, ತ್ರಿಪಟ್ಟಿಗಳು ಇಡೀ ಆವರಣದಲ್ಲಿ ಅಡ್ಡಲಾಗಿ ಹರಡಿದ್ದು, ಸಿಂಹಲಲಾಟದಿಂದ ಕೂಡಿದ ನಾಸಿಕ ಸಹಿತ ಕಪೋಲಗಳಿಂದ ಇದ್ದರೂ, ಕಪೋತಗಳ ಮೇಲೆ ಆಲಿಂಗನ ಪಟ್ಟಿಕೆಯಿದ್ದು, ಒಂದು ಸಾಲು ಮಕರತೋರಣಗಳಿವೆ. ಪಶ್ಚಿಮದ ಗೋಡೆಗಳು ಸಿಂಹಲಲಾಟ ತೋರಣಗಳಿಂದ ಕೂಡಿದ ಕೋಷ್ಠ ಹಾಗೂ ಎರಡು ಪಿಲಾಸ್ತರುಗಳಿಂದ ಕೂಡಿವೆ. ಮಧ್ಯಭಾಗದ ಗೋಡೆಗಳು ಎರಡು ಪಿಲಾಸ್ತರುಗಳ ಮಧ್ಯದಲ್ಲಿ ಸಾಲಕೋಷ್ಠಗಳನ್ನು ಹೊಂದಿವೆ. ಪೂರ್ವದ ಭಾಗದ ಗೋಡೆಗಳು ಸಿಂಹಲಲಾಟದಿಂದಲೂ ಕೋಷ್ಠಗಳಿಂದಲೂ ಸಿಂಗಾರಗೊಂಡಿವೆ.

ಮುಕ್ಕೋಟಿ ಪ್ರದಕ್ಷಿಣಾ ಪಥವು ಸಾಯಣ ಮಂಟಪ, ಅಂತರಾಳ, ಗರ್ಭಗೃಹಗಳನ್ನು ಸುತ್ತುವರೆದಿದೆ. ಈ ನಿರ್ಮಾಣಗಳ ಗೋಡೆಗಳ ಹೊರಭಾಗದಲ್ಲಿ ಕಂಡುಬರುವ ವಾಸ್ತು ಲಕ್ಷಣಗಳು ಬೇರೆಯಾಗಿವೆ. ಉತ್ತರದ ಹಾಗೂ ದಕ್ಷಿಣದ ಗೋಡೆ ಮಧ್ಯದ ಎರಡು ವಿಭಾಗಗಳು ಹೆಚ್ಚು ಅಗಲವಾಗಿವೆ. 1,2 ಮತ್ತು 4 ನೇ ವಿಭಾಗಗಳು ಒಂದು ಎತ್ತರದ ಅಧಿಷ್ಠಾನದಲ್ಲಿದೆ. ಇದರಲ್ಲಿ ಉಪಾನ, ಪಟ್ಟ, ಅರ್ಧಪದ್ಮ, ಎರಡು ಪಟ್ಟಿಕೆ, ಗಳ, ಪಟ್ಟಿ, ತ್ರಿಪಟ್ಟ, ಊರ್ಧ್ವಪದ್ಮಪಟ್ಟ, ಗಳ, ಕಪೋತಗಳು, ನಾಸಿಕದಿಂದ ಅಲಂಕೃತವಾಗಿ ಸಿಂಹಲಲಾಟ ಹೊಂದಿ ಮಕರ ತೋರಣ ಕೂಡಿದ ಪಟ್ಟಿಗಳನ್ನು ಹೊಂದಿವೆ. ಈ ಮೂರು ವಿಭಾಗಗಳ ಅಲಂಕಾರವೂ ಬೇರೆ ಮಾದರಿಯದು. ಮೊದಲನೆಯ ಭಾಗವು ಸಾಲಕೋಷ್ಠ ಎರಡು ಪಿಲಾಸ್ತರುಗಳು, ಕೂಟ ಎರಡು ಪಿಲಾಸ್ತರಿನ ಮಧ್ಯದ ಕುಂಭ ಪಂಜರ, ಕೂಟ ಪಂಜರ, ಪಿಲಾಸ್ತರು ಕುಂಭ ಪಂಜರಗಳನ್ನು ಹೊಂದಿದೆ.

ಗರ್ಭಗೃಹದ ಹಿಂದಿನ ಗೋಡೆಯು ಮೂರು ಭಾಗವಾಗಿದ್ದು ಕೇಂದ್ರ ಭಾಗವು ಸ್ವಲ್ಪ ಪಶ್ಚಿಮಕ್ಕೆ ಹೊರಚಾಚಿದೆ. ಮುಕ್ಕೋಟಿ ಪ್ರದಕ್ಷಿಣೆ ಎಂದು ಕರೆಯಲಾಗುವ ಪ್ರದಕ್ಷಿಣಾ ಪಥವು ಮೂರು ಭಾಗಗಳ ಕಂಭಗಳ ಅಂಗಳ. ದಕ್ಷಿಣ ಭಾಗದಲ್ಲಿ ಆರು ಕಂಭಗಳಿವೆಯಾದರೆ ಪಶ್ಚಿಮ ಭಾಗದಲ್ಲಿ ನಾಲ್ಕು ಕಂಬದ ಸಾಲೂ, ಉತ್ತರದಲ್ಲಿ ಏಳು ಕಂಬಗಳ ಎರಡು ಸಾಲೂ ಇವೆ. ಎಲ್ಲ ಕಂಭಗಳೂ ಸಾಧಾರಣ ವಾಗಿದ್ದು ಗುಂಡಗಿದ್ದು ಚೋಳರ ಅಗಲಮುಖದ ಬೋಧಿಗೆಯನ್ನು ಹೊಂದಿರುವಂತಹವು ಗಳಾಗಿವೆ. ಗೋಡೆಗಳ ಮೇಲುಭಾಗಗಳಲ್ಲಿ ಕಪೋತ ಗಳಲ್ಲದೆ ಸಾಧಾರಣ ಪಟ್ಟಿಕೆಯನ್ನು ನೋಡಬಹುದಾಗಿದೆ.

ತಿರುಮಾಮಣಿ ಮಂಟಪವು 43 ಅಡಿ X40 ಅಡಿ ವೈಶಾಲ್ಯ ಹೊಂದಿದ್ದು 16 ಕಂಭಗಳಿವೆ. ಮೇಲಿನ ಛಾವಣಿಯಿಂದ ಇಳಿಬಿದ್ದಿರುವ ಒಂದು ಕಪೋತವಿದೆ. ಇದರ ಪಶ್ಚಿಮದಲ್ಲಿ ಸ್ನಪನ ಮಂಟಪಕ್ಕೆ ತೆರೆದುಕೊಳ್ಳುವ ಬಂಗಾರದ ಬಾಗಿಲು ಇದೆ. ಇದು ಅತ್ಯಂತ ಸುಂದರವಾದ ವಿನ್ಯಾಸ ಪಡೆದಿರುವ ಬಾಗಿಲು. ಈ ಬಾಗಿಲ ಎರಡೂ ಬದಿಯಲ್ಲಿ ದ್ವಾರಪಾಲಕರಿದ್ದಾರೆ. ಕಮಲದಳಗಳಿಂದ ಅಲಂಕೃತವಾದ ಬಾಗಿಲವಾಡ. ಹಾಗೂ ಮೇಲಿನ ದಾಲಮಂದ್ರದಲ್ಲಿ ಗಜಲಕ್ಷ್ಮಿಯ ವಿಗ್ರಹವಿದೆ. ಅದಕ್ಕೂ ಮೇಲ್ಭಾಗದಲ್ಲಿ ಸಿಂಹಲಲಾಟದ ಸಾಲು.

ಬಂಗಾರದ ಬಾಗಿಲಿನಿಂದ ಸ್ನಪನ ಮಂಟಪವನ್ನು ಸೇರಿದರೆ ಇಲ್ಲಿ ನಾಲ್ಕು ಕಂಭಗಳಿವೆ. ಎಡಬಲ ಭಾಗಗಳ ಸ್ಥಳಗಳನ್ನು ಕೊಠಡಿಗಳನ್ನಾಗಿ ಪರಿವರ್ತಿಸಲಾಗಿದೆ.

ಈ ಮಂಟಪದ ನಂತರ ಒಂದು ಚಿಕ್ಕ ಕೊಠಡಿ. 12X10 ಅಡಿ ವೈಶಾಲ್ಯದ ಈ ಕೊಠಡಿಯ ಎರಡೂ ಕಡೆ ಮೇಲಕ್ಕೆ ಎತ್ತರಿಸಿದ ಜಗಲಿಗಳಿವೆ. ಈ ಜಗಲಿಯ ಮೇಲೆ ಹಲವು ಹನ್ನೊಂದು ವಸ್ತುಗಳನ್ನು ವಿಗ್ರಹಗಳನ್ನು ಮೊದಲಿಗೆ ಇಡುತ್ತಿದ್ದರು. ಮೊದಲಿಗೆ ಇದೂ ಒಂದು ಖಚಿತವಾದ ಮಂಟಪವೇ ಆಗಿದ್ದಿರಬೇಕು. ಮಧ್ಯದಲ್ಲಿ ಕಿರುಗಾತ್ರದ ದಾರಿಯನ್ನು ಬಿಟ್ಟು ಅತ್ತಲಿತ್ತ ಕೊಠಡಿಗಳ ನಿರ್ಮಾಣವಾಗಿರಬೇಕು.

ಇನ್ನು ಮುಂದೆ ಸಾಯಣ ಮಂಟಪವೆಂಬ ಇನ್ನೊಂದು ಮಂಟಪವಿದೆ. ಇದೇ ಮೊದಲಿಗೆ ಅಂತರಾಳ ವಾಗಿರಬೇಕು.

ಇದರ ನಂತರ ಸಿಗುವುದೇ ಶ್ರೀ ವೆಂಕಟೇಶ್ವರಸ್ವಾಮಿ ನೆಲೆಸಿದ ಗರ್ಭಗೃಹ.

ಆಲಯ ನಿರ್ಮಾಣದ ಕಾಲ : ಈ ಆಲಯದ ನಿರ್ಮಿತಿಯ ಕಾಲವನ್ನು ನಿರ್ಣಯಿಸುವುದು ಅತಿಕಷ್ಟ. ಈ ಸಂಬಂಧದಲ್ಲಿ ನಮಗೆ ನೆರವು ನೀಡಬಲ್ಲ ಯಾವ ನೇರ ಪುರಾವೆಗಳೂ ಇಲ್ಲ. ಹಾಗಾಗಿ ಯಾವುದೇ ಪ್ರಯತ್ನವೂ ಇತರ ನಿರ್ಮಾಣಗಳ ಆಧಾರದಲ್ಲಿಯೇ ನಡೆಯಬೇಕು.

ಆಲಯದಲ್ಲಿ ದೊರೆತಿರುವ ಶಾಸನಗಳು ಆಲಯದ ಜೀರ್ಣೋದ್ಧಾರ, ದುರಸ್ತಿ, ನಂತರದ ಕಾಲದಲ್ಲಿ ನಡೆದ ನೂತನ ಸೇರ್ಪಡೆಯ ನಿರ್ಮಾಣಗಳ ಬಗ್ಗೆ ಮಾತ್ರವೇ ಬೆಳಕು ಬೀರುತ್ತವೆಯೇ ಹೊರತು ಮೂಲ ದೇವಾಲಯವು ಯಾವಾಗ ನಿರ್ಮಾಣ ವಾಯಿತು ಎಂಬುದನ್ನು ಹೇಳುವುದಿಲ್ಲ. ಶಾಸನಗಳಲ್ಲಿ ಕಂಡುಬರುವ ಮೊತ್ತ ಮೊದಲ ಉಲ್ಲೇಖ ಎಂದರೆ ತಿರುಚಾನೂರು ಗ್ರಾಮದ ತಿರುವಿಳಂಕೋಯಿಲ್ ಆಗಿದೆಯೇ ಹೊರತು ವೆಂಗಡದ ಅಥವಾ ತಿರುಮಲೆಯ ಆಲಯದ ಪರಿಸಂಬಂಧದಲ್ಲಿ ಮಾತನಾಡುವುದಿಲ್ಲ.

ಹದಿಮೂರನೆಯ ಶತಮಾನದಲ್ಲಿ ನಡೆದ ಆಲಯ ಜೀರ್ಣೋದ್ಧಾರವು ಅದಕ್ಕಿಂತ ಮೊದಲಿದ್ದ ಆಲಯದ ಗುರುತುಗಳನ್ನು ಮುಚ್ಚಿಹಾಕಿತು. ಪ್ರಾಚೀನವಾದ ಗೋಡೆಗಳನ್ನು ಹಿಡಿದಿಡುವಂತೆ ಹೊಸ ಗೋಡೆಗಳನ್ನು ನಿರ್ಮಿಸಲಾಯಿತು. ಇದರಿಂದಾಗಿ ಗರ್ಭ ಗುಡಿಯ ಹೊರಗೋಡೆಗಳ ಮೂಲವನ್ನು ಪರಿಶೀಲಿಸಿ ಆಲಯದ ನಿರ್ಮಾಣ ಕಾಲವನ್ನು ಅಂದಾಜು ಮಾಡುವುದು ಅಸಾಧ್ಯ.

ಅರ್ವಾಚೀನ ಪಲ್ಲವರ ಕಾಲದಲ್ಲಿದ್ದ ವೈಷ್ಣವ ಆಳ್ವಾರರುಗಳು ದಕ್ಷಿಣ ಭಾರತದ ಹಲವು ಹನ್ನೊಂದು ಕ್ಷೇತ್ರಗಳ ದೇವರುಗಳನ್ನು ಕುರಿತು ಹಾಡಿದ್ದಾರೆ. ಅವರು ವೆಂಗಡದಲ್ಲಿರುವ ದೇವರನ್ನು ಸ್ತುತಿಸಿ ಹಾಡಿರುವರೇ ಹೊರತು ಆಲಯದ ಬಗ್ಗೆ ಒಂದು ಮಾತನ್ನೂ ಆಡಲಿಲ್ಲ. ತಿರುಮಳಿಶೈ ಆಳ್ವಾರರು ಈ ಸ್ವಾಮಿಯನ್ನು ದೂರದಿಂದಲೇ ನೋಡಬಹುದು ಎಂದು ಹೇಳುತ್ತಾರೆ. ಈ ಮಾತನ್ನು ಅಕ್ಷರಶಃ ಖಚಿತವನ್ನುವುದಾದರೆ ತಿರುವೆಂಕಟ ಮುಡೈಯಾನನು - ಶ್ರೀನಿವಾಸನು ಒಂದು ಬಯಲು ಮಂಟಪದಲ್ಲಿದ್ದನೆಂದಾಗುತ್ತದೆ. ಕುಲಶೇಖರ ಆಳ್ವಾರರು ತಾವು ಬಾಗಿಲ ಹೊಸ್ತಿಲಾಗಿ ಕೆಡೆದು ಬಿದ್ದು ಸ್ವಾಮಿಯ ಹವಳ ತುಟಿಯನ್ನು ನೋಡುವ ಬಯಕೆಯನ್ನು ವ್ಯಕ್ತಪಡಿಸಿದರು. ಇದು ನಿಜವೆಂದಾದಲ್ಲಿ ಈ ಆಳ್ವಾರರ ಕಾಲದ ಹೊತ್ತಿಗೆ ಸ್ವಾಮಿಯ ವಿಗ್ರಹದ ಸುತ್ತಲೂ ಒಂದು ಬಾಗಿಲು ಇರುವಂತೆ ಗೋಡೆಗಳು ಇದ್ದಿರಬೇಕು ಎಂದಾಗುತ್ತದೆ.

[illegible] ಆಳ್ವಾರ [illegible] ಎಂಟನೇ ಶತಮಾನ [illegible] ಹೇಳಲಾಗಿದೆ. [illegible] ಶಾಸನವು [illegible] ಭಾಗದಲ್ಲಿ [illegible] ಸೂಚಿಸುತ್ತದೆ. [illegible]

ಬೆಳ್ಳಿಯ ಪ್ರತಿಮೂರ್ತಿಯ ಸ್ಥಾಪನೆ ಎಂಬುದು ಮುಖ್ಯವಾಗುತ್ತದೆ. ಈ ಕಾಲದಲ್ಲಿ ಆಲಯವು ಒಂದು ಗರ್ಭಗೃಹವನ್ನು ಒಂದು ಅಂತರಾಳವನ್ನು ಒಳಗೊಂಡಿದ್ದಿತು ಎಂದು ಅಭಿಪ್ರಾಯ.


ಕ್ರಿ.ಶ. 8 ನೇ ಶತಮಾನದ ಹೊತ್ತಿಗೆ ಗರ್ಭಗೃಹ ಸಮೇತ ಅಂತರಾಳ ಇದ್ದಂತಹ ಒಂದು ಆಲಯವು ಇದ್ದಿತೆಂಬುದು - ಇದೆಯೆಂಬುದು ಖಚಿತವಾಗಿದೆ. ಇವುಗಳೇ ಈಗಿನ ಗರ್ಭಗೃಹ ಸಾಯಣಮಂಟಪಗಳೆಂದು ಹೇಳುತ್ತಾರೆ. ಆದರೆ ಇವೆರಡನ್ನೂ 13 ನೇ ಶತಮಾನದ ಹೊತ್ತಿಗೆ ಹೊಸ ಸಮಾನಾಂತರ ಗೋಡೆಗಳ ನಿರ್ಮಾಣದಿಂದ ಮುಚ್ಚಿದ್ದಾಗಿದೆ. ಇವೆರಡೂ ಕಟ್ಟಡಗಳ ಹೊರ ಭಾಗದ ಗೋಡೆಗಳಲ್ಲಿ, ತಿರುಪತಿಯ ಗೋವಿಂದ ರಾಜಸ್ವಾಮಿ ದೇವಾಲಯದ ಕೃಷ್ಣಸ್ವಾಮಿ ಆಲಯದ ಹೊರಗೋಡೆಗಳು ತೋರುವಂತೆಯೇ ಅರ್ವಾಚೀನ ಪಲ್ಲವರ ಕಾಲದ ಪ್ರತಿಮೆಗಳು ಇರಬೇಕು. ಪ್ರಾಯಶಃ ಎಂಟನೆಯ ಶತಮಾನಕ್ಕೆ ಮೊದಲು ಶ್ರೀ ವೆಂಕಟೇಶ್ವರಸ್ವಾಮಿಯ ವಿಗ್ರಹವು ಬಹುಕಾಲ ಬಯಲು ಮಂಟಪದಲ್ಲಿ ನಿಂತಿದ್ದಿರಬೇಕು.

ವರಾಹ ದೇವಾಲಯ : ವರಾಹ ಪುರಾಣವು ತಿಳಿಸುವ ಒಂದು ಕಥೆಯಿದೆ. ಸ್ವಾಮಿ ಪುಷ್ಕರಿಣಿಯ ದಡದಲ್ಲಿ ಬ್ರಹ್ಮನು ಈ ದೇವರನ್ನು ಪ್ರತಿಷ್ಠಾಪಿಸಿದನಂತೆ. ಕಾಲಗತಿಯಲ್ಲಿ ಆಲಯವು ಜೀರ್ಣವಾಯಿತು. ಆ ನಂತರದಲ್ಲಿ ಈ ಪರಿಸರದಲ್ಲಿ ಒಬ್ಬ ನಿಷಾದನು ಸಾಮೆಯ ವ್ಯವಸಾಯವನ್ನು ಆರಂಭಿಸಿದನು. ಬೆಳೆಯ ಒಂದು ಭಾಗವನ್ನು ಆತನು ಒಬ್ಬ ಬ್ರಾಹ್ಮಣನಿಗೆ ಸ್ವಾಮಿಯ ನಿವೇದನೆಗೆ ಏರ್ಪಾಡು ಮಾಡಲು ನೀಡುತ್ತಿದ್ದನು. ಒಂದು ದಿನ ಹೊಲವನ್ನು ತನ್ನ [illegible] ಹುಡುಕಲು [illegible] ಹೊತ್ತಿನ ಬಳಿಕ [illegible] ಈ ಮಧ್ಯದಲ್ಲಿ ಹುಡುಗನು [illegible]

ನಿಷಾದನಿಗೆ ಕೋಪ ಬಂದು ಹೊಡೆಯಲು ಹೋದನು. ಒಂದು ಅಶರೀರವಾಣಿಯು ಅವನನ್ನು ತಡೆದು ಹುಡುಗನು ನಿವೇದನೆ ಮಾಡಿದ್ದು ಆಗಿದೆಯೆಂದು ನುಡಿಯಿತು. ಒಂದೊಮ್ಮೆ ನಿಷಾದನು ತನ್ನ ಬೆಳೆಯನ್ನು ಒಂದು ಬಿಳಿಯ ವರಾಹವು ಹಾಳುಮಾಡುತ್ತಿರುವುದನ್ನು ಕಂಡನು ಕೋಪದಿಂದ ಅದನ್ನು ಅಟ್ಟಿಸಿಕೊಂಡು ಹೋದಾಗ ಅದು ಒಂದು ಹುತ್ತವನ್ನು ಹೊಕ್ಕು ಮರೆಯಾಯಿತು. ಹುತ್ತದೊಳಗಿನಿಂದ ಸ್ವಾಮಿಯು ಅವನಿಗೆ ಹೇಳಿದ್ದು ಹೀಗೆ ''ನೀನು ನನ್ನನ್ನು ನೋಡಲಾರೆ. ಮೊದಲಿಗೆ ಬ್ರಹ್ಮನಿಂದ ಸ್ಥಾಪಿತವಾದ ನನ್ನ ವಿಗ್ರಹ ಈ ಹುತ್ತದಲ್ಲಿದೆ. ಅದನ್ನು ಹೊರತೆಗೆದು ಸೂಕ್ತವಾಗಿ ಪ್ರತಿಷ್ಠಾಪಿಸಲು ರಾಜನಿಗೆ ತಿಳಿಸು.'' ನಿಷಾದನು ಹಾಗೆಯೇ ಮಾಡಿದನು.

ಭವಿಷ್ಯೋತ್ತರ ಪುರಾಣವು ಮತ್ತೊಂದು ಕಥೆಯನ್ನು ಹೇಳುತ್ತದೆ. ಅದರ ಪ್ರಕಾರ ತಲೆಗೆ ಪೆಟ್ಟು ತಿಂದ ಶ್ರೀನಿವಾಸನು ದಿನವೆಲ್ಲ ಔಷಧ ಮೂಲಿಕೆಗಳಿಗಾಗಿ ಹುಡುಕಾಡಿದನು. ದಾರಿಯಲ್ಲಿ ಆತನಿಗೆ ಶ್ವೇತವರಾಹನು ಕಾಣಿಸಿದಾಗ ಇಬ್ಬರೂ ಮತ್ತೊಬ್ಬರು ಯಾರೆಂಬ ಯೋಚನೆಗೆ ಗುರಿಯಾದರು. ಕೊನೆಗೆ ಒಂದು ತೀರ್ಮಾನಕ್ಕೆ ಬಂದರು. ಸ್ವಾಮಿ ಪುಷ್ಕರಿಣಿಯ ಪಶ್ಚಿಮದಲ್ಲಿ ಈಗಾಗಲೇ ನೆಲೆಸಿದ್ದಂತಹ ವರಾಹಸ್ವಾಮಿಯು ಶ್ರೀನಿವಾಸನಿಗೆ ನೂರು ಪಾದದ ಭೂಮಿಯನ್ನು ನೀಡುತ್ತ ಹಾಲು, ಸಾಮೆಯ ಆಹಾರವನ್ನು ಹಂಚಿಕೊಳ್ಳುವುದಂದಾಯಿತು. ಶ್ರೀನಿವಾಸನನ್ನು ನೋಡಿಕೊಳ್ಳಲು ವಕುಳ ಮಾಲಿಕೆ ಎಂಬಾಕೆಯನ್ನೂ ವರಾಹಸ್ವಾಮಿ ಏರ್ಪಡಿಸಿದನು. ಈ ವಕುಳಮಾಲಿಕೆಯೇ ಹಿಂದಿನ ಜನ್ಮದಲ್ಲಿ ಯಶೋದೆಯಾಗಿದ್ದಳು. [illegible] ಕೃಷ್ಣನಿಗೆ ಕೇಳಿದಳು. ನಿನ್ನ [illegible] ನೋಡಲಿಲ್ಲ. ನೋಡ [illegible]






ತಿರುಮಲರಾಯ ಮಂಟಪ

ಮಾಲಿಕೆಯಾಗಿ ಜನನ ಪಡೆದು ಕೃಷ್ಣನನ್ನು ಯಶೋದೆಯು ನೋಡಿಕೊಳ್ಳುತ್ತಿದ್ದಂತೆಯೇ ತಾನು ಶ್ರೀನಿವಾಸನನ್ನು ನೋಡಿಕೊಳ್ಳ ತೊಡಗಿದಳು.

ಪುರಾಣಗಳು ಹೇಳುವಂತೆ ವರಾಹ ಸ್ವಾಮಿಯು ಶ್ರೀ ವೆಂಕಟೇಶ್ವರ ಸ್ವಾಮಿಗಿಂತ ಮೊದಲಿನಿಂದ ಶೇಷಾಚಲದಲ್ಲಿ ನೆಲೆಸಿದ್ದಾನೆ. ಹಾಗಾಗಿ ಇದು ವರಾಹಕ್ಷೇತ್ರ. ವೆಂಕಟೇಶ್ವರ ಸ್ವಾಮಿ ಮತ್ತು ಬ್ರಹ್ಮ ಇಬ್ಬರೂ ಸೇರಿ ಭಕ್ತರು ವೆಂಕಟೇಶ್ವರನನ್ನು ನೋಡುವ ಮೊದಲು ವರಾಹಸ್ವಾಮಿಯನ್ನು ನೋಡ ಬೇಕೆಂದು ಕಟ್ಟಳೆ ಮಾಡಿದರು.

ಶಾಸನಗಳಲ್ಲಿ ಈ ವರಾಹಸ್ವಾಮಿಯನ್ನು ಜ್ಞಾನಪ್ಪಿರಾನ್ ಎಂದು ಕರೆಯಲಾಗಿದೆ. (ಜ್ಞಾನ ಪ್ರದಾತ) ಪ್ರತಿ ಬ್ರಹ್ಮೋತ್ಸವದ ಎರಡನೆಯ ದಿನದಂದು ಈ ದೇವರಿಗೆ ಅನ್ನಪ್ರಸಾದ ನೈವೇದ್ಯ ಮಾಡಬೇಕು ಎಂದು ವಿವರಿಸುವ ಕ್ರಿ.ಶ. 1380 ರ ಶಾಸನದಲ್ಲಿ ಈ ದೇವರ ಪ್ರಥಮ ಉಲ್ಲೇಖವಾಗಿರುವುದನ್ನು ಕಾಣಬಹುದು (I - 84) ಆ ಕಾಲಕ್ಕೆ ಈ ದೇವರು ಎಂತಹ ಯಾವ ಆಲಯದಲ್ಲಿದ್ದರು ಎಂಬುದು ತಿಳಿದು ಬರುವುದಿಲ್ಲ. ಸಾಳುವ ತಿಮ್ಮರಾಜನು ಕ್ರಿ.ಶ. 1481 ರಲ್ಲಿ ಈ ದೇವರಿಗೆ ಎರಡು ನಿವೇದನೆಗಳ ಏರ್ಪಾಡು ಮಾಡಿದನು (ತಿ.ತಿ. 196) ಕ್ರಿ.ಶ. 1519 ರ ಒಂದು ದಾಖಲೆಯು ಬ್ರಹ್ಮೋತ್ಸವದ ದಿನಗಳಲ್ಲಿ ಐದು ದಿನಗಳ ಕಾಲ ಶ್ರೀ ವೆಂಕಟೇಶ್ವರಸ್ವಾಮಿಯು ವರಾಹಸ್ವಾಮಿ ಆಲಯದಲ್ಲಿ ಕುಳಿತು ತಿರುಮಂಗೈ ಆಳ್ವಾರರ ತಿರುವೊಳಿಯ ಪಾರಾಯಣವನ್ನು ಕೇಳುತ್ತಿದ್ದನೆಂದು ಹೇಳುವುದು (ತಿ.ತಿ. 38). ಕ್ರಿ.ಶ. 1539 ರಲ್ಲಿ ಪ್ರತಿಮಾರ್ಗಳಿ ಮಾಸದ ಧನುರ್ಮಾಸೋತ್ಸವದ ಮೂವತ್ತು ದಿನಗಳಲ್ಲಿ ಜ್ಞಾನಪ್ಪಿರಾನ್ ದೇವರಿಗೆ ಅನ್ನಪ್ರಸಾದ ನೈವೇದ್ಯ ಮಾಡಲು ಒಬ್ಬಾನೊಬ್ಬ ವೆಂಕಟತುರ್ರೈವರ್ ಎಂಬುವವನು ಏರ್ಪಾಡು ಮಾಡಿದನು. ಕ್ರಿ.ಶ. 1535 ರಲ್ಲಿ ವರಾಹ ಸ್ವಾಮಿ ಗುಡಿಯ ಪ್ರಾಕಾರ ಗೋಡೆಗಳನ್ನು ಪ್ರದಕ್ಷಿಣ ಮಂಟಪವನ್ನು ಅನ್ನಮಯ್ಯಂಗಾರ್ಯನ ಮಗ ತಾಳ್ಳಪಾಕ ತಿರುಮಲಯ್ಯಂಗಾರ್ ನಿರ್ಮಾಣ ಮಾಡಿದನು (IV - 40,41) ಕ್ರಿ.ಶ. 1546 ರಲ್ಲಿ ತಾಳ್ಳಪಾಕ ತಿರುವೆಂಗಳನಾಥನು ಚಿತ್ತಿರೈ ಮಾಸದ ಶ್ರವಣ ನಕ್ಷತ್ರ ದಿನದಂದು ನಿವೇದನೆಗೂ, ಆಣಿ ಮಾಸದ ಹಾಗೂ ಮಾಸಿ ಮಾಸದ ಶುದ್ಧ ಚತುರ್ದಶಿಯ ದಿನಗಳಲ್ಲಿ, ವೈಶಾಖ ಮಾಸದ ವಿಶಾಖ ನಕ್ಷತ್ರದ ದಿನಗಳಲ್ಲಿ, ಸಮರ್ಪಣೆಗಳಿಗೂ ಏರ್ಪಡಿಸಿದನು. (V - 73) ಕ್ರಿ.ಶ. 1543 ರಲ್ಲಿ ಮುಕ್ಕೋಟಿ ದ್ವಾದಶಿಯ ದಿನಗಳಲ್ಲಿ ಸ್ವಾಮಿ ಪುಷ್ಕರಿಣಿಯಲ್ಲಿ ಚಕ್ರಸ್ನಾನವಾಗುವಾಗ ಈ ದೇವರಿಗೆ ನಿವೇದನೆ ಸಲ್ಲಿಸಲು ಏರ್ಪಡಿಸಲಾಯಿತು - (V - 5). ಕ್ರಿ.ಶ. 1684 ರಷ್ಟು ಈಚೆಗೂ ಕೂಡ ರಾಜಾ ಶ್ರೀ ಶಿವರಾಜ ರಾಮಚಂದ್ರ ಈ ದೇವರಿಗೆ ಒಂದು ತಳಿಗೆ ಅನ್ನಪ್ರಸಾದ ನಿವೇದನೆಗೆ ಏರ್ಪಾಡು ಮಾಡಿದನು (VI - 24).

(ಮುಂದಿನ ತಿಂಗಳು
- ಗರ್ಭಗುಡಿಯವಿಗ್ರಹ)



2002 ಜೂನ್ ತಿಂಗಳಿನಲ್ಲಿ ಶ್ರೀವಾರಿಸೇವೆ

ಜೂನ್ ತಿಂಗಳಿನಲ್ಲಿ ತಿರುಮಲೆಯಲ್ಲಿ ಶ್ರೀವಾರಿಸೇವೆಯಲ್ಲಿ 4700 ಮಂದಿಗೂ ಹೆಚ್ಚು ಮಂದಿ ಸ್ವಯಂ ತೃಪ್ತಿಯಿಂದ ಸ್ವಯಂ ಪ್ರೇರಣೆಯಿಂದ ಸ್ವಯಮಾಸಕ್ತಿಯಿಂದ ಶ್ರೀವಾರಿಸೇವೆಯಲ್ಲಿ ಭಾಗವಹಿಸಿ ಸ್ವಾಮಿ ಸೇವೆಯ ಧನ್ಯಭಾವ ಪಡೆದರು. ಇವರಲ್ಲಿ 2000 ಕ್ಕಿಂತ ಹೆಚ್ಚು ಮಂದಿ ಮಹಿಳೆಯರು. ಒಬ್ಬೊರದೂ ಒಂದೊಂದು ರೀತಿಯ ಅನುಭವವಾಗಿದ್ದಿತು. ಅವರುಗಳು ತಮ್ಮ ಸೇವೆಯಬಗ್ಗೆ, ತಿರುಮಲೆಯಪ್ಪನ ಬಗ್ಗೆ, ಇಲ್ಲಿನ ತಮ್ಮ ಸೇವೆಗೆಂದು ತಿ. ತಿ. ದೇವಸ್ಥಾನಗಳು ಕಲ್ಪಿಸಿದ ಸೌಲಭ್ಯಗಳ ಬಗ್ಗೆ ತಿಳಿಸಿದರು.

ಗುಂಟೂರು ಜಿಲ್ಲೆಯ ಶ್ರೀಮತಿ ಎಂ. ಲಕ್ಷ್ಮಿ ಮಾತನಾಡುತ್ತ ಶ್ರೀವಾರಿಸೇವೆ ಬಹಳ ಬೇಕಾಗಿರುವ ಭಕ್ತರಿಗೆ ಮಾಡಲು [illegible] ಅವಕಾಶವೆಂದು [illegible] ವರ್ಷ ವಯಸ್ಸಿನ [illegible] ಮಾತನಾಡುತ್ತ [illegible], ಮುಕ್ತಿ ಲಾಭವಾಗುವು [illegible].

ಶ್ರೀಮತಿ [illegible] ಮಾತನಾಡುತ್ತ ಪಾಪಹಾರಕವಾದದ್ದು ಶ್ರೀವಾರಿ [illegible] ತಾವು ಸೇವೆ ಮಾಡುವುದೇ ಅಲ್ಲದೆ ತಮ್ಮ [illegible] ಇನ್ನಿತರರನ್ನೂ ಈ ಸೇವೆಯಲ್ಲಿ ಭಾಗವಹಿಸಲು ಮುಂದುಂಬಿಸುವುದಾಗಿಯೂ, ಅವರೆಲ್ಲರನ್ನು ಶ್ರೀವಾರಿಸೇವೆಗೆ ಕಳುಹಿಸುವುದಾಗಿಯೂ ತಿಳಿಸಿದರು.

ಶ್ರೀವಾರಿ ಸೇವೆಯ ಸ್ವಯಂಸೇವಕರನ್ನು ಸಪ್ತಗಿರಿ ಮಾತನಾಡಿಸುತ್ತಿದ್ದಾಗ ತಿ.ತಿ.ದೇ. ಪೌರಸಂಬಂಧಾಧಿಕಾರಿ ಡಾ|| ರಂಗಾರಾವ್, ಸಹಾಯಕ ಪೌರಸಂಬಂಧಾಧಿಕಾರಿ ಶ್ರೀ ಚಂದ್ರಶೇಖರನಾಯುಡು ಅಲ್ಲಿಗೆ ಬಂದರು. ಡಾ|| ರಂಗಾರಾವು ಅವರು ಸ್ವಯಂ ಸೇವಕರೊಡನೆ ಮಾತನಾಡುತ್ತ ಸ್ವಾಮಿಯ ಸೇವೆಯನ್ನು ಈ ರೀತಿಯಲ್ಲಿ ಮಾಡುತ್ತಿರುವ ಶ್ರೀವಾರಿಸೇವಕರಿಗೆ ತಕ್ಕಂತಹ ವಸತಿಯನ್ನೂ, ಉಚಿತ ವೈದ್ಯಕೀಯ ಸಹಾಯವನ್ನೂ ಒದಗಿಸುವುದಾಗಿಯೂ ಮತ್ತಷ್ಟು ಉತ್ಸಾಹದಿಂದ ಸೇವೆಯನ್ನು ಮುಂದುವರಿಸಬೇಕೆಂದು ವಿನಂತಿಸಿದರು.

ಶ್ರೀಮತಿ ಸೀತಾರಾಮಮ್ಮನವರು ಮಾತನಾಡುತ್ತ ಶ್ರೀವಾರಿಸೇವಕರು ತಾವೆಲ್ಲ ಬಹಳ ಶಿಸ್ತಿನಿಂದ ಸೇವೆ ಮಾಡುತ್ತಿರುವುದಾಗಿಯೂ, ಮಾಡುತ್ತಿರುವ ಕೆಲಸ ಯಾವುದೇ ಆಗಲೀ ಯಾತ್ರಿಕರಿಗೆ ಅದರಿಂದ ನೆರವು ದೊರೆಯುವಂತೆ ಆಗುವುದೇ ತಮ್ಮ ಸೇವೆಯ ಗರಿಷ್ಠ ಉದ್ದೇಶ ಎಂದೂ ನುಡಿದರು. ಅನ್ನದಾನಂ ಕ್ಯಾಂಟೀನಿನಲ್ಲಿ ಕೆಲಸಮಾಡುವ ಶ್ರೀವಾರಿ ಸೇವಕರು ಆಹಾರ ಪದಾರ್ಥಗಳನ್ನು ವ್ಯರ್ಥವಾಗದಂತೆ ಬಡಿಸುವಲ್ಲಿ ಒಂದು ಶಿಸ್ತನ್ನು ಅನುಸರಿಸಬೇಕೆಂದು ಅವರು ಸೂಚಿಸಿದರು.

ಶ್ರೀವಾರಿ ಸೇವೆಯನ್ನು ಕೈಗೊಂಡವರಲ್ಲಿ ಬಹುಮಂದಿ ಸ್ವಾಮಿಯ ಆಶೀರ್ವಾದ ದಯೆ, ಸ್ವಾಮಿಯ ಅನುಗ್ರಹಗಳಿಗಾಗಿ ಸೇವೆ ಮಾಡುತ್ತಿರುವುದಾಗಿ ಹೇಳಿದರು. ವೈಕುಂಠವನ್ನು





ಬಿಟ್ಟು ಸ್ವಾಮಿ ತಿರುಮಲೆಗೆ ಬಂದದ್ದೇ ಮಾನವರಿಂದ ಸೇವೆ ಪಡೆದು ಅವರನ್ನು ಅನುಗ್ರಹಿಸಲಿಕ್ಕೆ, ಎಲ್ಲರೂ ನೇರವಾಗಿ ಅವನ ಸೇವೆ ಮಾಡಲಾಗದ್ದರಿಂದ ಅವನ ಸೇವಕರ, ಭಕ್ತರ ಸೇವೆ ಮಾಡುತ್ತಿರುವುದಾಗಿ ಅಭಿಪ್ರಾಯ ವ್ಯಕ್ತಪಡಿಸಿದರು.

ಗನ್ನವರದ ಶ್ರೀಮತಿ ಲಕ್ಷ್ಮಿ ಮಾತನಾಡುತ್ತ ಇದು ನೇರ ಮಾಧವನ ಸೇವೆಯೇ ಎಂದು ತಾವು ಭಾವಿಸುವುದಾಗಿ ಹೇಳಿದರು. ಈ ಹಿಂದೆಯೂ ತಾವು ಈ ಸೇವೆಯಲ್ಲಿ ಭಾಗವಹಿಸಿದ್ದುದಾಗಿಯೂ, ಆಂಧ್ರದಲ್ಲಿ ತೂಫಾನು - ನೆರೆಹಾವಳಿ ಉಂಟಾದಾಗ ಶ್ರೀ ವೆಂಕಟೇಶ್ವರಸ್ವಾಮಿಯ ಅನುಗ್ರಹವಾಗಿ, ಅನ್ನದಾನದ ಕ್ಯಾಂಟೀನ್‌ನ ಪುಳಿಯೋಗರೆ ಪೊಟ್ಟಣಗಳು ಸಂತ್ರಸ್ತ ಜನರೆಡೆಗೆ ಹರಿದಾಗ ಅವುಗಳನ್ನು ಸಿದ್ಧಪಡಿಸುವ ಕಾರ್ಯದಲ್ಲಿ ತಾವೂ ಇತರ ಶ್ರೀವಾರಿಸೇವಕರೂ ಕೆಲಸಮಾಡಿದ ಪರಿಯನ್ನು ವಿವರಿಸಿದರು.

ಚಿತ್ತೂರಿಗೆ ಸೇರಿದ ದೊರೆಸ್ವಾಮಿನಾಯುಡು ಮಾತನಾಡುತ್ತ ತಾವು ಶ್ರೀವಾರಿಸೇವೆಯಲ್ಲಿ ಪಾಲುಗೊಂಡದ್ದೇ ಒಂದು ಆನಂದಕಾರಕ ಸಂಗತಿಯೆಂದೂ, ಎಲ್ಲರಿಗೂ ಈ ಅದೃಷ್ಟ ಸಿಗುವಂತೆ ಆಗಬೇಕು ಎಂದೂ ನುಡಿದರು.

ಕನಕಪುರದ ರಾಮರಾಯರು ಒಂದು ಹೆಜ್ಜೆ ಮುಂದುವರಿದು ಸ್ವಾಮಿಯ ಸೇವೆಯನ್ನು ಈ ರೂಪದಲ್ಲಿ ಮಾಡುವ ಭಾಗ್ಯ ದೊರೆತದ್ದೇ ಒಂದು ಪುಣ್ಯವೆಂದರು. ಮುಂದುವರೆದು - ಇದರಿಂದ ಬೇರೆ ಸತ್ಫಲ ದೊರೆಯುತ್ತದೆ. ಅಹಂ ದೂರತಸ್ತೇ ಪದಾಂಭೋಜ ಯುಗ್ಮಪ್ರಣಾಮೇಚ್ಛ ಯಾಗಚ್ಛ ಸೇವಾಂ ಕರೋಮಿ - ಈ ಅಲ್ಪ ಸೇವೆಯ ಫಲವಾಗಿ ನಿತ್ಯಸೇವೆ ಮಾಡುವುದೇ ಫಲವಾಗಿ ಮೊದಲು ದಕ್ಕುತ್ತದೆ. ಇದು ಕೋಟಿ ಕೋಟ್ಯಧಿಕಂ ಫಲಂ ಆಗುವ ಸಮಾಚಾರ ಎಂದರು.

ಸ್ವಲ್ಪ ಸೇವೆಯಿಂದ ಜಾಮಿತೀಯ ಪ್ರಮಾಣದಲ್ಲಿ ಫಲವಧಿಕವಾಗಿ ದೊರೆಯು ವಂಥ ಸ್ವಾಮಿ ಭಕ್ತರ, ಭಾಗವತರ ಸೇವೆ ಅತ್ಯುತ್ತಮ ಸೇವೆಯೆಂಬುದಾಗಿ ಅವರ ಅಭಿಪ್ರಾಯ ★

2002 ಜೂನ್ ತಿಂಗಳಿನಲ್ಲಿ ಶ್ರೀವಾರಿಸೇವೆ ಮಾಡಿದ ತಂಡಗಳು

ಕ್ರ.ಸ.	ತಂಡದ ಹೆಸರು	ಊರು	ಸಂಖ್ಯೆ
1.	ನಗರ ಉತ್ಸವಸಮಿತಿ	ಗುಂತಕಲ್	7 ಮಂದಿ
2.	ಶ್ರೀವಾರಿ ಸೇವಾಸಮಿತಿ	ಚೆನ್ನೈ	33 ಮಂದಿ
3.	ಅಯ್ಯಪ್ಪಸೇವಾ ಸಂಘಂ	ಚೆನ್ನೈ	9 ಮಂದಿ
4.	ವಿಕಾಸ ತರಂಗಿಣಿ	ಗುಂಟೂರು	100 ಮಂದಿ
5.	ಸದ್ಗುರು ಸೇವಾಸಮಿತಿ	ಚೆನ್ನೈ	11 ಮಂದಿ
6.	ಶ್ರೀಪಾದರಾಯ ಭಜನಮಂಡಳಿ	ಚಿತ್ತೂರು	15 ಮಂದಿ
7.	ಎಂ. ನಾಗೂರಯ್ಯ ಬೃಂದ	ತಾಡಪತ್ರಿ	14 ಮಂದಿ
8.	ಶ್ರೀಗೀತಾ ಸೇವಾಸಮಾಜಂ	ನಾರಾಯಣವನಂ	14 ಮಂದಿ
9.	ಶ್ರೀನಿವಾಸ ಸೇವಾಸಮಿತಿ	ಚೆನ್ನೈ	60 ಮಂದಿ
10.	ಎಂ.ವಿ.ಎಸ್.ಆರ್. ಗುಪ್ತ	ರಂಗಪೇಟೆ	11 ಮಂದಿ
11.	ವಿಕಾಸ ತರಂಗಿಣಿ	ಗುಂಟೂರು	88 ಮಂದಿ
12.	ಶಿವಕಾಶಿ ಸೇವೆಯವರು	ಶಿವಕಾಶಿ	40 ಮಂದಿ
13.	ವೆಂಕಟೇಶ್ವರ ರಾವ್ ವೃಂದ	ಮಚಿಲೀಪಟ್ನ	11 ಮಂದಿ
14.	ಪಿ. ರಾಮಚಂದ್ರ ಮೂರ್ತಿ	ಏಲೂರು	39 ಮಂದಿ
15.	ಕೆ. ಅಪ್ಪರಾವ್	ಕಾಪವರಂ	25 ಮಂದಿ
16.	ವೆಂಕಟೇಶ್ವರ ಪಾದುಕಾಸೇವಾಸಮಿತಿ	ಶ್ರೀರಂಗಂ	12 ಮಂದಿ
17.	ಶ್ರೀವಾರಿಸೇವಾಸಮಿತಿ	ಚೆನ್ನೈ	44 ಮಂದಿ
18.	ಶ್ರೀ ಜಯೇಂದ್ರ ಸರಸ್ವತಿ ವಿಜ್ಞಾನಕಲಾಶಾಲೆ	ತಿರುವಳ್ಳೂರು	11 ಮಂದಿ
19.	ಶ್ರೀ ವೆಂಕಟೇಶ್ವರಸ್ವಾಮಿ ಭಕ್ತಸಮಾಜಂ	ವಿಶಾಖಪಟ್ನಂ	10 ಮಂದಿ
20.	ಟಿ. ಶ್ರೀನಿವಾಸ ಮಿತ್ರ ವೃಂದ	ಕೊಯಮತ್ತೂರು	20 ಮಂದಿ
21.	ಶ್ರೀನಿವಾಸ ಸೇವಾಭಾರತಿ	ಒಂಗೋಲು	13 ಮಂದಿ
22.	ಶ್ರೀವಾರಿ ಸೇವಾಸಮಿತಿ	ಚೆನ್ನೈ	16 ಮಂದಿ
23.	ಎಂ. ರಂಗಮ್ಮ ಬೃಂಧ	ಗುಂಟೂರು	8 ಮಂದಿ
24.	ಶ್ರೀವಾರಿ ಸೇವಾಸಮಿತಿ	ಚೆನ್ನೈ	30 ಮಂದಿ

ತಿರುಚಾನೂರಿನಲ್ಲಿ ವೈಭವದ ತೆಪ್ಪೋತ್ಸವಗಳು

ತಿರುಚಾನೂರು ಶ್ರೀ ಪದ್ಮಾವತೀ ಅಮ್ಮನವರ ದೇವಾಲಯದ ಪುಷ್ಕರಿಣಿಯ ಹೆಸರು ಪದ್ಮಸರೋವರ. ಇಲ್ಲಿನ ಪದ್ಮದಲ್ಲಿ ತೋರಿಬಂದದ್ದರಿಂದ ಆಕೆಯನ್ನು ಪದ್ಮಾವತಿ ಎಂದರು. ಈ ಪದ್ಮಸರೋವರದಲ್ಲಿ ವರ್ಷಕ್ಕೆ ಒಮ್ಮೆ ತೆಪ್ಪೋತ್ಸವಗಳು ವೈಭವದಿಂದ ನಡೆಯುತ್ತವೆ. ಎದುರಿಗೆ ಸೂರ್ಯ ದೇವಾಲಯ. ಪಶ್ಚಿಮಾಭಿಮುಖವಾಗಿ ಪೂರ್ವದಿಂದ ಹುಟ್ಟಿಬಂದು ಪದ್ಮ ಸರೋವರವನ್ನು ನೋಡುತ್ತ ನಿಂತ ಸೂರ್ಯನಾರಾಯಣಸ್ವಾಮಿ. ಮಹಂತರ ಕಾಲದಲ್ಲಿ ಈ ಆಲಯವನ್ನೂ, ಈ ಸರೋವರವನ್ನೂ ಪುನರುಜ್ಜೀವನಗೊಳಿಸಿ ಪ್ಲವದ ವಿಹರಣೆಗೆ ಹೆಚ್ಚಿನ ಅನುಕೂಲ ಮಾಡಲಾಯಿತು. ಇಲ್ಲಿನ ವಾರ್ಷಿಕೋತ್ಸವ ವಾದ ತೆಪ್ಪೋತ್ಸವದಲ್ಲಿ ಮೊದಲೆರಡು ದಿನ ಇತರ ದೇವತೆಗಳೂ - ಎಂದರೆ ಕೃಷ್ಣ, ಶ್ರೀನಿವಾಸರೂ ಬರುತ್ತಾರೆ.

ಮೊದಲನೆಯದಿನ ಜೂನ್ 20 ರಂದು ಶ್ರೀಕೃಷ್ಣಸ್ವಾಮಿಯು ರುಕ್ಮಿಣೀ ಸತ್ಯಭಾಮೆಯರ ಕೂಡ ಅಲಂಕರಣಗೊಂಡ ತೆಪ್ಪದಲ್ಲಿ ವಿಹಾರ ನಡೆಸಿದರು. ಸಮಾಲಂಕರಣಗೊಂಡ ಉತ್ಸವ ವಿಗ್ರಹಗಳನ್ನು ಊರ ಮೆರವಣಿಗೆಯಲ್ಲಿ ಸರೋವರದ ಬಳಿಗೆ ಕರೆತಂದು ತೆಪ್ಪವನ್ನೇರಿಸ ಲಾಯಿತು. ವಿದ್ಯುದ್ದೀಪಾಲಂಕಾರದ ವಿವಿಧ ವರ್ಣದ ಅಲಂಕಾರಗಳ ನಡುವೆ ಕಂಗಳಿಗೆ ಅತ್ಯುತ್ತಮ ಆಕರ್ಷಣಕೇಂದ್ರವಾಗಿ ಪದ್ಮಸರೋವರದಲ್ಲಿನ ಪ್ಲವ ಹಾಗೂ ಅದರಲ್ಲಿನ ದೇವರು ಕಂಡುಬಂದರೆಂದರೆ ಆಶ್ಚರ್ಯವಿಲ್ಲ. ತಿರುಚಾನೂರು ನಗರವೇ ತೆಪ್ಪೋತ್ಸವಗಳಿಗಾಗಿ ಅಲಂಕಾರಗೊಂಡು ಪವಿತ್ರವಾತಾವರಣ ಉಂಟಾಗಿದ್ದು ತಿರುಚಾನೂರು ತಿರುಪತಿ ಗಳಿಂದಲೇ ಅಲ್ಲದೆ ಸುತ್ತಮುತ್ತಲ ಊರು ಗಳಿಂದಲೂ ಜನರು ಆಗಮಿಸಿ ತೆಪ್ಪೋತ್ಸವಗಳನ್ನು ತೃಪ್ತಿಯಿಂದ ಕಂಡು ಆನಂದಿಸಿದರು.

21 ರಂದು ಗುರುವಾರ ಸಂಜೆ ಶ್ರೀ ಭೂದೇವೀ ಸಮೇತ ಶ್ರೀ ಸುಂದರರಾಜಸ್ವಾಮಿ ತೆಪ್ಪೋತ್ಸವ ನಡೆಯಿತು. ಪ್ರತ್ಯೇಕ ಪೂಜೆ ಅಭಿಷೇಕಗಳ ತರುವಾಯ ವಿಗ್ರಹಗಳಿಗೆ ವಿಶೇಷ ಅಲಂಕಾರಗಳನ್ನು ಸಮರ್ಪಿಸಿ, ಊರ ಮೆರವಣಿಗೆಯಲ್ಲಿ ತೆಪ್ಪಕ್ಕೊಳಕ್ಕೆ - ಪದ್ಮಸರಕ್ಕೆ ಕರೆದೊಯ್ಯಲಾಯಿತು. ಮೆಟ್ಟಿಲ ಮೇಲೆ ನೆರೆದು ಕುಳಿತು ಜನ ಗೋವಿಂದ ಗೋವಿಂದ ಎಂಬ ಘೋಷ ಮಾಡುತ್ತಿರಲು ಅಮ್ಮನವರುಗಳನ್ನೂ ಸ್ವಾಮಿಯನ್ನೂ ತೆಪ್ಪವನ್ನೇರಿಸಲಾಯಿತು.

ವಾರ್ತಾಲಹರಿ

ಊರೆಲ್ಲ ಕೊಳದ ಇಕ್ಕೆಲದಲ್ಲಿ - ನಾಲ್ಕು ದಿಕ್ಕಿನಲ್ಲಿ ನೆರೆದು ನಿಂತಂತೆ - ತೆಪ್ಪವು ವೇದಮಂತ್ರಗಳ ನಡುವೆ ಮಂಗಳ ವಾದ್ಯಗಳ ಘೋಷದ ನಡುವೆ ಪುಷ್ಕರಿಣಿಯಲ್ಲಿ ದೇವರುಗಳನ್ನು ಹೊತ್ತು ಸುತ್ತು ಹಾಕಿತು. ಭಕ್ತರು ಆನಂದದಿಂದ ವೀಕ್ಷಿಸಿ ಅನುಗ್ರಹೀತರಾದ ಧನ್ಯಭಾವ ವ್ಯಕ್ತಪಡಿಸಿದರು.

ಜೂನ್ 22 ರಂದು ಶನಿವಾರ ಶ್ರೀ ಪದ್ಮಾವತೀ ಅಮ್ಮನವರ ತೆಪ್ಪೋತ್ಸವ 23, 24 ರಂದು ಕೂಡ ಶ್ರೀ ಪದ್ಮಾವತೀ ಅಮ್ಮನವರ ಪ್ಲವೋತ್ಸವವೇ. ಶನಿ, ಭಾನು, ಸೋಮ ವಾರಗಳ ಸಂಧ್ಯಾಕಾಲದಲ್ಲಿ ಊರೆಲ್ಲ ಪದ್ಮಸರೋವರದ ಸುತ್ತ ನೆರೆದಂತೆ ಕಂಡುಬರುತ್ತಿದ್ದಿತು. ಮಧ್ಯಾಹ್ನ ಮೂರುಗಂಟೆಗೆ ಪ್ರತ್ಯೇಕ ಪೂಜೆ ಅಭಿಷೇಕಗಳು ನಡೆದವು. ವಾಹನ ಮಂಟಪದಲ್ಲಿ ಅಲಂಕಾರ ಸಮರ್ಪಣೆಯಾಯಿತು. ನಂತರ ತೆಪ್ಪೋತ್ಸವ ನಡೆಯಿತು. ಜೂನ್ 23 ರಂದು ಅಮ್ಮನವರ ತೆಪ್ಪೋತ್ಸವಕ್ಕೆ ಹೆಚ್ಚಿನ ಮಂದಿ ಸೇರಿದ್ದರು. ಜೂನ್ 24 ರಂದು ಅಮ್ಮನವರು ಗರುಡವಾಹನದಲ್ಲಿ ತೆಪ್ಪಕ್ಕೊಳಕ್ಕೆ ಆಗಮಿಸಿದರು. ಗರುಡವಾಹನೆ ಯಾದ ತಾಯಿ ಪದ್ಮಸರೋವರ ದಲ್ಲಿ ಭಕ್ತರಿಗೆ ಆನಂದವನ್ನುಂಟುಮಾಡುತ್ತ ತೆಪ್ಪದಲ್ಲಿ ವಿಹರಿಸುವಲ್ಲಿ ಭಕ್ತರ ಆನಂದದ ಅಲೆಗಳು ತುಂಬಿ ಹರಿದವು.

ತೆಪ್ಪೋತ್ಸವಗಳಲ್ಲಿ ತಿ.ತಿ.ದೇ. ಕಾರ್ಯ ನಿರ್ವಹಣಾಧಿಕಾರಿ ಡಾ॥ ಪಿ. ಕೃಷ್ಣಯ್ಯ, ಸ್ಥಳೀಯ ಆಲಯ ಡೆ.ಇ.ಓ. ಶ್ರೀರಂಗನಾಥಾ ಚಾರಿ ಮೊದಲಾದವರು ಭಾಗವಹಿಸಿದ್ದರು.

ಯಶಸ್ವಿ ಅಭಿಧ್ಯೇಕ ಅಭಿಷೇಕ

ಜೇಷ್ಠ ಮಾಸದಲ್ಲಿ ತಿರುಮಲೆಯ ಶ್ರೀ ವೆಂಕಟೇಶ್ವರಸ್ವಾಮಿ ಆಲಯದಲ್ಲಿ ಶ್ರೀ ವೆಂಕಟೇಶ್ವರಸ್ವಾಮಿಯ ಉತ್ಸವಮೂರ್ತಿಗಳ ಅಭಿಧೇಯಕ ಅಭಿಷೇಕವು ದಿನಾಂಕ 22-6-2002 ರಿಂದ 24-6-22 ರವರೆಗೆ ಯಶಸ್ವಿಯಾಗಿ ನಡೆದವು.

22-6-2002 ರಂದು ಶನಿವಾರ ಶ್ರೀಮಲೆಯಪ್ಪಸ್ವಾಮಿಗೆ ಆಲಯದ ಸಂಪಂಗಿ ಪ್ರದಕ್ಷಿಣಾಪಥದಲ್ಲಿನ ಕಲ್ಯಾಣೋತ್ಸವ ಮಂಟಪದಲ್ಲಿ ವಿಶೇಷ ಪೂಜೆ, ಆರಾಧನೆಗಳ ನಂತರ ವಜ್ರಕವಚವನ್ನು ಸಮರ್ಪಿಸಲಾಯಿತು.

23-6-2002 ರಂದು ಭಾನುವಾರ ಸ್ವಾಮಿಗೆ ಮುತ್ತಂಗಿ ಸಮರ್ಪಣೆ ನಡೆಯಿತು. 24-6-2002 ರಂದು ಸೋಮವಾರ ಸ್ವಾಮಿಗೆ ಚಿನ್ನದ ಕವಚ ಸಮರ್ಪಣೆ ಆಯಿತು.

ಪ್ರತಿದಿನವೂ ಸ್ವಾಮಿಯನ್ನು ಸಹಸ್ರ ದೀಪಾಲಂಕಾರ ಸೇವೆಯಲ್ಲಿ ಉಯ್ಯಾಲೆ ಸೇವೆಯ ನಂತರ ಊರ ಮೆರವಣಿಗೆಯಲ್ಲಿ ರಥಬೀದಿಗಳಲ್ಲಿ ಕರೆತಂದು ಆಲಯವನ್ನು ಸೇರಿಸಲಾಯಿತು.

ಮೆಟ್ಟಿಲ ಹಾದಿಯಲ್ಲಿ ವಿಶ್ರಾಂತಿ ಭವನ

ಆಂಧ್ರಪ್ರದೇಶದ ಮುಜರಾಯಿ ಇಲಾಖಾ ಮಂತ್ರಿ ಶ್ರೀ ದಂಡು ಶಿವರಾಮರಾಜು ಅವರು ಜುಲೈ 5 ರಂದು ಶುಕ್ರವಾರ ಮಧ್ಯಾಹ್ನ ಮೆಟ್ಟಿಲಹಾದಿಯಲ್ಲಿ ತಿ. ತಿ. ದೇವಸ್ಥಾನಗಳು ನಿರ್ಮಿಸಿದ ಎರಡು ಯಾತ್ರಿಕ ವಿಶ್ರಾಂತಿ ಭವನಗಳನ್ನು ಉದ್ಘಾಟಿಸಿದರು.

ಬೆಟ್ಟದ ಹಾದಿಯಲ್ಲಿ ಶ್ರೀ ನರಸಿಂಹ ಸ್ವಾಮಿ ಗುಡಿಯ ಬಳಿ ಸರಿಸುಮಾರು ಹದಿನೈದು ಲಕ್ಷ ರೂಪಾಯಿಗಳ ವೆಚ್ಚದಲ್ಲಿ ನೀಲಾದ್ರಿ ಎಂಬ ಹೆಸರನ್ನು ಪಡೆದ ಯಾತ್ರಿಕ ವಿಶ್ರಾಂತಿ ಭವನ



ತಿರುಮಲೆ ತಿರುಪತಿ ದೇವಸ್ಥಾನಗಳು - ತಿರುಪತಿ

ಶ್ರೀ ಪದ್ಮಾವತೀ ಅಮ್ಮನವರ ದೇವಾಲಯ - ತಿರುಚಾನೂರು

ಆರ್ಜಿತ ಸೇವೆಗಳು - ಉತ್ಸವಗಳು



ಸೇವೆಗಳು	ದಿನ/ಕಾಲ	ಪ್ರವೇಶಾವಕಾಶ	ಶುಲ್ಕ
ದೈನಂದಿನ ಸೇವೆಗಳು			
ಸುಪ್ರಭಾತ	ಪ್ರಾ - 5-00 ಗಂ||	1	ರೂ. 10-00
	ಶುಕ್ರವಾರ ಪ್ರಾ - 4-00 ಗಂ||	1	ರೂ. 10-00
ಸಹಸ್ರನಾಮಾರ್ಚನೆ	ಪ್ರಾ - 5-30 ಗಂ||	1	ರೂ. 10-00
	ಶುಕ್ರವಾರ ಪ್ರಾ - 4-30 ಗಂ||	1	ರೂ. 10-00
ಪದ್ಮಾವತೀ ಪರಿಣಯ (ಕಲ್ಯಾಣೋತ್ಸವ)	ಪ್ರಾ - 10-30 ಗಂ||	5	ರೂ. 500-00
ಊಂಜಲ್ ಸೇವೆ	ಸಂ|| 5-00 ಗಂ||	2	ರೂ. 116-00
(ಡೋಲೋತ್ಸವ)	ಶುಕ್ರವಾರ ಸಂ|| 6-00 ಗಂ||	2	ರೂ. 116-00
ಏಕಾಂತ ಸೇವೆ	ರಾತ್ರಿ 9-00 ಗಂ||	1	ರೂ. 10-00
ಕುಂಕುಮಾರ್ಚನೆ	ಸರ್ವದರ್ಶನ ಸಮಯದಲ್ಲಿ	2	ರೂ. 200-00
ವಾಹನಸೇವೆಗಳು			
ಗಜವಾಹನ	ಕಲ್ಯಾಣೋತ್ಸವದ ನಂತರ	1	ರೂ. 100-00
ಗರುಡವಾಹನ	ಕಲ್ಯಾಣೋತ್ಸವದ ನಂತರ	1	ರೂ. 100-00
ವಿಶೇಷ ಪ್ರವೇಶ	ಸರ್ವದರ್ಶನ ಸಮಯದಲ್ಲಿ	1	ರೂ. 10-00
ಶೀಘ್ರ ದರ್ಶನ	ಸರ್ವದರ್ಶನ ಸಮಯದಲ್ಲಿ	1	ರೂ. 20-00
ವಾರ ಸೇವೆಗಳು			
ಅಷ್ಟದಳಪಾದ ಪದ್ಮಾರಾಧನೆ	ಸೋಮವಾರ ಪ್ರಾ|| 6-30 ಗಂ||	5	ರೂ. 1500-00
(ಮೂಲವರಿಗೆ) (ಬಹುಮಾನ - 10 ಗ್ರಾಂನ ಬೆಳ್ಳಿಯ ಪದಕ - ಉತ್ತರೀಯ, ಕುಪ್ಪಸದ ಕಣ)			
ತಿರುಪ್ಪಾವಡಾ	ಗುರುವಾರ ಪ್ರಾ|| 7-00 ಗಂ||	5	ರೂ. 3000-00
ಬಹುಮಾನ - ಒಂದು ಉತ್ತರೀಯ, ಕುಪ್ಪಸದ ಕಣ, 20 ಲಾಡು, 20 ವಡೆ, 20 ಅಪ್ಪ, 20 ದೋಸೆ.			
ಅಭಿಷೇಕ (ಮೂಲವರಿಗೆ)	ಶುಕ್ರವಾರ ಪ್ರಾ|| 6-00 ಗಂ||	1	ರೂ. 200-00
ಶ್ರೀ ಲಕ್ಷ್ಮಿಪೂಜೆ	ಶುಕ್ರವಾರ ಪ್ರಾ|| 9-00 ಗಂ|| (ಬಹುಮಾನ - ಕುಪ್ಪಸದ ಕಣ)	1	ರೂ. 116-00
ಶಾಶ್ವತ ಸೇವೆಗಳು :			
ಶಾಶ್ವತ ನಿತ್ಯ ಅರ್ಚನೆ			ರೂ. 1650-00
ಶಾಶ್ವತ ಊಂಜಲ್ ಸೇವೆ			ರೂ. 1116-00

ಶಾಶ್ವತ ಸೇವೆ ಮಾಡಿಸುವ ಗೃಹಸ್ಥರಿಗೆ ಅವರ ಪೂರ್ಣ ಜೀವಮಾನ ಕಾಲದಲ್ಲಿ ವರ್ಷಕ್ಕೆ ಒಮ್ಮೆ ಸೇವೆಯನ್ನು ದರ್ಶಿಸುವ ಅವಕಾಶ ನೀಡಲಾಗುವುದು

ಪ್ರಸಾದ ನಿವೇದನೆಗಳು :

ದಧ್ಯೋದನ	ರೂ.	250-00
ಪುಳಿಯೋಗರೆ	ರೂ.	275-00
ಪೊಂಗಲ್	ರೂ.	325-00
ಸಕ್ಕರೆ ಪೊಂಗಲಿ	ರೂ.	375-00
ಶಾಕಂಬಾತ್	ರೂ.	400-00
[illegible]	ರೂ.	650-00
ದೋಸೆ	ರೂ.	200-00

ಸೂಚನೆ :

ಕಲ್ಯಾಣೋತ್ಸವ, ಊಂಜಲ್‌ಸೇವೆ - ಮತ್ತಿತರ ವಾರಸೇವೆಗಳಿಗೆ ಸೇವಾ ಟಿಕೆಟ್‌ಗಳು ಲಭ್ಯವಿರುವಂತೆ ಅಡ್ವಾನ್ಸ್ ರಿಸರ್ವೇಷನ್ ಅವಕಾಶವಿದೆ. ತಿರುಪ್ಪಾವಡ ಮತ್ತಿತರ ಪ್ರಸಾದ ನಿವೇದನೆಗಳಿಗೆ ಕನಿಷ್ಟ ಒಂದು ದಿನ ಮೊದಲಿಗೇ ಶುಲ್ಕ ನೀಡಬೇಕು. ಮೇಲಿನ ಸೇವಾ ಕಾಲಗಳಲ್ಲಿ ಏನು ವ್ಯತ್ಯಾಸವಾಗಬಹುದು.

ಶ್ರೀ ಪದ್ಮಾವತೀ ಅಮ್ಮನವರ ದೇವಾಲಯ - ನಿತ್ಯ ಅನ್ನಪ್ರಸಾದ –ಯೋಜನೆ

ತಿರುಚಾನೂರು ಆಲಯವನ್ನು ಸಂದರ್ಶಿಸುವ ಯಾತ್ರಿಕರಿಗೆ ನಿರಂತರವಾಗಿ ದೇವರ ಪ್ರಸಾದ ವಿತರಣೆಯ ಉದ್ದೇಶದಿಂದ ಈ ಯೋಜನೆಯು ಆರಂಭವಾಗಿದೆ.

ಈ ಯೋಜನೆಗೆ ಕನಿಷ್ಟ ಪಕ್ಷ ರೂ. 1000-00 ನೀಡಬಹುದು. ರೂ. 1000-00 ಹಾಗೂ ಅದರ ಗುಣಕಗಳಲ್ಲಿ ಹಣವನ್ನು - ಕಾರ್ಯನಿರ್ವಹಣಾಧಿಕಾರಿ, ತಿ.ತಿ.ದೇ., ತಿರುಪತಿ - ಇವರ ಹೆಸರಿನಲ್ಲಿ ಪಡೆದ ಡಿ. ಡಿ. ಯನ್ನು ಎ.ಇ.ಓ. ಶ್ರೀ ತಿರುಚಾನೂರು ಆಲಯ, ತಿರುಚಾನೂರು - ಎ.ಪಿ. ಇವರಿಗೆ ಕಳುಹಿಸಬೇಕು.

ಭಕ್ತರಲ್ಲಿ ಒಂದು ವಿನಂತಿ

ಶ್ರೀ ಪದ್ಮಾವತೀ ಅಮ್ಮನವರ ವಿಮಾನ ಗೋಪುರದ ಚಿನ್ನದ ಮುಲಾಮೀಕರಣ

ತಿರುಚಾನೂರು ಶ್ರೀ ಪದ್ಮಾವತೀ ಅಮ್ಮನವರ ಆಲಯದ ವಿಮಾನ ಗೋಪುರವನ್ನೂ ಪ್ರಾಕಾರದೊಳಗಿನ ಗೋಡೆಗಳನ್ನೂ ಆರು ಕೋಟಿ ರೂಪಾಯಿಗಳ ವೆಚ್ಚದಲ್ಲಿ ಚಿನ್ನದ ಮುಲಾಮುಗೊಳಿಸುವ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗಿದೆ.

ಈ ಒಂದು ಘನವಾದ ಕೈಂಕರ್ಯದಲ್ಲಿ ಪಾಲು ಪಡೆಯ ಬಯಸುವ ಭಕ್ತಾದಿಗಳು ತಮ್ಮ ವಂತಿಗೆಯನ್ನು - **ಕಾರ್ಯನಿರ್ವಹಣಾಧಿಕಾರಿ ತಿ.ತಿ.ದೇ., ತಿರುಪತಿ** - ಇವರ ಹೆಸರಿನಲ್ಲಿ ಪಡೆದ ಡಿ.ಡಿ.ಯನ್ನು - ಅಸಿಸ್ಟೆಂಟ್ ಎಕ್ಸಿಕ್ಯುಟಿವ್ ಆಫೀಸರ್, ಶ್ರೀ ಪದ್ಮಾವತೀ ಅಮ್ಮನವರ ಆಲಯ, ತಿರುಚಾನೂರು - ಇವರಿಗೆ ಕಳುಹಿಸಿಕೊಡಬೇಕೆಂದು ವಿನಂತಿಸಲಾಗಿದೆ.

ಕಾರ್ಯನಿರ್ವಹಣಾಧಿಕಾರಿ,

ತಿ. ತಿ. ದೇ., ತಿರುಪತಿ.

ಯಾತ್ರಿಕ ಭಕ್ತರಲ್ಲಿ.....

ವಿನಂತಿ

"ಡಯಲ್ - ಯುವರ್ ಇ.ಓ."

ತಿರುಮಲೆಯಲ್ಲಿ ತಮ್ಮ ಅನುಭವಕ್ಕೆ ಬಂದ ಕುಂದು ಕೊರತೆಗಳ ಬಗ್ಗೆ ಹೆಚ್ಚು - ಕಡಿಮೆಗಳ ಬಗ್ಗೆ - ಸಲಹೆ ಸೂಚನೆಗಳನ್ನು ಕಾರ್ಯನಿರ್ವಹಣಾಧಿಕಾರಿಯವರಿಗೆ ನೇರವಾಗಿ ನೀಡಬಹುದು. ಅದಕ್ಕಾಗಿ ಪ್ರತಿ ಶುಕ್ರವಾರ ಬೆಳಗ್ಗೆ 8-30 ರಿಂದ 9-00 ಗಂಟೆಯವರೆಗೆ ತಾವು ತಿ.ತಿ.ದೇ. ಕಾರ್ಯನಿರ್ವಹಣಾಧಿಕಾರಿಗಳೊಡನೆ ದೂರವಾಣಿಯಲ್ಲಿಮಾತನಾಡಬಹುದು.

ದೂರವಾಣಿ ಸಂಖ್ಯೆ - 08574-77261.

ತಿರುಮಲೆ ತಿರುಪತಿ ದೇವಸ್ಥಾನಗಳು, ತಿರುಪತಿ.

ಸಪ್ತಗಿರಿ

ಚಂದಾ ನಾಮಾಂಕನ ಪತ್ರ

1. ಹೆಸರು
ಹಾಗೂ
ವಿಳಾಸ
(ಬಿಡಿ ಬಿಡಿಯಾಗಿ ದೊಡ್ಡಕ್ಷರದಲ್ಲಿರಲಿ)
2. ಭಾಷೆ : ○ಕನ್ನಡ ○ತೆಲುಗು ○ತಮಿಳು ○ಆಂಗ್ಲ ○ಹಿಂದಿ
3. ಚಂದಾ ಅವಧಿ : ವಾರ್ಷಿಕ ಚಂದಾ / ಆಜೀವ ಚಂದಾ
4. ಚಂದಾ ನವೀಕರಣ : ಚಂದಾ ಸಂಖ್ಯೆ : ಭಾಷೆ :
5. ಸಲ್ಲಿಸಿದ ಹಣ : ರೂ.
6. ಸಲ್ಲಿಸಿದ ರೀತಿ :
ನಗದು (ಎಂ.ಆರ್.ಟಿ.) ರಸೀದಿ ನಂ. ದಿನಾಂಕ :
ಎಂ. ಓ. ಕೂಪನ್ ನಂ. ದಿನಾಂಕ :
ಡಿ. ಡಿ. ನಂ. ದಿನಾಂಕ :
ಸ್ಥಳ :
ದಿನಾಂಕ : ಚಂದಾದಾರರ ಸಹಿ

ಸೂಚನೆ : ವಾರ್ಷಿಕ ಚಂದಾ 60 ರೂಪಾಯಿ. ಆಜೀವ ಚಂದಾ 500 ರೂಪಾಯಿ ಮಾತ್ರ. ಈ ಪತ್ರವನ್ನು ತುಂಬಿಸಿ ಸಂಪಾದಕರು, ಸಪ್ತಗಿರಿ, ತಿ.ತಿ.ದೇ., ತಿರುಪತಿ - 517507 ಇವರಿಗೆ ಕಳುಹಿಸಿ.

ಮೊದಲನೆಯದಾದರೆ ಎರಡನೆಯದು ಏಳನೇ ಮೈಲಿಯ ಆಂಜನೇಯಸ್ವಾಮಿ ಗುಡಿಯ ಬಳಿ ಹದಿನೇಳು ಲಕ್ಷ ರೂಪಾಯಿಗಳ ಅಂದಾಜಿನಲ್ಲಿ ನಿರ್ಮಿತವಾಗಿರುವ ಅಂಜನಾದ್ರಿ ವಿಶ್ರಾಂತಿ ಗೃಹ. (ಮತ್ತೂ ಒಂದು ವಿಶ್ರಾಂತಿ ಗೃಹ - ಅಲಿಪಿರಿಯ ಮೂಲಕ ಗಾಳಿಗೋಪುರವನ್ನು ಸೇರುವ ಸ್ಥಳದಲ್ಲಿನಿರ್ಮಾಣದಲ್ಲಿದ್ದುಇದೂ ಸಹ ಶೀಘ್ರದಲ್ಲಿಯೇ ಯಾತ್ರಿಕರ ಬಳಕೆಗೆ ಬರುವುದು.)

ಯಾತ್ರಿಕ ವಿಶ್ರಾಂತಿ ಭವನಗಳ ಉದ್ಘಾಟನೆಯಲ್ಲಿ ತಿ.ತಿ.ದೇ. ಕಾರ್ಯ ನಿರ್ವಹಣಾಧಿಕಾರಿ ಡಾ|| ಪಿ. ಕೃಷ್ಣಯ್ಯ, ಸಂಯುಕ್ತ ಕಾರ್ಯನಿರ್ವಹಣಾಧಿಕಾರಿ ಶ್ರೀ ಆರ್. ಅಪ್ಪಾರಾವು, ಚೀಫ್ ಇಂಜನೀಯರ್ ಶ್ರೀ ಸತ್ಯನಾರಾಯಣರಾಜು ಮೊದಲಾದವರು ಪಾಲುಗೊಂಡಿದ್ದರು.

ತಿರುಪತಿಯಲ್ಲಿ ಯಾತ್ರಿಕ ವಿಶ್ರಾಂತಿ ಗೃಹ


ತಿರುಪತಿಯ ಅಲಿಪಿರಿಯ ಬಸ್‌ನಿಲ್ದಾಣದಲ್ಲಿ ಯಾತ್ರಿಕರ ಅನುಕೂಲಕ್ಕಾಗಿ ಸಮುದಾಯ ವಿಶ್ರಾಂತಿ ಗೃಹವನ್ನು 27-4-2002 ರಂದು ಆಂಧ್ರಪ್ರದೇಶದ ಮುಖ್ಯಮಂತ್ರಿ ಶ್ರೀ ನಾರಾಚಂದ್ರಬಾಬು ನಾಯುಡು ಅವರು ಉದ್ಘಾಟನೆ ಮಾಡಿದರು.

ಮೂರು ದೊಡ್ಡದೊಡ್ಡ ಹಾಲ್‌ಗಳಿರುವ ಈ ಸಮುದಾಯ ವಿಶ್ರಾಂತಿ ಗೃಹದಲ್ಲಿ ಒಟ್ಟಿಗೆ ಮೂರು ಸಾವಿರ ಮಂದಿಯಿರಬಹುದಾಗಿದೆ. ಒಟ್ಟು ಇಪ್ಪತ್ನಾಲ್ಕು ಸ್ನಾನಗೃಹಗಳು ಅಷ್ಟೇ ಸಂಖ್ಯೆಯ ಶೌಚಗೃಹಗಳು ಇರುವ ಇಲ್ಲಿ ಉಚಿತ ಸುದರ್ಶನ ಟೋಕನ್ ನೀಡುವ ಕೇಂದ್ರವೂ ಇದೆ. ಇಲ್ಲಿ ಯಾತ್ರಿಕರು ತಮ್ಮ ಸಾಮಾನುಗಳನ್ನು ಭದ್ರಪಡಿಸಲು ಲಾಕರ್ ಸೌಲಭ್ಯವನ್ನೂ ಅಲ್ಪೋಪಹಾರದ ಕ್ಯಾಂಟೀನ್ ಸೌಲಭ್ಯವನ್ನೂ ಏರ್ಪಡಿಸಲಾಗುವುದು.

ಯಾತ್ರಿಕರು ಉಚಿತವಾಗಿ ಬಳಸಬಹುದಾದ ಈ ಸಮುದಾಯ ವಿಶ್ರಾಂತಿ ಗೃಹವನ್ನು ಯಾತ್ರಿಕರಿಗಾಗಿ 24 ಗಂಟೆಯೂ ತೆರೆದಿಡಲಾಗುತ್ತದೆ.

★★★★★

Edited and Published on behalf T. T. Devasthanams by Dr. N. S. Ramamuthy and Printed at T. T. D. Press
by I. Parvateeswara Rao, B.A., L.P.T., Manager, T.T.D. Press, Tirupati - 517 507.


SRI BHUDEVI
PILGRIMS FREE AMENITIES COMPLEX
శ్రీ భూదేవి యాత్రికుల ఉచిత వసతి సముదాయము